ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ

ಎಂ.ಫಿಲ್.ಪದವಿಯ ನಿಬಂಧ

# ಎಸ್.ಶಿವಣ್ಣನವರ 'ವೀರಶೈವ ಹಸ್ತಪ್ರತಿ ಪುಷ್ಪಿಕೆಗಳು' ಒಂದು ಅಧ್ಯಯನ

ಸಂಶೋಧನ ವಿದ್ಯಾರ್ಥಿನಿ
ಲೀಲಾವತಿ.ಪಿ.
ನೋಂದಣಿ ಸಂಖ್ಯೆ BMSBKS-00402

ಮಾರ್ಗದರ್ಶಕರು
ಡಾ.ನಾ.ಗೀತಾಚಾರ್ಯ



ಎಂ.ವಿ.ಸೀ.ಸ್ನಾತಕೋತ್ತರ ಸಂಶೋಧನ ಕೇಂದ್ರ
ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ
ಬೆಂಗಳೂರು
೨೦೧೦

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ

ಎಂ.ಫಿಲ್.ಪದವಿಯ ನಿಬಂಧ

# ಎಸ್.ಶಿವಣ್ಣನವರ 'ವೀರಶೈವ ಹಸ್ತಪ್ರತಿ ಪುಷ್ಪಿಕೆಗಳು' ಒಂದು ಅಧ್ಯಯನ

ಸಂಶೋಧನ ವಿದ್ಯಾರ್ಥಿನಿ
ಲೀಲಾವತಿ.ಪಿ.
ನೋಂದಣಿ ಸಂಖ್ಯೆ BMSBKS-00402

ಮಾರ್ಗದರ್ಶಕರು
ಡಾ.ನಾ.ಗೀತಾಚಾರ್ಯ

ಎಂ.ವಿ.ಸೀ.ಸ್ನಾತಕೋತ್ತರ ಸಂಶೋಧನ ಕೇಂದ್ರ
ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ
ಬೆಂಗಳೂರು
೨೦೧೦

## ಅಭ್ಯರ್ಥಿಯ ಪ್ರಮಾಣಪತ್ರ

ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ, ಬೆಂಗಳೂರಿನ ಎಂ.ವಿ.ಸೀ.ಸ್ನಾತಕೋತ್ತರ ಸಂಶೋಧನಾ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ೨೦೦೯-೨೦೧೦ನೇ ಸಾಲಿನ ಎಂ.ಫಿಲ್ ಪದವಿಗಾಗಿ **ಎಸ್.ಶಿವಣ್ಣನವರ 'ವೀರಶೈವ ಹಸ್ತಪ್ರತಿ ಪುಷ್ಪಿಕೆಗಳು'-ಒಂದು ಅಧ್ಯಯನ** ಎಂಬ ನಿಬಂಧವನ್ನು **ಡಾ.ನಾ.ಗೀತಾಚಾರ್ಯ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಸಲ್ಲಿಸುತ್ತಿದ್ದೇನೆ.

ಈ ನಿಬಂಧ ನನ್ನ ಸ್ವಂತ ಬರವಣಿಗೆ ಆಗಿದ್ದು ಇದರ ಯಾವುದೇ ಭಾಗವನ್ನು ಈವರೆಗೆ ಬೇರೆಲ್ಲೂ ಪ್ರಕಟಪಡಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ಸಹಿ/

ಲೀಲಾವತಿ. ಪಿ

(ಲೀಲಾವತಿ.ಪಿ.)

ಸಂಶೋಧನ ವಿದ್ಯಾರ್ಥಿನಿ

ದಿನಾಂಕ : ೦೯|೦೯|೨೦೧೦

ಸ್ಥಳ : ಬೆಂಗಳೂರು

# ಮಾರ್ಗದರ್ಶಕರ ಪ್ರಮಾಣಪತ್ರ

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರಿನ ಎಂ.ವಿ.ಸೀ.ಸ್ನಾತಕೋತ್ತರ ಸಂಶೋಧನ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ೨೦೦೯-೨೦೧೦ ಸಾಲಿನ ಎಂ.ಫಿಲ್. ಪದವಿಗಾಗಿ **ಎಸ್.ಶಿವಣ್ಣನವರ 'ವೀರಶೈವ ಹಸ್ತಪ್ರತಿ ಪುಷ್ಪಿಕೆಗಳು' - ಒಂದು ಅಧ್ಯಯನ** ಎಂಬ ನಿಬಂಧವನ್ನು **ಲೀಲಾವತಿ.ಪಿ.** ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ.

ಈ ನಿಬಂಧವು ವಿದ್ಯಾರ್ಥಿಯ ಸ್ವಂತ ಬರವಣಿಯಾಗಿದ್ದು, ಇದರ ಯಾವುದೇ ಭಾಗವನ್ನು ಈವರೆಗೆ ಬೇರೆಲ್ಲೂ ಪ್ರಕಟಪಡಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ **ಮೂಲಕ ದೃಢೀಕರಿಸುತ್ತೇನೆ.**

ಮಾರ್ಗದರ್ಶಕರು

(ಡಾ.ನಾ.ಗೀತಾಚಾರ್ಯ)

ದಿನಾಂಕ : ೦೯/೦೯/೨೦೧೦
ಸ್ಥಳ : ಬೆಂಗಳೂರು

| ಪರಿವಿಡಿ | ಪುಟಸಂಖ್ಯೆ |
| --- | --- |
| ಅಧ್ಯಾಯ – ೧ : ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ | ೧ – ೫ |
| ಅಧ್ಯಾಯ – ೨ : ಎಸ್.ಶಿವಣ್ಣನವರ ಹಸ್ತಪ್ರತಿ ಸಾಧನೆ | ೬ – ೧೪ |
| ಅಧ್ಯಾಯ – ೩ : ಹಸ್ತಪ್ರತಿ ಅಧ್ಯಯನದ ಚರಿತ್ರೆ | ೧೫ – ೨೩ |
| ಅ : ಗ್ರಂಥಸಂಪಾದನೆ | |
| ಆ : ಹಸ್ತಪ್ರತಿಶಾಸ್ತ್ರ | |
| ಇ : ಹಸ್ತಪ್ರತಿ ಅಧ್ಯಯನ – ಪುಷ್ಪಿಕೆಗಳ ಮಹತ್ವ | |
| ಅಧ್ಯಾಯ – ೪ : ವೀರಶೈವ ಹಸ್ತಪ್ರತಿ ಪುಷ್ಪಿಕೆಗಳ ಸಾಂಸ್ಕೃತಿಕ ಅಂಶಗಳು | ೨೪ – ೮೭ |
| ಅ : ಗ್ರಂಥದಾನ | |
| ಆ : ಲಿಪಿಕಾರರು | |
| ಇ : ಭಾಷೆ | |
| ಈ : ಸಾಮಾಜಿಕತೆ | |
| ಉ : ಧಾರ್ಮಿಕತೆ | |
| ಊ : ಐತಿಹಾಸಿಕತೆ | |
| ಋ : ಸಾಹಿತ್ಯಕ ಅಂಶಗಳು | |
| ಅಧ್ಯಾಯ – ೫ : ಸಮಾರೋಪ | ೮೮ – ೯೦ |
| ಅನುಬಂಧ : ಗ್ರಂಥಋಣ | ೯೧ – ೯೨ |

# ಅಧ್ಯಾಯ – ೧

## ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

**ಅಧ್ಯಯನದ ಉದ್ದೇಶ :–**

ಹಸ್ತಪ್ರತಿ ಅಧ್ಯಯನ ಎಂಬುದು ಇಂದು ದಿನದಿಂದ ದಿನಕ್ಕೆ ತನ್ನ ವಿಸ್ತಾರತೆಯನ್ನು ಪಡೆಯುತ್ತಿರುವುದನ್ನು ನೋಡಬಹುದು. ಇದು ಗ್ರಂಥಸಂಪಾದನೆಯನ್ನು ಒಳಗೊಂಡು ಬಹುಮುಖಿ ಶಿಸ್ತುಗಳನ್ನು ಬಯಸುವಂತಹ ವಿಸ್ತಾರವಾದ ಒಂದು ಅಧ್ಯಯನವಾಗಿದೆ ಹಾಗೂ ಇದು ಗ್ರಂಥಸಂಪಾದನೆ ಮತ್ತು ಹಸ್ತಪ್ರತಿಶಾಸ್ತ್ರಗಳಿಗಿಂತ ಭಿನ್ನವಾದ ಹಾಗೂ ಬೇರೆಯದೇ ಆದ ಅಧ್ಯಯನವಾಗಿದ್ದು, ಗ್ರಂಥಸಂಪಾದನಶಾಸ್ತ್ರವು ಹಸ್ತಪ್ರತಿಶಾಸ್ತ್ರವನ್ನು ಬೆಳೆಸಿದಂತೆ, ಹಸ್ತಪ್ರತಿಶಾಸ್ತ್ರವು ಹಸ್ತಪ್ರತಿ ಅಧ್ಯಯನವನ್ನು ಬೆಳೆಸಿರುವುದನ್ನು ನೋಡಬಹುದು.

ಹಸ್ತಪ್ರತಿಶಾಸ್ತ್ರ ಹಸ್ತಪ್ರತಿಗಳ ಬಗೆಗೆ ಪ್ರಾಥಮಿಕ ತಿಳುವಳಿಕೆಯನ್ನು ನೀಡಿದರೆ ಹಾಗೂ ಹಸ್ತಪ್ರತಿಗಳ ಮಹತ್ವದ ಅರಿವನ್ನು ಮೂಡಿಸಿದರೆ ಗ್ರಂಥಸಂಪಾದನಶಾಸ್ತ್ರ ಹಸ್ತಪ್ರತಿಗಳಿಂದ ಗ್ರಂಥವೊಂದನ್ನು, ಮೂಲಕೃತಿಯನ್ನು ಸಂಪಾದಿಸಬೇಕಾದ ಅಗತ್ಯ ಮತ್ತು ಜವಬ್ದಾರಿಯ ಅರಿವನ್ನು ಮೂಡಿಸುತ್ತದೆ. ಆದರೆ ಹಸ್ತಪ್ರತಿ ಅಧ್ಯಯನ ಇವೆರಡಕ್ಕಿಂತ ಬೇರೆಯಾಗಿದ್ದು, ಇದು ಹಸ್ತಪ್ರತಿಗಳಲ್ಲಿ ಅಡಗಿರುವಂತಹ ಸಾಂಸ್ಕೃತಿಕ ಸಂಪತ್ತನ್ನು, ಜ್ಞಾನಭಂಡಾರವನ್ನು ಪರಿಚಯಿಸುತ್ತದೆ. ಒಟ್ಟಾರೆಯಾಗಿ ಹಸ್ತಪ್ರತಿ ಸಂಸ್ಕೃತಿಯನ್ನು ತಿಳಿಸಿಕೊಡುತ್ತದೆ. ಅಂದರೆ ಇದು ಸಾಹಿತ್ಯ, ಸಮಾಜ, ಭಾಷೆ, ಧರ್ಮ, ಇತಿಹಾಸ, ನಂಬಿಕೆ, ಆಚರಣೆ, ಶಿಕ್ಷಣ ಮುಂತಾದ ಸಾಂಸ್ಕೃತಿಕ ಮಹತ್ವವನ್ನು ತಿಳಿಸಿಕೊಡುತ್ತದೆ.

ಹಸ್ತಪ್ರತಿ ಅಧ್ಯಯನ ಎಂಬುದು ಹಸ್ತಪ್ರತಿಗಳಲ್ಲಿರುವ ಅಪಾರ ವಿಷಯ ಸಾಮಗ್ರಿಗಳನ್ನು, ಮಾಹಿತಿಗಳನ್ನು ಹೊರತೆಗೆದು ಅದರ ಬಗೆಗೆ ಆಧುನಿಕ ಚಿಂತನೆಗೆ ಒಳಪಡಿಸುವುದಾಗಿದೆ. ಇಲ್ಲಿ ಪ್ರಾಚೀನ ನಂಬಿಕೆ, ವಿಚಾರಮೌಲ್ಯಗಳ ಬಗೆಗೆ ಪ್ರೇರೆಪಿಸುವುದು ಇಂದಿನ ಸಂದರ್ಭದಲ್ಲಿ ಪಾರಂಪರಿಕವಾದಂತಹ ಸಾಹಿತ್ಯ, ಸಂಸ್ಕೃತಿಯ ಮೌಲ್ಯಗಳನ್ನು, ಮಹತ್ವಗಳನ್ನು ದಾಖಲಿಸುವುದು ಹಾಗೂ ಸಾಮಾಜಿಕ ವಿಧಿವಿಧಾನಗಳನ್ನು ಗ್ರಹಿಸುವುದು ಹಾಗೂ ಇಂದಿನ ಸಮಾಜಕ್ಕೆ ಪರಿಚಯವಿಲ್ಲದ ಹಿಂದಿನವರ ಅಪೂರ್ವ ಜ್ಞಾನಕ್ಷೇತ್ರಗಳ ಮಾಹಿತಿಗಳನ್ನು ಸಂಗ್ರಹಿಸುವುದು ಪ್ರಮುಖ ಉದ್ದೇಶವಾಗಿದೆ.

ಇಲ್ಲಿ ಇದುವರೆವಿಗೂ ಹಸ್ತಪ್ರತಿಗಳು, ಶಾಸನಗಳು, ದಾಖಲೆ ಸೂಚಿಗಳು ಆಕರಕೋಶಗಳಿದ್ದವು. ಇದರೊಂದಿಗೆ ಹಸ್ತಪ್ರತಿ ಪುಷ್ಪಿಕೆಗಳ ಸಂಗ್ರಹವು ಸಹ

ಆಕರಕೋಶವಾಗಬಲ್ಲದೆಂಬುದನ್ನು ಎಸ್.ಶಿವಣ್ಣನವರ 'ವೀರಶೈವ ಹಸ್ತಪ್ರತಿ ಪುಷ್ಪಿಕೆಗಳು' ಎಂಬ ಕೃತಿಯ ಮೂಲಕ ತಿಳಿದುಕೊಳ್ಳಬಹುದಾಗಿದೆ.

ಇಲ್ಲಿ 'ಪುಷ್ಪಿಕೆಗಳು' ಪ್ರಮುಖವಾದ್ದರಿಂದ ಪುಷ್ಪಿಕೆಗಳ ಮೂಲಕವಾಗಿ ಸಾಂಸ್ಕೃತಿಕ ಮಹತ್ವವನ್ನು ತಿಳಿಯುವುದು ಈ ಪ್ರಬಂಧದ ಉದ್ದೇಶವಾಗಿದೆ.

**ಸ್ವರೂಪ :-**

ಎಸ್.ಶಿವಣ್ಣನವರು ಸಂಪಾದಿಸಿರುವ 'ವೀರಶೈವ ಹಸ್ತಪ್ರತಿ ಪುಷ್ಪಿಕೆಗಳು' ಎಂಬ ಗ್ರಂಥವು ವೀರಶೈವ ಅಧ್ಯಯನ ಸಂಸ್ಥೆ ಶ್ರೀ.ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗದಲ್ಲಿ ಪ್ರಕಟಣೆಯಾಗಿದ್ದು, ಈ ಸಂಸ್ಥೆಯು ಶ್ರೀ.ತೋಂಟದ ಸಿದ್ಧಲಿಂಗ ಶಿವಯೋಗಿಗಳ ಪರಿಶ್ರಮದಿಂದ ಅಸ್ತಿತ್ವಕ್ಕೆ ಬಂದುದ್ದಾಗಿದೆ. ಈ ಸಂಸ್ಥೆಯು ಸಾಹಿತ್ಯ ಕೃತಿಗಳನ್ನು ಸಂಗ್ರಹಿಸುವುದು, ಶೋಧಿಸುವುದು, ಪ್ರಕಟಿಸುವುದು ಮುಂತಾದ ಪ್ರಮುಖ ಧ್ಯೇಯಗಳನ್ನು ಹೊಂದಿದೆ. ಈ ಸಂಸ್ಥೆಯೂ ಪ್ರಕಟಿಸಿದ ವೀರಶೈವ ನೂತನ ಸಾಹಿತ್ಯ ರತ್ನಮಾಲೆಯಲ್ಲಿ ವೀರಶೈವ ಹಸ್ತಪ್ರತಿ ಪುಷ್ಪಿಕೆಗಳು – ಸಂಪುಟ ೧ ಪ್ರಕಟವಾಗಿರುವುದನ್ನು ನೋಡಬಹುದಾಗಿದೆ.

ಇಲ್ಲಿ ಎಸ್.ಶಿವಣ್ಣನವರ ವೀರಶೈವ ಹಸ್ತಪ್ರತಿ ಪುಷ್ಪಿಕೆಗಳಿಗೆ ಸಂಬಂಧಿಸಿದಂತೆ '೫' (ಐದು) ಪ್ರಮುಖ ಅಧ್ಯಾಯಗಳಾಗಿ ಮಾಡಿಕೊಳ್ಳಲಾಗಿದೆ. ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿಯನ್ನು ವಿವರಿಸಲಾಗಿದೆ. ಎರಡನೆಯ ಅಧ್ಯಾಯವಾಗಿ ಎಸ್.ಶಿವಣ್ಣನವರ ಹಸ್ತಪ್ರತಿ ಸಾಧನೆ ಎಂಬುದಾಗಿದ್ದು, ಈ ಅಧ್ಯಾಯದಲ್ಲಿ ಶಿವಣ್ಣನವರ ಜೀವನದ ವಿವರಗಳು ಹಾಗೂ ಹಸ್ತಪ್ರತಿ ಕ್ಷೇತ್ರಕ್ಕೆ ಕೊಟ್ಟ ಕೊಡುಗೆಯನ್ನು ಇವರು ಸಂಪಾದಿಸಿರುವಂತಹ ಕೃತಿಗಳ ಬಗೆಗೆ ವಿವರ ಹಾಗೂ ಪ್ರಬಂಧದಕ್ಕಾಗಿ ತೆಗೆದುಕೊಂಡದಂತಹ 'ವೀರಶೈವ ಹಸ್ತಪ್ರತಿ ಪುಷ್ಪಿಕೆಗಳು' ಎಂಬ ಗ್ರಂಥದ ಮಹತ್ವವನ್ನು ವಿವರಿಸಲಾಗುವುದು. ಮೂರನೆಯ ಅಧ್ಯಾಯವಾಗಿ ಹಸ್ತಪ್ರತಿ ಅಧ್ಯಯನದ ಚರಿತ್ರೆಯಾಗಿದ್ದು, ಈ ಅಧ್ಯಾಯದಲ್ಲಿ ಗ್ರಂಥಸಂಪಾದನೆ, ಹಸ್ತಪ್ರತಿಶಾಸ್ತ್ರ, ಹಸ್ತಪ್ರತಿ ಅಧ್ಯಯನ ಎಂದು ಉಪ–ಅಧ್ಯಾಯಗಳಾಗಿ ಮಾಡಿಕೊಳ್ಳಲಾಗಿದ್ದು ಇವುಗಳ ಉಗಮ ಮತ್ತು ವಿಕಾಸವನ್ನು ತಿಳಿಸುವುದರೊಂದಿಗೆ ಇಂದಿನ ಪ್ರಸ್ತುತ ಸಂದರ್ಭದಲ್ಲಿ ಈ ಹಸ್ತಪ್ರತಿ ಅಧ್ಯಯನ ಯಾವ ನಿಟ್ಟಿನಲ್ಲಿ ಸಾಗುತ್ತಿದೆ ಎಂಬುದನ್ನು ತಿಳಿಸಲಾಗಿದೆ ಹಾಗೂ ಪ್ರಮುಖವಾಗಿ ಹಸ್ತಪ್ರತಿ ಅಧ್ಯಯನದಲ್ಲಿ ಪುಷ್ಪಿಕೆಗಳ ಮಹತ್ವವನ್ನು ತಿಳಿಸಿಕೊಡಲಾಗಿದೆ.

ನಾಲ್ಕನೆಯ ಅಧ್ಯಾಯವಾಗಿ 'ವೀರಶೈವ ಹಸ್ತಪ್ರತಿ ಪುಷ್ಪಿಕೆಗಳ ಸಾಂಸ್ಕೃತಿಕ ಅಂಶಗಳು' ಎಂಬುದಾಗಿದ್ದು, ಈ ಅಧ್ಯಾಯದಲ್ಲಿ ಮೊದಲು ಎಸ್.ಶಿವಣ್ಣನವರು ಈ ಗ್ರಂಥದ ಮೊದಲ ಮಾತಿನಲ್ಲಿ

ಕೊಟ್ಟಿರುವ ಕೆಲವು ಮಾಹಿತಿಗಳ ಬಗೆಗೆ ಹೇಳಲಾಗಿದೆ. ನಂತರದಲ್ಲಿ ಎಸ್.ಶಿವಣ್ಣನವರ 'ವೀರಶೈವ ಹಸ್ತಪ್ರತಿ ಪುಷ್ಪಿಕೆಗಳು' ಎಂಬ ಕೃತಿಗೆ ಸಂಬಂಧಿಸಿದಂತೆ ಸಾಂಸ್ಕೃತಿಕ ಅಂಶಗಳಲ್ಲಿ ಲಿಪಿಕಾರರು, ಗ್ರಂಥದಾನ, ಭಾಷೆ, ಸಾಮಾಜಿಕತೆ, ಧಾರ್ಮಿಕತೆ, ಐತಿಹಾಸಿಕಕತೆ ಹಾಗೂ ಸಾಹಿತ್ಯಕ ಸಂಗತಿಗಳು ಎಂದು '೭' ಉಪ ಅಧ್ಯಾಯಗಳಾಗಿ ಮಾಡಿಕೊಳ್ಳಲಾಗಿದೆ.

ಇಲ್ಲಿ ಗ್ರಂಥದಾನ ಎಂಬ ಮೊದಲನೆ ಉಪ ಅಧ್ಯಾಯದಲ್ಲಿ ಗ್ರಂಥವೊಂದನ್ನು ಯಾರು? ಯಾರಿಗೆ? ಏಕೆ? ಪ್ರತಿ ಮಾಡುತ್ತಾರೆ ಎಂಬುದಕ್ಕೆ ದೈವಭಕ್ತಿಗಾಗಿ, ಪ್ರೀತಿಗಾಗಿ, ಜ್ಞಾನಾರ್ಜನೆಗಾಗಿ, ಆಯುರಾರೋಗ್ಯ ಭಾಗ್ಯಕ್ಕಾಗಿ, ಗುರುಭಕ್ತಿಗಾಗಿ, ಪುಣ್ಯಸಂಪಾದನೆಗಾಗಿ ಹೀಗೆ ಕೆಲವು ಕಾರಣಗಳಿಗಾಗಿ ಗ್ರಂಥವನ್ನು ಬರೆಸಿರುವುದನ್ನು ನೋಡಬಹುದಾಗಿದೆ.

ಎರಡನೇ ಉಪ-ಅಧ್ಯಾಯದಲ್ಲಿ ಲಿಪಿಕಾರರಲ್ಲಿ ನಿಯುಕ್ತ ಲಿಪಿಕಾರರು, ವೃತ್ತಿ ಲಿಪಿಕಾರರು, ಹವ್ಯಾಸಿ ಲಿಪಿಕಾರರು ಎಂದು ಹೀಗೆ ಲಿಪಿಕಾರರನ್ನು ವರ್ಗೀಕರಿಸಿಕೊಂಡು ಇವರ ಮನೋಧರ್ಮವನ್ನು ಅಧ್ಯಯನ ಮಾಡುವುದಾಗಿದೆ.

ಮೂರನೇ ಉಪ-ಅಧ್ಯಾಯವಾಗಿ ಭಾಷೆಗೆ ಸಂಬಂಧಿಸಿದಂತೆ ಭಾಷಾ ಬೆಳವಣಿಗೆಗೆ ಅನುಗುಣವಾಗಿ ಭಾಷಿಕ ಬದಲಾವಣೆ ಹೇಗೆ ಆಗಿದೆ ಎಂಬುದು ಹಾಗೂ ಹಸ್ತಪ್ರತಿಗಳಲ್ಲಿ ಲಭ್ಯವಾಗುವ ಆಡು ರೂಪಗಳು ಸಂಸ್ಕೃತಿಯ ಅನೇಕ ಅಂಶಗಳನ್ನು ವಿವರಿಸುವುದನ್ನು ನೋಡಬಹುದಾಗಿದೆ.

ನಾಲ್ಕನೇ ಉಪ-ಅಧ್ಯಾಯದಲ್ಲಿ ಸಾಮಾಜಿಕತೆಯಲ್ಲಿ ಸಾಮಾಜಿಕ ಅಂಶಗಳ ಮೂಲಕ ಒಂದು ಸಮಾಜದ ಜನರ ಸಂಸ್ಕೃತಿಯನ್ನು ನೋಡಬಹುದು. ಇಲ್ಲಿ ಹಸ್ತಪ್ರತಿಗಳ ರಚನೆ ಮತ್ತು ಪ್ರತಿ ಮಾಡುವ ಕಾರ್ಯವು ಮಠಗಳು ಮತ್ತು ಬಸದಿಗಳ ಆಶ್ರಯದಲ್ಲಿ ನಡೆದುಬಂದಿರುವುದನ್ನು ನೋಡಬಹುದು. ಇವು ಅಲ್ಲಿಯ ಜನರಜೀವನ, ಬದುಕಿನ ರೀತಿ-ನೀತಿಯನ್ನು ಪ್ರತಿಬಿಂಬಿಸುತ್ತವೆ ಹಾಗೂ ಇಲ್ಲಿ ವೃತ್ತಿಯ ಮೂಲಕ ಸ್ಥಾನಮಾನ ವ್ಯಕ್ತವಾಗುವಂತಹುದನ್ನು ನೋಡಬಹುದು. ಹಾಗೆಯೇ ವ್ಯಕ್ತಿನಾಮ, ಸ್ಥಳನಾಮ, ಕುಲನಾಮಗಳ ಮೂಲಕವಾಗಿ ಆಯಾ ವೃತ್ತಿಸಂಬಂಧವನ್ನು ಹಾಗೂ ಸಾಮಾಜಿಕ ಸಂಗತಿಯನ್ನು ನೋಡಬಹುದಾಗಿದೆ.

ಐದನೇ ಉಪ-ಅಧ್ಯಾಯದಲ್ಲಿ ಧಾರ್ಮಿಕತೆಯಲ್ಲಿ ಮಠ, ಬಸದಿಗಳ ಹೆಸರುಗಳು ಆ ಕಾಲದ ಧಾರ್ಮಿಕ ವಿಚಾರಗಳನ್ನು ಪುನರಚಿಸಲಿಕ್ಕೆ ನೆರವಾಗುತ್ತದೆ. ಇದರಿಂದ ಭಿನ್ನ ಭಿನ್ನ ಧರ್ಮಗಳು ಭಿನ್ನ ಭಿನ್ನ ಆಚರಣೆಗಳನ್ನು ಹೊಂದಿರುವುದನ್ನು ನೋಡಬಹುದು. ಇದರಿಂದ ಗ್ರಂಥರಚನೆ ಮತ್ತು ಪ್ರತಿ ಮಾಡುವಲ್ಲಿ ಭಿನ್ನ ಮನೋಭಾವಗಳನ್ನು ಕಾಣಬಹುದು. ಗ್ರಂಥದ ಆರಂಭ ಹಾಗೂ ಕೊನೆಯಲ್ಲಿ ಸ್ಮರಿಸುವಂತಹ ದೇವತಾಸ್ತುತಿಗಳು, ದೇವಸ್ಥಾನಗಳು, ಅವರ ನಂಬಿಕೆಗಳು, ಉಡುಗೆ – ತೊಡುಗೆ ಹೀಗೆ ಇವುಗಳ ಅಧ್ಯಯನದಿಂದ ಧಾರ್ಮಿಕ ಅಂಶಗಳನ್ನು ನೋಡಬಹುದಾಗಿದೆ.

ಆರನೇ ಅಧ್ಯಾಯವಾದ ಐತಿಹಾಸಿಕತೆಯಲ್ಲಿಯೂ ಸಹ ಸಾಂಸ್ಕೃತಿಕ ಅಂಶಗಳನ್ನು ನೋಡಬಹುದು. ಇಲ್ಲಿ ಚಕ್ರವರ್ತಿಗಳು, ರಾಜರು ಅಥವಾ ರಾಜ ಸಂಬಂಧಿಕರು ಬರೆದಿರುವಂತಹ ಗ್ರಂಥಗಳು. ಅವರು ಜೀವಸಿದ್ದಂತಹ ಕಾಲ, ಭಾಷೆ ಹಾಗೂ ಅವರ ಗ್ರಂಥ ರಚನೆಗೆ ಕಾರಣವೇನು? ಉದ್ದೇಶವೇನು? ಎಂಬುದನ್ನು ಇತಿಹಾಸದ ಮೂಲಕವಾಗಿ ತಿಳಿದುಕೊಳ್ಳುವುದಾಗಿದೆ.

೭ನೇ ಅಧ್ಯಾಯದಲ್ಲಿ ಸಾಹಿತ್ಯ ಅಂಶಗಳಿಗೆ ಸಂಬಂಧಿಸಿದಂತೆ ಸಾಂಸ್ಕೃತಿಕ ಅಂಶಗಳನ್ನು ನೋಡಬಹುದಾಗಿದೆ. ಕವಿ, ಕೃತಿಗಳನ್ನು ಅಕಾರಾದಿ ರೂಪದಲ್ಲಿ ಕೊಟ್ಟಿದೆ. ಇಲ್ಲಿ ಪ್ರಮುಖ ಕವಿಗಳನ್ನು ಗುರುತಿಸಲಾಗಿದೆ ಹಾಗೂ ಕವಿಗಳ ಕಾಲವನ್ನು ಸಾಹಿತ್ಯ ಕೃತಿಗಳ ಮೂಲಕವಾಗಿ ತಿಳಿದುಕೊಳ್ಳಬಹುದು. ಈ ಸಾಹಿತ್ಯ ಕೃತಿಗಳಲ್ಲಿ ವಚನಕ್ಕೆ ಸಂಬಂಧಿಸಿದ ಕೃತಿಗಳು, ರಗಳೆಗೆ ಸಂಬಂಧಿಸಿದ ಕೃತಿಗಳು, ಚರಿತ್ರೆಗೆ ಸಂಬಂಧಿಸಿದ ಕೃತಿಗಳು, ಲೌಕಿಕ ಕೃತಿಗಳು, ಸಾಂಗತ್ಯಕ್ಕೆ ಸಂಬಂದಿಸಿದ ಕೃತಿಗಳು ಹೀಗೆ ಇನ್ನು ಮುಂತಾದ ಸಾಹಿತ್ಯ ಕೃತಿಗಳ ಉಲ್ಲೇಖವನ್ನು ಈ ಅಧ್ಯಾಯದಲ್ಲಿ ಗುರುತಿಸಬಹುದಾಗಿದೆ.

ಈ ಅಧ್ಯಾಯಗಳಲ್ಲಿ ವ್ಯಕ್ತವಾಗುವ ಮುಖ್ಯ ಸಂಗತಿಗಳನ್ನು ಮತ್ತು ಹಸ್ತಪ್ರತಿ ಅಧ್ಯಯನದ ಹಿನ್ನೆಲೆಯಲ್ಲಿ ವೀರಶೈವ ಹಸ್ತಪ್ರತಿ ಪುಷ್ಪಿಕೆಗಳ ಬಗೆಗಿನ ಮಹತ್ವವನ್ನು ಸಂಕ್ಷಿಪ್ತವಾಗಿ ಇಲ್ಲಿ ವಿವರಿಸಲಾಗಿದೆ.

## ಅಧ್ಯಯನದ ವ್ಯಾಪ್ತಿ :-

ಹಸ್ತಪ್ರತಿಶಾಸ್ತ್ರ ಎಂಬುದು ಎಂಬತ್ತರ ದಶಕದಿಂದ ಇಂದಿನವರೆಗೂ ಕರ್ನಾಟಕದಾದ್ಯಂತ ತನ್ನ ವಿಸ್ತಾರತೆಯನ್ನು ಪಡೆದುಕೊಂಡಿರುವುದನ್ನು ನೋಡಬಹುದು. ಈ ಅಧ್ಯಯನದ ಪ್ರಮುಖ ಚಿಂತಕರಾಗಿ ಪ್ರೊ.ಎಂ.ವಿ.ಸೀತಾರಾಮಯ್ಯನವರು, ಡಾ.ಎಂ.ಎಂ.ಕಲ್ಬುರ್ಗಿ, ಎನ್.ಬಸವಾರಾಧ್ಯರು, ಡಾ.ಟಿ.ವಿ.ವೆಂಕಟಾಚಲಶಾಸ್ತ್ರಿ, ಶ್ರೀ.ಬಿ.ಎಸ್.ಸಣ್ಣಯ್ಯ, ಎಸ್.ಶಿವಣ್ಣನವರು ಎಂದೇ ಗುರುತಿಸಬಹುದು. ಈ ಪ್ರಮುಖ ಮಹಾನ್ ಹಸ್ತಪ್ರತಿ ಚಿಂತಕರನ್ನೇ ಅನುಕರಿಸಿ ಇಂದಿಗೂ ಹಸ್ತಪ್ರತಿಯನ್ನು ಉಳಿಸಿಕೊಂಡು ಅದರ ವಿಸ್ತಾರತೆಗೆ ಶ್ರಮಿಸುತ್ತಿರುವವರೆಂದರೆ ಡಾ.ಎಫ್.ಟಿ.ಹಳ್ಳಿಕೇರಿ, ಡಾ.ವೈ.ಸಿ.ಭಾನುಮತಿ, ಡಾ.ನಾ.ಗೀತಾಚಾರ್ಯ, ಡಾ.ಕೆ.ರವೀಂದ್ರನಾಥ, ಡಾ.ವೀರೇಶ್ ಬಡಿಗೇರ ಇನ್ನು ಮುಂತಾದವರನ್ನು ಗುರುತಿಸಬಹುದಾಗಿದೆ.

ಎಸ್.ಶಿವಣ್ಣನವರು ಹಸ್ತಪ್ರತಿ ಕ್ಷೇತ್ರದಲ್ಲಿ ಕೊಟ್ಟ ಕೊಡುಗೆ ಅಪಾರವಾದುದು. ಇವರು ಅನೇಕ ಕೃತಿಗಳನ್ನು ಸಂಪಾದಿಸಿರುವುದನ್ನು ನೋಡಬಹುದು. ಅದರಲ್ಲಿ ಹಸ್ತಪ್ರತಿಗಳ ಸೂಚಿಸಾಹಿತ್ಯದಲ್ಲಿ ಕರ್ನಾಟಕ ಕವಿಚರಿತ್ರೆಯ ಅನುಕ್ತ ಕೃತಿ, ವೀರಶೈವ ಅಪ್ರಕಟಿತ ಗ್ರಂಥಸೂಚಿ, ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ, ಶ್ರೀಜಗದ್ಗುರು ಮುರುಘರಾಜೇಂದ್ರ ಬೃಹನ್ಮಠದ ಹಸ್ತಪ್ರತಿ ಸೂಚಿ, ವೀರಶೈವ

ಹಸ್ತಪ್ರತಿ ಪುಷ್ಪಿಕೆಗಳು, ಹೀಗೆ ಹಲವು ಕೃತಿಗಳನ್ನು ಸೂಚಿಸಾಹಿತ್ಯದಲ್ಲಿ ಸಂಪಾದಿಸಿರುವುದನ್ನು ನೋಡಬಹುದು.

ಹಾಗೆಯೇ ಸ್ವತಂತ್ರವಾಗಿ ಪ್ರಾಚೀನ ಹಾಗೂ ನಡುಗನ್ನಡ ಕೃತಿಗಳನ್ನು ಸಂಪಾದಿಸಿರುವುದನ್ನು ನೋಡಬಹುದು. ಅದರಲ್ಲಿ ಶಂಕರದೇವ ಕೃತಿ ಶಂಕರದೇವರ ಕಂದಗಳು, ಮುರಿಗೆ ಶಾಂತವೀರಸ್ವಾಮಿಗಳ ಸ್ತೋತ್ರಕಾಂಡ, ಶಂಕರದೇವರ ಸ್ವರ ವಚನಗಳು, ಮುರಿಗೆ ಶಾಂತವೀರಸ್ವಾಮಿಗಳ ಕೃತಿಗಳು, ಮಹಾಂತದೇಶಿಕರ ಬಸವೇಶ್ವರ ಭಕ್ತಿಸಾರ, ಸಿದ್ಧಲಿಂಗ ಸ್ತೋತ್ರ ಪರಿಮಳ, ಯತಿ ಬಸವಲಿಂಗೇಶ ವಿರಚಿತ ಸ್ವರವಚನ ಸಂಪುಟ ೧ ಮತ್ತು ೨ ಹೀಗೆ ಹಲವು ಕೃತಿಗಳನ್ನು ಸಂಪಾದಿಸಿದ್ದಾರೆ.

ಹಾಗೆಯೇ ಇತರರೊಡನೆ ಸೇರಿ ಪಂಚಶತಕ, ಕೆಂಬಾವಿ ಬೋಗಣ್ಣನ ಸಾಂಗತ್ಯ, ಗುರುಭಕ್ತನ ಕಥೆ, ಹಳೆಯ ಗದ್ಯ ಸಾಹಿತ್ಯ, ವಚನ ಸಂಕಲನ ಸಂಪುಟ–೪, ನೀಲಮ್ಮನ ವಚನಗಳು, ತತ್ವಪದಗಳು ಮುಂತಾದ ಕೃತಿಗಳನ್ನೇ ಸಂಪಾದಿಸಿರುವುದನ್ನು ನೋಡಬಹುದು.

ಹೀಗೆ ಎಸ್.ಶಿವಣ್ಣನವರ ಹಸ್ತಪ್ರತಿಯ ಕಾರ್ಯವ್ಯಾಪ್ತಿ ಅಪಾರವಾದುದ್ದಾಗಿದೆ. ಇವರು ಅನೇಕ ಕೃತಿಗಳನ್ನು ಸಂಪಾದಿಸಿರುವುದನ್ನು ಈ ಮೇಲಿನಂತೆ ನೋಡಬಹುದು. ಆದರೆ ಪ್ರಸ್ತುತ ಪ್ರಬಂಧಕ್ಕಾಗಿ ಇವರು ಸೂಚಿಸಾಹಿತ್ಯದಲ್ಲಿ ಸಂಪಾದಿಸಿರುವ 'ವೀರಶೈವ ಹಸ್ತಪ್ರತಿ ಪುಷ್ಪಿಕೆಗಳು ಸಂಪುಟ–೧'ನ್ನು ಮಾತ್ರ ಆಯ್ಕೆ ಮಾಡಿಕೊಂಡಿದ್ದೇನೆ. ಈ ವಿಷಯದಲ್ಲಿ ಪ್ರಮುಖವಾದ ಪುಷ್ಪಿಕೆಗಳ ಬಗೆಗೆ ಹೆಚ್ಚಿನ ಅಂಶಗಳನ್ನು ತಿಳಿದುಕೊಳ್ಳುವುದಾಗಿದೆ ಹಾಗೂ ಈ ಅಧ್ಯಯನದ ಮಿತಿಯ ಕಾರಣದಿಂದ ಶಿವಣ್ಣನವರ ಸಮಗ್ರ ಸಾಹಿತ್ಯ ಸಾಧನೆ ಪ್ರಸ್ತುತ ಅಧ್ಯಯನದ ವ್ಯಾಪ್ತಿಗೆ ಬರುವುದಿಲ್ಲ. ಆದರೂ ಸಂಕ್ಷಿಪ್ತವಾಗಿ ಒಂದು ಅಧ್ಯಾಯದಲ್ಲಿ ಸಂಗ್ರಹಿಸಲಾಗಿದೆ.

# ಅಧ್ಯಾಯ – ೨

## ಎಸ್.ಶಿವಣ್ಣನವರ ಹಸ್ತಪ್ರತಿ ಸಾಧನೆ

ಎಸ್.ಶಿವಣ್ಣನವರ ಬಗೆಗಿನ ವಿವರವನ್ನು '೨' ರೀತಿಯಲ್ಲಿ ವಿಭಾಗಿಸಿಕೊಳ್ಳಬಹುದಾಗಿದೆ.

**೧. ಎಸ್.ಶಿವಣ್ಣನವರ ಜೀವನ :–**

ಗ್ರಂಥಸಂಪಾದನೆ ಹಾಗೂ ಹಸ್ತಪ್ರತಿಕ್ಷೇತ್ರದಲ್ಲಿ ತಮ್ಮ ಜೀವನವನ್ನು ಮೀಸಲಾಗಿಟ್ಟವರೆಂದರೆ ಎಸ್.ಶಿವಣ್ಣನವರೆಂದೇ ಹೇಳಬಹುದು. "ಇವರು ದಿನಾಂಕ:೧–೨–೧೯೪೦ರಲ್ಲಿ ಅತ್ತಿಬೆಲೆಯಲ್ಲಿ ಜನಿಸಿದರು. ಇವರ ತಂದೆ ಗುರುಶಂಕರಪ್ಪ, ತಾಯಿ. ಶಿಡ್ಲಮ್ಮ. ಇವರಿಗೆ ಇಬ್ಬರು ಸಹೋದರರಿದ್ದರು. ಇವರ ಬಾಲ್ಯವಿದ್ಯಾಭ್ಯಾಸ ಹಾಗೂ ಪ್ರೌಢವಿದ್ಯಾಭ್ಯಾಸವನ್ನು ಅತ್ತಿಬೆಲೆಯಲ್ಲಿ ಮುಗಿಸಿ ನಂತರ ಉನ್ನತ ವಿದ್ಯಾಭ್ಯಾಸವನ್ನು ಅಂದರೆ ಬಿ.ಎ ಹಾಗೂ ಎಂ.ಎ ಪದವಿಯನ್ನು ಮೈಸೂರು ವಿಶ್ವವಿದ್ಯಾಲಯದಲ್ಲಿ ಪಡೆದರು."[೧]

"ಇವರು ೧೩–೫–೧೯೭೧ರಲ್ಲಿ ಶೈಲಜ ಎಂಬುವವರನ್ನು ಕನಕಪುರದ ದೇಗುಲಮಠದಲ್ಲಿ ಮದುವೆಯಾಗಿದ್ದು, ಇವರಿಗೆ ಮೂರು ಮಕ್ಕಳಿದ್ದಾರೆ."[೨]

ಇವರು ಪ್ರಾರಂಭದಲ್ಲಿ ಬೆಂಗಳೂರಿನ ರಾಜಾಜಿನಗರದಲ್ಲಿ "ಪ್ರೊ.ಎನ್.ಬಸವಾರಾಧ್ಯರ ಮನೆಯಲ್ಲಿ ಬಾಡಿಗೆಗಿದ್ದರು. ಶಿವಣ್ಣನವರದು ಅತ್ಯಂತ ಶಾಂತ ಹಾಗೂ ಮೃದು ಸ್ವಭಾವದವರಾಗಿದ್ದರು."[೩] ಇವರಿಗೆ ಬೇರೆಯವರು ಮೋಸ ಮಾಡುತ್ತಿದ್ದಾರೆ ಎಂಬುದರ ಬಗ್ಗೆ ಅರಿವೆ ಇರುತ್ತಿರಲಿಲ್ಲ. ಹಾಗೆಯೇ ಯಾವುದೇ ಆಡಂಬರದ ಜೀವನವನ್ನು ಬಯಸುತ್ತಿರಲಿಲ್ಲ. ಹಾಗೆಯೇ ಸಮಾಜದ ಬಗೆಗಿನ ಅರಿವು ಸ್ವಲ್ಪ ಕಡಿಮೆ ಪ್ರಮಾಣದಲ್ಲಿ ಇದ್ದಿತ್ತೆಂಬುದಕ್ಕೆ ಕೆಳಗೆ ಒಂದು ಉದಾಹರಣೆಯ ಮೂಲಕ ನೋಡಬಹುದು.

ಉದಾ: ಇವರ ಮನೆಯಲ್ಲಿ ವಿದ್ಯುತ್ ಕಡಿತವಾಗಿದ್ದು ಅದಕ್ಕೆ ದೂರಿನಪತ್ರ ಕೊಡಬೇಕು ಎನ್ನುವುದು ಸಹ ಗೊತ್ತಾಗದೇ ಪಕ್ಕದ ಮನೆಯವರಿಂದ ತಿಳಿದುಕೊಂಡು ದೂರಿನ ಪತ್ರವನ್ನು ಕೊಟ್ಟರು ಎಂಬ ಸಂಗತಿಯನ್ನು ಅವರ ಧರ್ಮಪತ್ನಿಯವರು ತಿಳಿಸಿದ್ದಾರೆ. ಇವರ ಸಾಹಿತ್ಯಾಸಕ್ತಿಯ ಬಗ್ಗೆ ಹೇಳುವುದಾದರೆ ಇವರಿಗೆ ಚಿಕ್ಕವಯಸ್ಸಿನಿಂದಲೂ ಸಹ ಓದಿನಲ್ಲಿ ಹೆಚ್ಚಿನ ಆಸಕ್ತಿ ಇದ್ದು, ಇವರು ಕಾಲೇಜಿನಲ್ಲಿ ಉಪನ್ಯಾಸಕರಾಗಿ ಹೋಗುವುದಕ್ಕೆ ಇಷ್ಟಪಡದೆ ಸಂಶೋಧನೆಯಲ್ಲಿ ಹೆಚ್ಚಿನ ಆಸಕ್ತಿಯನ್ನು ವಹಿಸಿದರು. ಓಲೆಗರಿಯ ಭಾಷೆಯನ್ನು ಕರಗತ ಮಾಡಿಕೊಂಡರು. ಹಾಗೆ ಮಠಮಾನ್ಯಗಳಲ್ಲಿ ಇರುವಂತಹ ಹಸ್ತಪ್ರತಿಗಳ ಒಂದು ಸೂಚಿಯಾಗಿ ಮಾಡಿದ ಪ್ರಮುಖ ಚಿಂತಕರೆಂದೇ ಹೇಳಬಹುದು.

ಇವರಿಗೆ "ಸಾಹಿತ್ಯದ ಆಸಕ್ತಿ ಎಷ್ಟರಮಟ್ಟಿಗೆ ಇತ್ತೆಂದರೆ ರಾತ್ರಿ ಬೇಗ ಊಟ ಮುಗಿಸಿ ಬೇಗನೆ ಮಲಗಿ ಮಧ್ಯರಾತ್ರಿ ಎದ್ದು ಮುಂಜಾವಿನವರೆವಿಗೂ ಸಾಹಿತ್ಯಾಧ್ಯಯನ ನಡೆಸುತ್ತಿದ್ದರು ಹಾಗೂ ಹೊರಗಡೆ ಹೋದಂತಹ ಸಂದರ್ಭದಲ್ಲಿ ಪುಸ್ತಕವನ್ನು ಜೊತೆಗಿಟ್ಟುಕೊಂಡೇ ಹೋಗುತ್ತಿದ್ದರು ಎಂದು ಹೇಳುವ ಅವರ ಪತ್ನಿಯ ನೆನಪಿನ ಹಿನ್ನೆಲೆಯಲ್ಲಿ ಮಾಹಿತಿಯನ್ನು ಸಂಗ್ರಹಿಸಿಸುವುದರ ಮೂಲಕ ಅವರು ತಮ್ಮ ಜೀವನವನ್ನು ಸಾಹಿತ್ಯಾಧ್ಯಯನಕ್ಕೆ ಮುಡುಪಾಗಿಟ್ಟಿದ್ದನ್ನು ನೋಡಬಹುದು."

ಇವರು ೧೯೭೭ರಿಂದ ಬೆಂಗಳೂರು ವಿಶ್ವವಿದ್ಯಾಲಯ ಕನ್ನಡ ಅಧ್ಯಯನ ಕೇಂದ್ರದಲ್ಲಿ ಹಸ್ತಪ್ರತಿ ಹಾಗೂ ಗ್ರಂಥಸಂಪಾದನೆಗೆ ಸಂಬಂಧಿಸಿದಂತೆ ಸದಾ ಸಂಶೋಧನಾ ಕಾರ್ಯದಲ್ಲಿ ನಿರತರಾಗಿದ್ದರು. ಇವರಿಗೆ ಈ ಹಸ್ತಪ್ರತಿ ವಿಭಾಗ ಕ್ಷೇತ್ರವನ್ನು ಆಯ್ಕೆ ಮಾಡಿಕೊಳ್ಳುವುದಕ್ಕೆ ಡಿ.ಎಲ್.ನರಸಿಂಹಾಚಾರ್, ಡಾ.ಎಂ.ಚಿದಾನಂದಮೂರ್ತಿ ಹಾಗೂ ಪ್ರೊ.ಬಸವಾರಾಧ್ಯರು ಮುಖ್ಯ ಪ್ರೇರಕ ಶಕ್ತಿಯಾಗಿದ್ದರು ಎನ್ನಬಹುದು.

ಇವರು ಕನ್ನಡ ಅಧ್ಯಯನ ಕೇಂದ್ರದ ಹಸ್ತಪ್ರತಿ ವಿಭಾಗದಲ್ಲಿ ಸಂಪಾದಕರಾಗಿ ಕಾರ್ಯ ನಿರ್ವಹಿಸಿ ಸುಮಾರು ೩,೦೦೦ ಹಸ್ತಪ್ರತಿಗಳನ್ನು ಸಂಗ್ರಹಿಸಿದ್ದಾರೆ. ಇವರ ಕಾಲದಲ್ಲಿ ಮುದ್ದಣ್ಣನ ಕೈಬರಹದ ರಾಮಾಶ್ವಮೇಧಂ, ಬಸವಪ್ಪಶಾಸ್ತ್ರೀಗಳ ಕೈ ಬರಹದ ಶಂಕರಶತಕಗಳಂತಹ ಅಮೂಲ್ಯವಾದ ಸ್ವಹಸ್ತಪ್ರತಿಗಳು ಸಂಗ್ರಹವಾಗಿವೆ.

**೨.ಎಸ್.ಶಿವಣ್ಣನವರ ಹಸ್ತಪ್ರತಿ ಸಾಧನೆ :-**

ಇವರು ಗ್ರಂಥಸಂಪಾದನೆಗೆ ಸಂಬಂಧಿಸಿದಂತೆ ಕೃತಿಗಳ ಪೀಠಿಕೆಯಲ್ಲಿ ಯಾರಿಂದ ಹಸ್ತಪ್ರತಿಗಳು ದೊರೆತವೆಂಬ ವಿವರವನ್ನು ಕೊಟ್ಟಿದ್ದಾರೆ. ಹಾಗೆಯೇ ಪ್ರಸ್ತಾವನೆ ಅಥವಾ ಪೀಠಿಕೆಯಲ್ಲಿ ಕವಿಯ ಜೀವನ, ಕಾಲವಿಚಾರ ಹಾಗೂ ಕವಿಯ ಒಟ್ಟು ಕೃತಿಗಳ ವಿವರಗಳನ್ನು ನೀಡಿರುವುದು ಹಾಗೂ ಪ್ರತಿಯೊಂದು ಕೃತಿಯ ಕೊನೆಯಲ್ಲಿ ಕೊಟ್ಟಿರುವ ಅನುಬಂಧಗಳು ಹಾಗೂ ಪರಿಶಿಷ್ಟಗಳು ಮಾಹಿತಿಗಳ ಸಂಗ್ರಹ ಗುಣ ಹಾಗೂ ಸಂಶೋಧಕ ದೃಷ್ಟಿಕೋನವನ್ನು ಸೂಚಿಸುತ್ತದೆ.

ಎಸ್.ಶಿವಣ್ಣನವರ ಗ್ರಂಥ ಸಂಪಾದನೆಯ ಕಾರ್ಯವನ್ನು ಶಿರೂರವರು ಮೊದಲ ನಾಲ್ಕು ರೀತಿಯಲ್ಲಿ ಸೂಚಿಸಿದ್ದಾರೆ. ಇದಕ್ಕೆ ಐದನೇ ವಿಭಾಗವನ್ನು ಸೇರಿಸಬಹುದು.

೧. "ಹಸ್ತಪ್ರತಿಗಳ ಸೂಚಿ ಹಾಗೂ ವರ್ಣನಾತ್ಮಕ ಸೂಚಿಯನ್ನು ವೈಜ್ಞಾನಿಕ ರೀತಿಯಲ್ಲಿ ಸಿದ್ಧಪಡಿಸಿ ಸಂಪಾದಿಸಿರುವುದು.

೨. ಸ್ವತಂತ್ರವಾಗಿ ಪ್ರಾಚೀನ ಹಾಗೂ ನಡುಗನ್ನಡ ಕೃತಿಗಳನ್ನು ಸಂಪಾದಿಸಿರುವುದು

೩. ಇತರರೊಡನೆ ಸೇರಿ ಕೃತಿಗಳನ್ನು ಸಂಪಾದಿಸಿರುವುದು

೪. ಇತರರು ಗ್ರಂಥಸಂಪಾದನಾ ಕಾರ್ಯ ಕೈಗೊಳ್ಳಲು ಹಸ್ತಪ್ರತಿಗಳನ್ನು ಪೂರೈಸಿ ಮಾರ್ಗದರ್ಶನ ನೀಡಿರುವುದು. "[೫]

೫. ಹಸ್ತಪ್ರತಿಶಾಸ್ತ್ರ – ಗ್ರಂಥಸಂಪಾದನೆ ಕುರಿತ ವಿಚಾರ ಪೂರ್ಣ ಲೇಖನಗಳು.

ಇವುಗಳನ್ನು ಹೀಗೆ ಸಂಕ್ಷಿಪ್ತವಾಗಿ ವಿವರಿಸಬಹುದು.

**೧. ಹಸ್ತಪ್ರತಿ ಸೂಚಿ ಹಾಗೂ ವರ್ಣಾನಾತ್ಮಕ ಸೂಚಿ ಕೃತಿಗಳು :–**

ಇವರ ಹಸ್ತಪ್ರತಿ ಸೂಚಿ ಹಾಗೂ ವರ್ಣನಾತ್ಮಕ ಸೂಚಿಯ ಭಾಗದಲ್ಲಿ ಒಟ್ಟಾರೆಯಾಗಿ ೮ ಕೃತಿಗಳನ್ನು ಸಂಪಾದಿಸಿದ್ದಾರೆ. ಇವುಗಳಲ್ಲಿ ಕ್ರಮಸಂಖ್ಯೆ, ಕೃತಿಯ ಹೆಸರು, ಕೃತಿಕಾರ, ಕಾಲ, ಸಂಖ್ಯೆ, ಇತ್ಯಾದಿ ವಿವರಗಳನ್ನು ಒಳಗೊಂಡಿದೆ.

* **ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠದ ಹಸ್ತಪ್ರತಿ ಸೂಚಿ :–** ಇದರಲ್ಲಿ ಕನ್ನಡ, ಸಂಸ್ಕೃತ ಮತ್ತು ಹಿಂದಿ ಭಾಷೆಯಲ್ಲಿನ ಕೃತಿಗಳು ಹಾಗೂ ಕವಿಚರಿತ್ರೆಯಲ್ಲಿ ದೊರೆಯದ ಬಹಳ ಕವಿಗಳ ಕೃತಿಗಳ ಉಲ್ಲೇಖ ಈ ಸೂಚಿಯಲ್ಲಿ ದೊರಕುತ್ತವೆ ಹಾಗೂ ಸೂಚಿಯ ಅನುಬಂಧದಲ್ಲಿ ಪಷ್ಪಿಕೆಗಳು, ಸ್ಥಳ, ಸೂಚಿ, ಮುಂತಾದವುಗಳನ್ನು ನೀಡುವುದರಿಂದ ಸಂಸ್ಕೃತಿಯ ಅಧ್ಯಯನಕ್ಕೆ ಆಕರವಾಗಿ ಬಳಸಿಕೊಳ್ಳಬಹುದು. ಹಾಗೆಯೇ ಶ್ರೀಜಗದ್ಗುರು ತೋಂಟದಾರ್ಯ ಸಂಸ್ಥಾನಮಠದ ಹಸ್ತಪ್ರತಿ ಸೂಚಿಯ ಕೃತಿಯಲ್ಲಿ ಒಟ್ಟು ೧೫೬೭ ಕೃತಿಗಳ ಪರಿಚಯವನ್ನು ಮಾಡಿಕೊಡಲಾಗಿದೆ. ಹಾಗೆಯೇ ಕವಿಚರಿತ್ರೆ ಹಾಗೂ ಸಾಹಿತ್ಯ ಚರಿತ್ರೆಯಲ್ಲಿ ದಾಖಲಾಗದ ಕವಿಗಳ ಉಲ್ಲೇಖವನ್ನು ಪ್ರಥಮಬಾರಿಗೆ ಈ ಸೂಚಿಯಲ್ಲಿ ದಾಖಲಾಗಿದೆ.

- **ಹಸ್ತಪ್ರತಿ ಸೂಚಿ:–** ಕೃತಿಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಹಸ್ತಪ್ರತಿ ಸಂಗ್ರಹಾಲಯದಲ್ಲಿದ್ದ ೫೦೦ ಓಲೆ ಹಾಗೂ ಕಾಗದದ ಕಟ್ಟುಗಳಿದ್ದ ವಿವರಗಳಿವೆ. ಕನ್ನಡ ಕೃತಿಗಳ ಸಂಖ್ಯೆ ೮೪೭, ಕನ್ನಡ ಲಿಪಿಯಲ್ಲಿರುವ ಸಂಸ್ಕೃತ, ತೆಲುಗು, ತಮಿಳು, ಪ್ರಾಕೃತ ಭಾಷೆಯಲ್ಲಿನ ಕೃತಿಗಳ ಸಂಗ್ರಹವನ್ನು ನೋಡಬಹುದು.
- **'ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ :–** ಸಂಪುಟದಲ್ಲಿ ವರ್ಣನಾತ್ಮಕ ಸೂಚಿಯು ಕರ್ತೃ, ಕೃತಿ, ಕಾಲ, ಭಾಷೆ, ಲಿಪಿ, ಪತ್ರಸಂಖ್ಯೆ, ಪತ್ರದ ಒಂದು ಮಗ್ಗುಲಲ್ಲಿ ಇರುವ ಪಂಕ್ತಿಗಳು, ಪ್ರತಿ ಪಂಕ್ತಿಯಲ್ಲಿರುವ ಸರಾಸರಿ ಅಕ್ಷರಗಳು, ಹರಿದ ಹಾಳೆಗಳ ವಿವರ, ಪ್ರತಿಮಾಡಿದವರ ಹೆಸರು, ಕೃತಿಯ ವಿಶೇಷ ಇತ್ಯಾದಿ ಹಸ್ತಪ್ರತಿಗೆ ಸಂಬಂಧಿಸಿದ ವಿವರಗಳನ್ನು ಒಳಗೊಂಡಿದೆ.

* ಇವರ ಸೂಚಿಸಾಹಿತ್ಯದಲ್ಲಿ ಪ್ರಮುಖವಾದದೆಂದರೆ **'ವೀರಶೈವ ಅಪ್ರಕಟಿತ ಗ್ರಂಥಸೂಚಿ'** :- ಇದರಲ್ಲಿ ವಚನ, ಚರಿತ್ರೆ, ತಾತ್ವಿಕ, ಶಾಸ್ತ್ರ, ಟೀಕೆ, ಜನಪದ ಇತ್ಯಾದಿ ಅನೇಕ ಪ್ರಕಾರಗಳಿಂದ ಕೂಡಿದ ಕೃತಿಗಳನ್ನು ಒಂದು ಕಡೆ ದಾಖಲಿಸಿರುವುದನ್ನು ನೋಡಬಹುದು.
* **ಇವರ ಕರ್ನಾಟಕ ಕವಿ ಚರಿತೆಯ ಅನುಕ್ತ ಕೃತಿ ಸೂಚಿ** :- ಇದರಲ್ಲಿ ಕವಿಚರಿತ್ರೆಯ ಸಂಪುಟಗಳಲ್ಲಿ ಇರದೆ ಇರುವ, ಅಲ್ಲಲ್ಲಿ ಚದುರಿ ಹೋಗಿರುವ ಹಾಗೂ ಹಸ್ತಪ್ರತಿಗಳಲ್ಲಿ ಅಡಗಿ ಕುಳಿತಿರುವ ಕೃತಿಗಳ ಪರಿಚಯವನ್ನು ಇಲ್ಲಿ ಹೇಳಲಾಗಿದೆ.
* ಇವರ ಮಹತ್ವದ ಸಂಪಾದನೆಯ ಕೃತಿಯೆಂದರೆ **'ವೀರಶೈವ ಹಸ್ತಪ್ರತಿ ಪುಷ್ಪಿಕೆಗಳು'** ಈ ಕೃತಿಯು ಹಸ್ತಪ್ರತಿಯನ್ನು ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ ಅಧ್ಯಯನ ಮಾಡಲಿಕ್ಕೆ ಪ್ರಮುಖ ಆಕರ ಎನ್ನಬಹುದು. ಈ ಕೃತಿಯಲ್ಲಿ ೨೩೧೬ ಕೃತಿಗಳ ಉಲ್ಲೇಖ ಇದೆ, ಕೃತಿಯ ಹೆಸರು, ಕರ್ತೃ, ಕಾಲಗಳನ್ನು ಮೊದಲು ನೀಡಿ ನಂತರ ಕೃತಿಯ ಕ್ರಮಾಂಕ ಹಾಗೂ ಇರುವ ಪ್ರತಿಗಳ ಕಾಲದ ಉಲ್ಲೇಖವನ್ನು ಶಕವರ್ಷದಲ್ಲಿ ಕೊಟ್ಟಿದೆ. ಕೃತಿಗಳ ಆಕರವನ್ನು ಕೊಡುವಲ್ಲಿ ಪ್ರತಿಗಳ ಸಂಗ್ರಹಣ ಸ್ಥಳಗಳನ್ನು 'ಅ'ಕಾರಾದಿ ಕ್ರಮದಲ್ಲಿ ಕೊಡಲಾಗಿದೆ. ಕೃತಿಗಳಿಗೆ ಟೀಕೆ ಇರುವಲ್ಲಿ ಮೊದಲ ಪಂಕ್ತಿಯಲ್ಲಿ ಕೃತಿ, ಕರ್ತೃ, ಕಾಲಗಳನ್ನು ಎರಡನೇ ಪಂಕ್ತಿಯಲ್ಲಿ ಕ್ರಮಾಂಕ, ಟೀಕಾಕಾರ ಹಾಗೂ ಕಾಲಗಳನ್ನು ಕೊಟ್ಟಿದೆ. ಇಲ್ಲಿ ಈಗ ಉಲ್ಲೇಖವಿರದ ಸಾವಿರಾರು ಮಠಗಳು, ಶರಣರ ಉಲ್ಲೇಖಗಳು ಚರಿತ್ರೆಯಲ್ಲಿ ದಾಖಲಾಗದ ಕನ್ನಡ ನಾಡಿನ ಸ್ಥಳೀಯ ಅರಸರ ವಿವರ ಇತ್ಯಾದಿ ಉಪಯುಕ್ತ ಮಾಹಿತಿಗಳು ಇಲ್ಲಿ ಬೆಳಕಿಗೆ ಬಂದಿದೆ. ಹಾಗೂ ಹಸ್ತಪ್ರತಿಗಳಲ್ಲಿ ಅಡಗಿರುವ ಐತಿಹಾಸಿಕ ಹಾಗೂ ಸಾಂಸ್ಕೃತಿಕ ವಿಷಯಗಳನ್ನು ಆಕಾರಾದಿಯಾಗಿ ಬಳಸಲು ಇಂತಹ ಪುಷ್ಪಿಕೆಗಳು ನೆರವನ್ನು ನೀಡುತ್ತವೆ.

೨. **ಎಸ್.ಶಿವಣ್ಣನವರು ಸ್ವತಂತ್ರವಾಗಿ ಸಂಪಾದಿಸಿರುವ ಕೃತಿಗಳು ಇವರು ಸ್ವತಂತ್ರವಾಗಿ ಸಂಪಾದಿಸಿರುವ ಕೃತಿಗಳ ಸಂಖ್ಯೆ ೨೪ ದಾಟುತ್ತದೆ.**

* **ಇವರ ಮುರಿಗೆ ಶಾಂತವೀರಸ್ವಾಮಿಗಳ ಸ್ತೋತ್ರಕಾಂಡ ಕೃತಿ** :- ಇದರಲ್ಲಿ '೮' ಕೃತಿಗಳನ್ನು ಮುರಿಗೆ ಶಾಂತವೀರಸ್ವಾಮಿಗಳ ಹೆಸರಿನಲ್ಲಿ ಸಂಪಾದಿಸಿದ್ದಾರೆ. ಅದರಲ್ಲಿ ಮಹಂತಸ್ವಾಮಿಗಳ ನಾಂದ್ಯ, ಕಂಪಿನಂಜಯ್ಯನ ನಾಂದ್ಯ, ಮುರಿಗೆ ಶಾಂತವೀರೇಶ್ವರನ ಕಂದ, ತರಳವೃತ್ತ ಇತ್ಯಾದಿ ಈ '೮' ಕೃತಿಗಳನ್ನು ಸಂಪಾದಿಸಲು ಬೆಂಗಳೂರು ವಿಶ್ವವಿದ್ಯಾಲಯ, ಕನ್ನಡ ಅಧ್ಯಯನ ಕೇಂದ್ರ, ಮೈಸೂರು ವಿಶ್ವವಿದ್ಯಾಲಯದ ಕನ್ನಡ

ಅಧ್ಯಯನ ಸಂಸ್ಥೆ, ಹಾಗೂ ಮಹಾರಾಜ ಸಂಸ್ಕೃತ ಪಾಠಶಾಲೆ ಇಲ್ಲಿ ಸಿಗುವ ಹಸ್ತಪ್ರತಿಗಳನ್ನು ಉಪಯೋಗಿಸಿ ಪರಿಷ್ಕರಿಸಿ ಪ್ರಕಟಿಸಿದ್ದಾರೆ.

- **ಇವರ ಸ್ವರವಚನ ಸಂಪುಟ-೧ ಮತ್ತು ೨ :-** ಇದರಲ್ಲಿ ಸಂಸ್ಥೆಗಳು, ಮಠಗಳು ಹಾಗೂ ವ್ಯಕ್ತಿಗಳು, ವೈಯಕ್ತಿಕ ಸಂಗ್ರಹದಲ್ಲಿದ್ದ ವಿವಿಧ ಹಸ್ತಪ್ರತಿಗಳನ್ನು ಉಪಯೋಗಿಸಿ ಒಟ್ಟು ೫೬೭ ಸ್ವರ ವಚನಗಳನ್ನು ಶಾಸ್ತ್ರೀಯವಾಗಿ ಸಂಪಾದಿಸಿದ್ದಾರೆ. ಇಲ್ಲಿ ಸಂ-೧ರಲ್ಲಿ ಬಸವಣ್ಣನವರ ಪತ್ನಿ ನೀಲಮ್ಮನಿಂದ ಹಿಡಿದು ಗುರುಪಾದೇಶನವರೆಗೆ ಸ್ವರವಚನಗಳಿವೆ. ಸಂ-೨ರಲ್ಲಿ ಅಕ್ಕಮಹಾದೇವಿಯಿಂದ ಹಿಡಿದು ಕಂಪಲಿ ರಾಮಲಿಂಗ ಅಂಕಿತದ ಸ್ವರ ವಚನಕಾರನವರೆಗೆ ಸ್ವರವಚನಗಳಿವೆ. ಇಲ್ಲಿ ಅನೇಕ ಸ್ಥಳೀಯ ಅರಸರ ಪ್ರಸ್ತಾಪವಿದೆ. ಅನೇಕ ಹಾಡುಗಳು ಸಹ ಈ ಸಂಪುಟದ ಮೂಲಕ ಬೆಳಕು ಚೆಲ್ಲುತ್ತದೆ.

- **"ಮುರಿಗೆ ಶಾಂತವೀರಸ್ವಾಮಿಗಳ ಕೃತಿಗಳು:-** ಇದರಲ್ಲಿ ಎಂಟು ಲಘುಕೃತಿಗಳ ಸಂಕಲನ, ಇದರಲ್ಲಿ ನಾಲ್ಕು ಕೃತಿಗಳಿಗೆ ಟೀಕು ಒಂದು ಕೃತಿಗೆ ಗದ್ಯಾನುವಾದ ಒದಗಿಸಿದೆ. ಅನುಬಂಧವು ಸಹ ಇದೆ"[೬]

  ೧. ಹಮ್ಮೀರ ಕಾವ್ಯ ೨.

  ೨. ಪ್ರಭುಲಿಂಗದ ಕಂದ

  ೩. ನೀಲಾಂಬಿಕೆ ಲಲಿತ ಪಂಚವಿಶಂತಿ

  ೪. ಮನುರಾಜೇಂದ್ರನ ತಾರಾವಳಿ

  ೫. ಕಟ್ಟಿಗೆಯ ತಾರಾವಳಿ

  ೬. ಮುರಿಗೆ ಸ್ವಾಮಿಗಳು ನಿರೂಪಿಸಿದ ನಾಂದ್ಯ

  ೭. ಶಬ್ದರತ್ನಾಕರ

  ೮. ಷಡ್ವೃತ್ತ ಸ್ತೋತ್ರ

- ಶೃಂಗಾರಮ್ಮ ರಚಿಸಿದ ಸಾಂಗತ್ಯ ರೂಪದಲ್ಲಿರುವ ಪದ್ಮಿನಿ ಪರಿಣಯ. ಅಪ್ರಕಟಿತ ಕೃತಿಯಾಗಿದ್ದು ಇದನ್ನು ಬೆಂಗಳೂರ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ಓಲೆ ಪ್ರತಿಯನ್ನು ಆಧರಿಸಿ ಸಂಪಾದಿಸಲಾಗಿದ್ದು, ಇದರ ವಸ್ತು ವೆಂಕಟೇಶ್ವರನ ಪದ್ಮಿನಿಯ ವಿವಾಹ ವರ್ಣನೆಯಾಗಿದೆ. ಇದನ್ನು ಬಿ.ಎಂ.ಶ್ರೀ.ಪ್ರತಿಷ್ಠಾನದ ಮೂಲಕ ಪ್ರಕಟಿಸಿದ್ದಾರೆ.

- ಕುಷ್ಟಗಿ ಕರಿಬಸವೇಶ್ವರನ ೯೮ ವಚನಗಳನ್ನು ಪ್ರೊ.ಜಿ.ಎಂ.ಉಮಾಪತಿ ಅವರ ನೀಡಿದ್ದ ಓಲೆಗರಿಯನ್ನು ಆಧರಿಸಿ ಸಂಪಾದಿಸಿ ಪ್ರಕಟಿಸಿದ್ದಾರೆ. ಹಾಗೆಯೇ ಸರ್ಪಭೂಷಣ

ಶಿವಯೋಗಿಗಳ ಕೈವಲ್ಯಕಲ್ಪವಲ್ಲರಿ ಕೃತಿಯನ್ನು ಕನ್ನಡ ಅಧ್ಯಯನ ಕೇಂದ್ರದ ಹಸ್ತಪ್ರತಿ ವಿಭಾಗದಲ್ಲಿ ಕಾಗದದ ಪ್ರತಿಯನ್ನು ಆಧರಿಸಿ ಸಂಪಾದಿಸಿದ್ದಾರೆ. ಇದು ವೀರಶೈವ ಅಧ್ಯಯನ ಸಂಸ್ಥೆ ಗದಗದಲ್ಲಿ ಪ್ರಕಟನೆಯಾಗಿರುವುದನ್ನು ನೋಡಬಹುದು.

- ಹಂಪೆಯ ಹರೀಶ್ವರ ಕೃತ 'ಹರೀಶ್ವರ ದೇವರ ಕಂದ' ಕೃತಿಯನ್ನು ಚಿತ್ರದುರ್ಗದ ಮುರುಘರಾಜೇಂದ್ರ ಬೃಹನ್ಮಠದ ಹಸ್ತಪ್ರತಿ ಭಂಡಾರದಲ್ಲಿ ಆಧರಿಸಿ ಸಂಪಾದಿಸಲ್ಪಟ್ಟಿದೆ. ಇದು ಮೂರು ಸಾವಿರ ಮಠ, ಹುಬ್ಬಳಿಯಲ್ಲಿ ಪ್ರಕಟನೆಯಾಗಿದೆ.
- ಚನ್ನಬಸವಣ್ಣನವರ ವಚನಗಳ ಕೃತಿಗಳ ಬೆಂಗಳೂರು ವಿಶ್ವವಿದ್ಯಾಲಯ ಕನ್ನಡ ಅಧ್ಯಯನ ಕೇಂದ್ರದ ಹಸ್ತಪ್ರತಿ ವಿಭಾಗದ ಓಲೆಪ್ರತಿಯನ್ನಾಧರಿಸಿ ಸಂಪಾದಿಸಲ್ಪಟ್ಟಿದ್ದಾರೆ. ಇದನ್ನು ಬಡಗಿ ಪ್ರಕಾಶನ, ತುಮಕೂರಿನಲ್ಲಿ ಪ್ರಕಟನೆಯಾಗಿದೆ.
- ಶಂಕರದೇವರ ಸ್ವರವಚನಗಳು ಕೃತಿಯು ಬೆಂಗಳೂರು ವಿಶ್ವವಿದ್ಯಾಲಯ, ಕನ್ನಡ ಅಧ್ಯಯನ ಕೇಂದ್ರದ ಹಸ್ತಪ್ರತಿ ವಿಭಾಗದಿಂದ ವಿವಿಧ ಹಸ್ತಪ್ರತಿ ಆಕರಗಳನ್ನು ಬಳಸಿ ಪರಿಷ್ಕರಿಸಿ ಸಂಪಾದಿಸಿದ್ದಾರೆ. ಹಾಗೆಯೇ ಬಸವಲಿಂಗೇಶ ವಿರಚಿತ ತೋಂಟದ ಸಿದ್ದೇಶ್ವರ ಸಾಂಗತ್ಯ ಅಪ್ರಕಟಿತ ಕೃತಿಯನ್ನು ಚಿತ್ರದುರ್ಗ ಬೃಹನ್ಮಠದಲ್ಲಿರುವ ಓಲೆಯ ಪ್ರತಿಯನ್ನಾಧರಿಸಿ ಸಂಪಾದಿಸಿರುವುದು. ಹಾಗೆಯೇ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದಿಂದ ಪ್ರಕಟವಾಗಿರುವ ಸಮಗ್ರ ವಚನ ಸಂಪುಟ-೧೦ ಕೃತಿಯು ಇವರ ಸಂಪಾದನಾ ಕಾರ್ಯದಲ್ಲಿ ಮಹತ್ವರವಾದುದೆಂದು ಹೇಳಬಹುದು.

**೩. ಎಸ್.ಶಿವಣ್ಣನವರು ಬೇರೆಯವರೊಡನೆ ಸೇರಿ ಸಂಪಾದಿಸಿರುವ ಅಪ್ರಕಟಿತ ಕೃತಿಗಳ ಸಂಖ್ಯೆ ೭:-**

ಅದರಲ್ಲಿ ಕೆಂಬಾವಿ ಬೋಗಣ್ಣನ ಸಾಂಗತ್ಯ ಕೃತಿಯನ್ನು ಎಸ್.ವಿದ್ಯಾಶಂಕರರೊಡನೆ ಸಂಪಾದಿಸಿದ್ದಾರೆ. ಹಾಗೆಯೇ ಮಹಾಲಿಂಗಶತಕ, ನಂಜುಂಡ ಶತಕ, ಮರಾಣಿಮಣಿ ದರ್ಪಣ ಶತಕ, ಕರಿಕಂಠ ಶತಕ, ಚಂದ್ರಲೇಖಾವಂಸತ ಶತಕಗಳನ್ನು 'ಪಂಚಶತಕ' ಹೆಸರಿನಲ್ಲಿ ಇತರರೊಂದಿಗೆ ಸಂಪಾದಿಸಿದ್ದಾರೆ."ಕಸ್ತೂರಿ ಸಿದ್ಧನ'ಗುರುಭಕ್ತನ ಕತೆ' ಕಾವ್ಯವನ್ನು ಡಿ.ಎಲ್.ನರಸಿಂಹಾಚಾರ್‌ರವರೊಂದಿಗೆ ಪರಿಷ್ಕರಿಸಿ ಇತರರೊಡನೆ ಸಂಪಾದಿಸಿದ್ದಾರೆ."[2] ಹಾಗೆಯೇ 'ಹಳೆಯ ಗದ್ಯ ಸಾಹಿತ್ಯ' ಕೃತಿಯನ್ನು ಚಿದಾನಂದಮೂರ್ತಿಯವರೊಂದಿಗೆ ಸೇರಿ ಸಂಪಾದಿಸಿದ್ದಾರೆ. ಹಾಗೆಯೇ ಚಂದ್ರಸಾಗವರ್ಣಿಯ ಅಪ್ರಕಟಿತ ಹದಿನೆಂಟು ಕೃತಿಗಳನ್ನು ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ಹಸ್ತಪ್ರತಿ ವಿಭಾಗದ ಪ್ರತಿಗಳನ್ನು ಉಪಯೋಗಿಸಿಕೊಂಡು ಹಂಪನಾರವರೊಂದಿಗೆ ಸಂಪಾದಿಸಿದ್ದಾರೆ. ಹಾಗೆಯೇ ಕಾಮನಪದ್ಯ ಕೃತಿಯನ್ನು, ಚಾವುಂಡರಾಯನ ರಾಗ ಕೃತಿಯನ್ನು,

ಜೀವದಯಾಷ್ಟಮಿನೋಂಪಿ ಕೃತಿಯನ್ನು, ಕೃಷ್ಣನ ಪ್ರತಿಷ್ಠೆ ಚರಿತ್ರೆ ವರ್ಣನೆ ಕೃತಿಯನ್ನು ಬೆಳ್ಗೊಳದ ಮಸ್ತಾಭಿಷೇಕ ಕೃತಿಯನ್ನು, ವಸಂತತಿಲಕ ಚರಿತ್ರೆಯ ಕೃತಿಯನ್ನು, ಹೀಗೆ ಹಲವಾರು ಕೃತಿಗಳನ್ನು ಹಸ್ತಪ್ರತಿಗಳನ್ನು ಉಪಯೋಗಿಸಿಕೊಂಡು ಸಂಪಾದಿಸಿರುವುದನ್ನು ನೋಡಬಹುದು.

೪. ಹೀಗೆ ಎಸ್.ಶಿವಣ್ಣನವರು ಗ್ರಂಥಸಂಪಾದನೆ ಹಾಗೂ ಹಸ್ತಪ್ರತಿ ಕ್ಷೇತ್ರಕ್ಕೆ ಮಹತ್ತರವಾದ ಕೊಡುಗೆಯನ್ನು ನೀಡುವುದರೊಂದಿಗೆ ಗ್ರಂಥ ಸಂಪಾದನಾ ಕಾರ್ಯವನ್ನು ಕೈಗೊಳ್ಳುವ ಇತರರಿಗೆ ಹಸ್ತಪ್ರತಿಗಳನ್ನು ಒದಗಿಸುವುದರ ಜೊತೆಗೆ ಸೂಕ್ತ ಮಾರ್ಗದರ್ಶನವನ್ನು ಸಹ ನೀಡುತ್ತಿದ್ದರು. ಹಾಗೂ ಇವರು ನಾಡಿನಾದ್ಯಂತ ಸಂಶೋಧನೆಯಲ್ಲಿ ಆಸಕ್ತಿವಹಿಸಿದವರಿಗೆ ಹಸ್ತಪ್ರತಿಗಳ ಪ್ರಾಮುಖ್ಯತೆ ಹಾಗೂ ಅದರ ಪ್ರಥಮ ಮಾಹಿತಿಯನ್ನು ಒದಗಿಸುತ್ತಿದ್ದರು. ಹಾಗೂ ಹಳಗನ್ನಡ, ನಡುಗನ್ನಡ, ಸಾಹಿತಿಗಳ ಗ್ರಂಥ ಸಂಪಾದನೆ, ವ್ಯಾಕರಣ, ಹಸ್ತಪ್ರತಿಶಾಸ್ತ್ರ ಮೊದಲಾದ ಸಾಹಿತ್ಯ ಪ್ರಕಾರಗಳಲ್ಲಿ ಸಂಶೋಧನೆ ಕೈಗೊಳ್ಳುವವರಿಗೆ ಮಾರ್ಗದರ್ಶಕರಾಗಿ ಕಾರ್ಯ ನಿರ್ವಹಿಸುತ್ತಿದ್ದರು.

೫. ಇವರ ಹಸ್ತಪ್ರತಿಶಾಸ್ತ್ರ ಮತ್ತು ಗ್ರಂಥಸಂಪಾದನೆ ಕುರಿತ ಸಂಶೋಧನಾ ಲೇಖನಗಳನ್ನು 'ಬಿಡುಮುತ್ತು' ಎಂಬ ಕೃತಿಯಲ್ಲಿ ಸಂಗ್ರಹಿಸಿರುವುದನ್ನು ನೋಡಬಹುದು. ಈ ಕೃತಿಯಲ್ಲಿ ಎಸ್.ಶಿವಣ್ಣನವರು ಪ್ರಾಚೀನ ಕವಿಗಳ ಕಾಲವಿಚಾರ, ಅಪ್ರಕಟಿತ ವಚನಗಳ ಸಂಪಾದನಾ ಕಾರ್ಯ ಹಾಗೂ ವಿವಿಧ ಕಾಲದಲ್ಲಿದ್ದ ಕವಿ-ಕೃತಿಗಳಿಗೆ ಸಂಬಂಧಿಸಿ ಸಂಶೋಧನೆಗೆ ಸಂಬಂಧಿಸಿದ್ದಾಗಿದೆ. ಇಲ್ಲಿ ಕಾಲ ವಿಚಾರದ ಬಗ್ಗೆ "ಅವಧೂತ ಶಿವಯೋಗಿಗಳ ಕಾಲವಿಚಾರವನ್ನು, ಕವಿ ಮಾದಣ್ಣನ ಕಾಲವಿಚಾರ, ತೋಂಟದ ಸಿದ್ಧಲಿಂಗರ ಕಾಲವನ್ನು, ನಿಜಗುಣರ ಕಾಲ, ಸರ್ವಜ್ಞನ ಕಾಲದ ಬಗೆಗೆ, ಪರ್ವತ ಶಿವಯೋಗಿಯ ಕಾಲವಿಚಾರ"[೮] ಹೀಗೆ ಅನೇಕ ಪ್ರಾಚೀನ ಕವಿಗಳ ಕಾಲದ ಬಗ್ಗೆ ಚರ್ಚಿಸುತ್ತಾ ಟಿಪ್ಪಣಿಯ ರೂಪದಲ್ಲಿ ಕೊಟ್ಟಿರುವುದನ್ನು ನೋಡಬಹುದು.

ಹಾಗೆಯೇ ಇವರು ವಚನಗಳ ಬಗೆಯಲ್ಲಿ "ಮಹಾದೇವಿಯಕ್ಕ, ಅಜಗಣ್ಣ, ಅಲ್ಲಮಪ್ರಭು, ಅಂಬಿಗರ ಚೌಡಯ್ಯ, ಜೇಡರ ದಾಸಿಮಯ್ಯ, ಚೆನ್ನಬಸವಣ್ಣ, ನೀಲಮ್ಮ ಇನ್ನು ಮುಂತಾದ ವಚನಕಾರರು ಹಾಗೂ ಸ್ವರವಚನ ಪ್ರಕಟಿತ, ಅಪ್ರಕಟಿತ ವಚನಗಳನ್ನು ಕೊಟ್ಟಿರುವುದನ್ನು ನೋಡಬಹುದು."[೯]

"ಹಾಗೆಯೇ ಇವರ ಸಂಶೋಧನಾ ಲೇಖನಗಳಲ್ಲಿ 'ಕರ್ಣಾಟ ವೃತ್ತರತ್ನಾಕರ-ಒಂದು ಟಿಪ್ಪಣಿ, ಕಂಪಿನಂಜಯ್ಯನ 'ಮಂಗಳ ಜ್ಯೋತಿ ಅಷ್ಟಕ', ಮಲ್ಲಿಕಾರ್ಜುನನ ಸೂಕ್ತಿಸುಧಾರ್ಣವ, ಗುಬ್ಬಿ ಮಲ್ಲಣ್ಣನ ಬಗೆಗೆ, ಗದಾಯುದ್ಧ ಪದ್ಯ ಟಿಪ್ಪಣಿ ಹೀಗೆ ಶೋಧಗೊಂಡಿದ್ದ ವೀರಶೈವ ಕೃತಿಗಳ ಬಗೆಗೆ ತಮ್ಮದೇ ಆದ ನೆಲೆಯಲ್ಲಿ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುವುದನ್ನು ನೋಡಬಹುದು."[೧೦]

ಹೀಗೆ ಹಸ್ತಪ್ರತಿಶಾಸ್ತ್ರ ಹಾಗೂ ಗ್ರಂಥಸಂಪಾದನಾ ಕಾರ್ಯಕ್ಕೆ ತಮ್ಮ ಜೀವನವನ್ನೇ ಮುಡಿಪಾಗಿಟ್ಟವರೆಂದರೆ ತಪ್ಪಾಗಲಾರದು. ಇವರಿಗೆ ರಮಣಶ್ರೀ ಅಕಾಡೆಮಿ ಪ್ರಶಸ್ತಿ, ಎಂ.ವಿ.ಸೀ ಪುರಸ್ಕಾರ, ರಾಜ್ಯೋತ್ಸವ ಪ್ರಶಸ್ತಿ, ಬಸವ ಭವನ ಪ್ರಶಸ್ತಿಗಳು ಇವರ ಕಾರ್ಯಸಾಧನೆಗೆ ದೊರಕಿರುವುದನ್ನು ನೋಡಬಹುದು.

ಹೀಗೆ ಎಸ್.ಶಿವಣ್ಣನವರು ಸಂಪಾದಿಸಿರುವ ಕೆಲವು ಪ್ರತಿಗಳು ಅವರ ಅಪೂರ್ವವಾದ ವಿದ್ವತ್ತನ್ನು, ವ್ಯುತ್ಪತ್ತಿಜ್ಞಾನವನ್ನು, ಗ್ರಂಥ ಸಂಪಾದನಾ ಪ್ರೌಢಿಮೆಯನ್ನು ತೋರಿಸುತ್ತದೆ.

## ಅಡಿ ಟಿಪ್ಪಣಿಗಳು

೧. ಕುಟುಂಬ ವರ್ಗದವರಿಂದ ಮಾಹಿತಿ

೨. ಕುಟುಂಬ ವರ್ಗದವರಿಂದ ಮಾಹಿತಿ

೩. ಡಾ.ಬಸವಾರಾಧ್ಯರವರ ಹೇಳಿಕೆಯಿಂದ ಸಂಗ್ರಹಿಸಲಾಗಿದೆ.

೪. ಕುಟುಂಬ ವರ್ಗದವರಿಂದ ಮಾಹಿತಿ ಸಂಗ್ರಹ

೫. ಡಾ.ಬಿ.ವಿ.ಶಿರೂರ ಅಭಿನಂದನ ಗ್ರಂಥ : ಸಂ.ಡಾ.ಎಫ್.ಟಿ.ಹಳ್ಳಿಕೇರಿ, ಡಾ.ಕೆ.ರವೀಂದ್ರನಾಥ್, ಯಲಬುರ್ಗಾ, ೨೦೦೨, ಪುಟ-೫೬೮

೬. ಗ್ರಂಥಸಂಪಾದನೆ ಕೆಲವು ಅಧ್ಯಯನ : ವೈ.ಸಿ.ಭಾನುಮತಿ, ಕೇಶವ ಪ್ರಕಾಶನ, ಮೈಸೂರು, ೧೯೯೭, ಪುಟ-೧೩೩

೭. ಡಾ.ಬಿ.ವಿ.ಶಿರೂರ ಅಭಿನಂದನ ಗ್ರಂಥ : ಸಂ.ಡಾ.ಎಫ್.ಟಿ.ಹಳ್ಳಿಕೇರಿ, ಡಾ.ಕೆ.ರವೀಂದ್ರನಾಥ್, ಯಲಬುರ್ಗಾ, ೨೦೦೨, ಪುಟ-೫೭೪

೮. ಬಿಡುಮುತ್ತು : ಎಸ್.ಶಿವಣ್ಣ, ಕನ್ನಡ ಸಾಹಿತ್ಯ ಪರಿಷತ್ತು, ೨೦೦೪, ಪುಟ-೧, ೫, ೨೩, ೫೫, ೩೯

೯. ಅದೇ ಪುಟ -೮೩, ೬೬, ೮೬, ೧೦೭, ೧೦೩

೧೦. ಅದೇ, ಪುಟ – ೨೪೯, ೨೫೦, ೩೦೨, ೩೯೮

# ಅಧ್ಯಾಯ – ೩

## ಹಸ್ತಪ್ರತಿ ಅಧ್ಯಯನದ ಚರಿತ್ರೆ

ಮಾನವನು ಅನಾಗರೀಕತೆಯಿಂದ ನಾಗರೀಕತೆಯೆಡೆಗೆ ಸಾಗಿ ಬಂದಂತೆ ಸಾಹಿತ್ಯವು ಸಹ ತನ್ನ ವಿಸ್ತಾರತೆಯನ್ನು ಪಡೆದುಕೊಂಡಿರುವುದನ್ನು ನೋಡಬಹುದು. ಮಾನವನು ತನ್ನ ಅನಿಸಿಕೆಗಳನ್ನು, ಅಭಿಪ್ರಾಯಗಳನ್ನು, ಅನುಭವಗಳನ್ನು, ಭಾವನೆಗಳನ್ನು ಬರೆದಿಡಲು ಪ್ರಯತ್ನಿಸಿದನು. ಕಾಲದಿಂದ ಕಾಲಕ್ಕೆ, ಒಂದೆಡೆಯಿಂದ ಮತ್ತೊಂದೆಡೆಗೆ ತಮ್ಮ ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಳ್ಳಲು ಹಾಗೂ ಮುಂದಿನ ಪೀಳಿಗೆಗೆ ತಮ್ಮ ಸಾಹಿತ್ಯವು ತಲುಪಬೇಕೆಂಬ ಉದ್ದೇಶದಿಂದ ಬರವಣಿಗೆಯೂ ಕಾರ್ಯರೂಪಕ್ಕೆ ಬಂದಿರಬಹುದೆನ್ನಬಹುದು.

ಈಗಿನಂತೆ ಕಾಗದ ಹಾಗೂ ಮುದ್ರಣದ ಸೌಕರ್ಯವಿಲ್ಲದ ಆ ಕಾಲದಲ್ಲಿ ನಮ್ಮ ಕವಿಗಳು ತಮ್ಮ ಕೃತಿಗಳನ್ನು ತಾಳೆಗರಿಗಳ ಮೇಲೆ, ಬೂರ್ಜಪತ್ರದ ಮೇಲೆ ಉಕ್ಕಿನ ಕಂಠದಿಂದ ಕೊರೆದು ಬರೆದಿರುವುದನ್ನು ನೋಡಬಹುದು. ಆದರೆ ಅವು ಬಹುವರ್ಷ ಇರದೇ ಜೀರ್ಣವಾಗಿ ಹೋಗುತ್ತಿದ್ದರಿಂದ ಕವಿಗಳ ಕೃತಿಗಳನ್ನು ಕಾಲಕಾಲಕ್ಕೆ ಲಿಪಿ ಮಾಡಿಕೊಂಡು ಬರುವುದು ಅನಿವಾರ್ಯವಾಯಿತು. ಹಾಗೆಯೇ ಲಿಪಿ ಮಾಡಿಕೊಂಡ ಬಂದ ನಮ್ಮ ಕವಿಗಳ ಕೃತಿಗಳು ಮಠಗಳಲ್ಲಿ, ಮನೆತನಗಳಲ್ಲಿ ಹಾಗೂ ಅರಮನೆಗಳಲ್ಲಿ ದೊರೆಯುತ್ತಿದ್ದನ್ನ ನೋಡಬಹುದು. ಆದರೆ ಕವಿಗಳು ಬರೆದಂತಹ ಭಾಷೆ ಹಾಗೂ ಲಿಪಿ ಎಲ್ಲರಿಗೂ ಅರ್ಥವಾಗದೇ ಇದ್ದದ್ದರಿಂದ ಪ್ರಾಚೀನ ಕವಿಗಳ ಹಳೆಯ ಹಸ್ತಪ್ರತಿಗಳನ್ನು ಸಂಗ್ರಹಿಸುವ ಹಾಗೂ ಅವುಗಳನ್ನು ಪರಿಷ್ಕರಿಸಿ, ವಿಮರ್ಶಿಸಿ ಅವುಗಳ ಮಹತ್ವವನ್ನು ಮುಂದಿನ ಪೀಳಿಗೆಗೆ ಪರಿಚಯ ಮಾಡಿಕೊಡುವ ಉದ್ದೇಶದಿಂದ ಗ್ರಂಥಗಳ ಸಂಪಾದನಾ ಕಾರ್ಯ ಪ್ರಾರಂಭವಾಯಿತೆನ್ನಬಹುದು.

ಹಸ್ತಪ್ರತಿಶಾಸ್ತ್ರ, ಗ್ರಂಥಸಂಪಾದನೆ ಹಾಗೂ ಹಸ್ತಪ್ರತಿ ಅಧ್ಯಯನ ಈ ಮೂರನ್ನು ಮೊದಲು ಒಂದೇ ಅಧ್ಯಯನವೆಂದು ಭಾವಿಸಿ ಅನೇಕ ಗೊಂದಲಗಳು ತಲೆದೋರಿದ್ದರಿಂದ ಈ ಮೂರು ಅಧ್ಯಯನಗಳನ್ನು ಬೇರೆ ಬೇರೆಯಾಗಿ ಸಂಗ್ರಹಿಸಿಕೊಳ್ಳಬೇಕಾಗಿದೆ. ಈ ಹಸ್ತಪ್ರತಿ ಅಧ್ಯಯನದ ಚರಿತ್ರೆ ಎಂದಾಗ ಹಸ್ತಪ್ರತಿಶಾಸ್ತ್ರ, ಗ್ರಂಥಸಂಪಾದನೆ ಹಾಗೂ ಹಸ್ತಪ್ರತಿ ಅಧ್ಯಯನ ಎಂದು ವರ್ಗೀಕರಿಸಿಕೊಂಡಿದ್ದು, ಈ ಮೂರು ಅಧ್ಯಯನಗಳ ಹುಟ್ಟು, ಬೆಳವಣಿಗೆ, ವಿಕಾಸವನ್ನು ತಿಳಿಯುವುದಾಗಿದೆ.

## ಗ್ರಂಥಸಂಪಾದನೆ :-

"'ಗ್ರಂಥ' ಎಂಬ ಶಬ್ದವನ್ನು ಪುಸ್ತಕವೆಂದು ಕರೆಯಬಹುದು. ಆದರೆ ಇದಕ್ಕೆ ವಿಶಾಲಾರ್ಥವನ್ನು ಕೊಡುವುದಾದರೆ "ಸಂಶೋಧಕನಿಗೆ ಪರಿಚಿತವಾಗಿರುವ ಅಥವಾ ಪರಿಚಯ ಮಾಡಿಕೊಳ್ಳಲು ಸಾಧ್ಯವಾಗಿರುವ ಮತ್ತು ಅವನಿಗೆ ಹೆಚ್ಚು ಕಡಿಮೆ ತಿಳಿದಿರುವ ಭಾಷೆಯಲ್ಲಿ ಅರ್ಥವತ್ತಾಗಿರುವ ರೀತಿಯಲ್ಲಿ ಬರೆದಿರುವ ಯಾವ ಲೇಖನವನ್ನಾದರೂ ಗ್ರಂಥ"[೧] ಎಂದು ಕರೆಯಬಹುದು.

"ಗ್ರಂಥಸಂಪಾದನಾ ಶಾಸ್ತ್ರ ಎನ್ನುವುದು ಲಭ್ಯ ಹಸ್ತಪ್ರತಿಗಳಿಂದ ಅಲಭ್ಯ ಕವಿಕೃತಿಯನ್ನು ಹೊರತೆಗೆಯುವ ಒಂದು ವಿಶಿಷ್ಟ ಪಾಂಡಿತ್ಯ ಕಲೆ"[೨]

"ಅನೇಕ ಪ್ರಾಚೀನ ಗ್ರಂಥಗಳು ಇಂದಿಗೂ ಓಲೆಗರಿಗಳಲ್ಲಿ ಕಾಗದದ ಹಸ್ತಪ್ರತಿಗಳಲ್ಲೂ ಇವೆ. ಇವುಗಳನ್ನು ಶಾಸ್ತ್ರೀಯವಾಗಿ ಮುದ್ರಿಸಿ, ಸಾಮಾನ್ಯ ಓದುಗರಿಗೆ ಎಟಕುವಂತೆ ಮಾಡುವ ಪೂರ್ವಭಾವಿ ಕೆಲಸವೇ ಗ್ರಂಥಸಂಪಾದನೆ"[೩]

ಈ ಗ್ರಂಥ ಸಂಪಾದನಾಶಾಸ್ತ್ರ ಎನ್ನುವುದು ಪಾಶ್ಚಾತ್ಯ ಸಾಹಿತ್ಯದ ಮೂಲಕವಾಗಿ ಬಂದಿರುವುದನ್ನು ನೋಡಬಹುದು. ಇಲ್ಲಿ ಪ್ರಾಚೀನ ಗ್ರೀಕ್ ಸಂಸ್ಕೃತಿ, ಹೀಬ್ರೂ ಸಂಸ್ಕೃತಿ, ರೋಮ್ ಸಂಸ್ಕೃತಿ ಹೀಗೆ ಇವುಗಳಿಗೆ ಸಂಬಂಧಿಸಿದಂತೆ ಪ್ರಾಚೀನ ಗ್ರಂಥಗಳನ್ನು ಅವುಗಳ ಹಸ್ತಪ್ರತಿಗಳ ಸಹಾಯದಿಂದ ಪರಿಷ್ಕರಣ ಮಾಡಿ ಪ್ರಕಟಿಸುವ ಕಾರ್ಯವನ್ನು ನೋಡಬಹುದು.

ನಂತರದಲ್ಲಿ "೧೫೨೧ರಿಂದ ಫ್ರಾನ್ಸ್, ಹಾಲೆಂಡ್, ಇಂಗ್ಲೇಂಡ್, ಜರ್ಮನಿ ಮುಂತಾದ ಐರೋಪ್ಯ ದೇಶಗಳಲ್ಲೂ, ಅಮೇರಿಕಾದಲ್ಲೂ ಪ್ರಾಚೀನ ಗ್ರೀಕ್, ಲ್ಯಾಟಿನ್, ಹೀಬ್ರೂ ಸಾಹಿತ್ಯಗಳ ವ್ಯಾಸಂಗದ ಗ್ರಂಥ ಸಂಪಾದನೆಗಳು ನಡೆದಿರುವುದನ್ನು ನೋಡಬಹುದು. ಅದರಲ್ಲಿ ಗ್ರೀಕ್ ಸಾಹಿತ್ಯದ ಮಹಾಕಾವ್ಯಗಳಾದ ಇಲಿಯಡ್ ಮತ್ತು ಓಡಿಸ್ಸಿಗಳು ಗ್ರಂಥಸ್ಥವಾಗದೇ ಬಹುಕಾಲ ಬಾಯಿಂದ ಬಾಯಿಗೆ ಪ್ರಚಾರವಾಗುತ್ತಿದ್ದವು. ಇದನ್ನು 'ಜೇನೋಡೋಟಸ್' ಎಂಬ ವಿದ್ವಾಂಸನು ಪ್ರಾಚೀನ ಹಸ್ತಪ್ರತಿ ಆಧಾರದ ಮೇಲೆ ಪರಿಷ್ಕರಿಸಿ ಸಂಪಾದಿಸಿದನು."[೪] ಎಂದು ಹೇಳಲಾಗಿದೆ.

ಹೀಗೆ ಪಾಶ್ಚಾತ್ಯ ಸಾಹಿತ್ಯದ ಮೂಲಕ ಆರಂಭವಾದ ಈ ಗ್ರಂಥಸಂಪಾದನೆ ನಂತರದಲ್ಲಿ ನಮ್ಮ ಪ್ರಾಚೀನ ಕನ್ನಡ ಕೃತಿಗಳ ಸಂಪಾದನೆ ಮಾಡುವಲ್ಲಿ ಮುಂದುವರೆದುದ್ದನ್ನು ನೋಡಬಹುದು.

ಕನ್ನಡದಲ್ಲಿ ಗ್ರಂಥಸಂಪಾದನಾ ಇತಿಹಾಸ ಪ್ರಾರಂಭವಾಗುವುದು ೧೯ನೆ ಶತಮಾನದ ಮಧ್ಯಭಾಗದಿಂದ ಮುದ್ರಣ ಯಂತ್ರ ಕಾಲಿಟ್ಟ ದಿನದಿಂದಲೇ ಕರ್ನಾಟಕ ಇತಿಹಾಸದಲ್ಲಿ ಶೈಕ್ಷಣಿಕವಾಗಿ, ರಾಜಕೀಯವಾಗಿ, ಸಾಮಾಜಿಕವಾಗಿ ಹಾಗೂ ಸಾಹಿತ್ಯಕವಾಗಿ ಎಲ್ಲಾ ಕ್ಷೇತ್ರದಲ್ಲೂ ಸಹ ಪ್ರಗತಿ ಸಾಧಿಸಲು

ಈ ಮುದ್ರಣ ಸೌಲಭ್ಯ ಸಹಕಾರಿಯಾಯಿತು. ಅಲ್ಲಿಂದಲೇ ಈ ಕನ್ನಡ ಗ್ರಂಥಸಂಪಾದನೆಯ ಇತಿಹಾಸವು ಆರಂಭವಾಯಿತೆನ್ನಬಹುದು.

ಮೊದಲು ಈ ಗ್ರಂಥಸಂಪಾದನ ಕಾರ್ಯವನ್ನು ಕ್ರೈಸ್ತ ವಿದ್ವಾಂಸರು ಪ್ರಾರಂಭಿಸಿದರು. ಅದರಲ್ಲಿ ಮೊಗ್ಲಿಂಗ್, ಗ್ಯಾರೆಟ್, ಜಿ.ವರ್ತ್, ರೆ.ಫ್.ಕಿಟೆಲ್, ಬಿ.ಎಲ್.ರೈಸ್, ಮುಂತಾದ ಪಾಶ್ಚಾತ್ಯ ವಿದ್ವಾಂಸರು ಪ್ರಾಚೀನ ಕೃತಿಗಳನ್ನು ಸಂಪಾದಿಸಿರುವುದನ್ನು ನೋಡಬಹುದು. ಹಾಗೆಯೇ ಈ ಪಾಶ್ಚಾತ್ಯರ ವಿದ್ವಾಂಸರ ಪ್ರಭಾವ ನಮ್ಮ ದೇಸಿ ವಿದ್ವಾಂಸರ ಮೇಲೆ ಆಗಿ ಅವರು ಸಹ ಗ್ರಂಥ ಸಂಪಾದನೆಯನ್ನು ಮಾಡುವುದಕ್ಕೆ ಪ್ರೇರಣೆ ನೀಡಿತ್ತೆನ್ನಬಹುದು.

ಹೀಗೆ ಕನ್ನಡದಲ್ಲಿ ಗ್ರಂಥ ಸಂಪಾದನೆಗೆ ವೈಜ್ಞಾನಿಕ ಶಿಸ್ತನ್ನು ಅಳವಡಿಸಿ ಅದಕ್ಕೊಂದು ಹೊಸ ಆಯಾಮವನ್ನು ತಂದುಕೊಟ್ಟವರು ಟಿ.ಎಸ್.ವೆಂಕಣ್ಣಯ್ಯ, ಎ.ಆರ್.ಕೃಷ್ಣಶಾಸ್ತ್ರಿ, ಡಿ.ಎಲ್.ನರಸಿಂಹಾಚಾರ್, ತೀ.ನಂ.ಶ್ರೀಕಂಠಯ್ಯ ಅತ್ಯಂತ ಪ್ರಮುಖರೆನ್ನಬಹುದು. ಹಾಗೆಯೇ ಗ್ರಂಥಸಂಪಾದನೆಗೆ ಹೊಸ ಸಾಧ್ಯತೆಗಳನ್ನು ತೋರಿಸಿಕೊಟ್ಟವರೆಂದರೆ ಶಿ.ಶಿ. ಬಸವನಾಳ, ನಂದೀಮಠ, ಭೂಸನೂರಮಠ, ಎಂ.ಎ.ರಾಮಾನುಜ ಅಯ್ಯಂಗಾರ್, ಚೆನ್ನಪ್ಪ ಉತ್ತಂಗಿ, ಆರ್.ಸಿ.ಹಿರೇಮಠ, ಸುಂಕಾಪುರ ಮುಖ್ಯರಾಗಿದ್ದಾರೆ.

ಇಲ್ಲಿ ಪ್ರಾಚೀನರು ಉಳಿಸಿಕೊಂಡು ಬಂದಿರುವಂತಹ ಆಚರಣೆಗಳು, ಧರ್ಮಗಳು, ನಂಬಿಕೆಗಳು, ಸಾಹಿತ್ಯಗಳನ್ನು ಉಳಿಸಿಕೊಂಡು ಅವರು ಬರೆದಿರುವಂತೆ ಪುನರ್ ರಚನೆಯನ್ನು ಕೈಗೊಳ್ಳುವುದು ಹಾಗೂ ಮೂಲ ಕೃತಿಯಿಲ್ಲದ ಕೇವಲ ನಕಲು ಪ್ರತಿಗಳಷ್ಟೇ ದೊರಕುವ ಯಾವುದೇ ಪ್ರಾಚೀನ ಕೃತಿಯನ್ನು ಪರಿಷ್ಕರಿಸಿ, ಸಂಪಾದಿಸಿ ಮುದ್ರಿಸಬೇಕಾಗಿರುವುದು ಈ ಗ್ರಂಥ ಸಂಪಾದನೆಯ ವೈಶಿಷ್ಟ್ಯವಾಗಿದೆ.

ಹೀಗೆ ಗ್ರಂಥಸಂಪಾದನೆ ಎನ್ನುವುದು ಪಾಶ್ಚಾತ್ಯ ಪ್ರೇರಣೆಯಿಂದ ಉಂಟಾಗಿದ್ದು, ಭಾರತೀಯ ಗ್ರಂಥಸಂಪಾದನೆ ಕಾರ್ಯ ಇಂದಿಗೂ ಸಹ ತನ್ನ ವಿಸ್ತರತೆಯನ್ನು ಪಡೆದಿರುವುದನ್ನ ನೋಡಬಹುದು.

**ಹಸ್ತಪ್ರತಿಶಾಸ್ತ್ರ :-**

ಕೈ ಬರಹದ ಎಲ್ಲ ಗ್ರಂಥಗಳನ್ನು ಹಸ್ತಪ್ರತಿಗಳೆಂದು ಕರೆಯಬಹುದು. ಈ ಹಸ್ತಪ್ರತಿಗಳು ನಾಡಿನ ಅತ್ಯಮೂಲ್ಯ ಸಂಪತ್ತಾಗಿದೆ. ಇಂದು ನಾವು ಅಧ್ಯಯನ ಮಾಡುತ್ತಿರುವ ಕೃತಿಗಳೆಲ್ಲಕ್ಕೂ ಮೂಲ ಆಕರ ಈ ಹಸ್ತಪ್ರತಿಗಳೆಂದೇ ಹೇಳಬಹುದು.

೧೯೮೦ರ ವರೆಗಿನ ಬೆಳವಣಿಗೆಯನ್ನು ಗ್ರಂಥಸಂಪಾದನೆ ಎಂದೂ ಅನಂತರದ್ದೂ ಅಂದರೆ ೧೯೮೦ರಿಂದಿಚೇಗೆ ಈ ಹಸ್ತಪ್ರತಿಶಾಸ್ತ್ರ ಕಾಣಿಸಿಕೊಂಡರೂ ಅದರ ಬೆಳವಣಿಗೆಯನ್ನು ಗ್ರಂಥಸಂಪಾದನೆಯ ಜೊತೆ ಜೊತೆಯಲ್ಲೇ ನಡೆದುಬಂದಿರುವುದನ್ನು ನೋಡಬಹುದು.

ಮುದ್ರಣ ಯಂತ್ರದ ಆವಿಷ್ಕರಣದಿಂದಾಗಿ ಪಾಶ್ಚಾತ್ಯ ದೇಶಗಳಲ್ಲಿ ಗ್ರಂಥವನ್ನು ಕೈಯಿಂದ ಬರೆಯುವುದು ತಪ್ಪಿ ಯಂತ್ರದಿಂದ ಮುದ್ರಿಸುವುದು ಆರಂಭವಾಯಿತು. ಈ ಕೈಯಿಂದ ಬರೆಯುತ್ತಲಿದ್ದ ಗ್ರಂಥಗಳಿಗಾಗಿ ಪಾಶ್ಚಿಮಾತ್ಯರು 'Manuscripts' ಎಂಬ ಪದವನ್ನು ಬಳಸಿದರು.

"ಲ್ಯಾಟಿನ್‌ನ Manus ಕೈ ಮತ್ತು Scriptum - ಬರವಣಿಗೆ ಇವೆರಡ ಪದಗಳ ರೂಪವಾದ Manuscriptum ಎಂಬುದನ್ನು ಇಂಗ್ಲೀಷ್ ಭಾಷೆ 'Manuscripts' ಎಂಬುದಾಗಿ ತದ್ಭವೀಕರಿಸಿಕೊಂಡಿತು. ಇದನ್ನೇ ನಮ್ಮ ವಿದ್ವಾಂಸರು ಕೈ ಬರವಣಿಗೆ, ಹಸ್ತಪ್ರತಿ ಎಂದು ಭಾಷಾಂತರಿಸಿಕೊಂಡಿದ್ದಾರೆ"[೫]

ಒಟ್ಟಾರೆಯಾಗಿ ಹಸ್ತಪ್ರತಿ ಎಂದರೆ ಕೈಯಿಂದ ರೂಪಪಡೆದ ಬರವಣಿಗೆ ಎಂದು ಹಾಗೂ ಕೈಯಿಂದ ಬರೆದ ಪ್ರಾಚೀನ ಕಾಲದ ಗ್ರಂಥ, ದಾಖಲೆ, ಶಾಸನಗಳಲ್ಲದೆ ಅಚ್ಚಿಗಾಗಿ ಸಿದ್ಧಪಡಿಸುವ ಇಂದಿನ ಯಾವುದೇ ಬರವಣಿಗೆಗಳು ಹಸ್ತಪ್ರತಿಗಳೇ ಆಗಿವೆ.

ಇಂದು ಹಸ್ತಪ್ರತಿಶಾಸ್ತ್ರ ಎನ್ನುವುದು ವಿಸ್ತಾರವಾದ ವ್ಯಾಪ್ತಿಯನ್ನು ಒಳಗೊಂಡಿದೆ. ಇತಿಹಾಸ, ಸಂಸ್ಕೃತಿ, ಸಮಾಜ, ಜನಜೀವನದ ನಂಬಿಕೆ, ಆಚರಣೆ, ಧಾರ್ಮಿಕತೆ, ಭಾಷಿಕ ಅಂಶಗಳು ಹೀಗೆ ಹಲವು ಶಿಸ್ತುಗಳಷ್ಟೇ ಅಲ್ಲದೇ ಇವುಗಳ ಪರಸ್ಪರ ಅಂತರಶಿಸ್ತೀಯ ಅಧ್ಯಯನವನ್ನು ಈ ಹಸ್ತಪ್ರತಿಶಾಸ್ತ್ರ ಒದಗಿಸುತ್ತದೆ.

ಈ ಹಸ್ತಪ್ರತಿಶಾಸ್ತ್ರಕ್ಕೆ ಪ್ರೊ.ಎಂ.ವಿ.ಸೀತಾರಾಮಯ್ಯನವರು, ಡಾ.ಎಂ.ಎಂ.ಕಲ್ಬುರ್ಗಿ, ಡಾ.ಟಿ.ವಿ.ವೆಂಕಟಾಚಲಶಾಸ್ತ್ರಿ, ಡಾ.ಆರ್.ಎಸ್.ಶಿವಗಣೇಶಮೂರ್ತಿ, ಶ್ರೀ.ಬಿ.ಎಸ್.ಸಣ್ಣಯ್ಯ, ಡಾ.ನಾ.ಗೀತಾಚಾರ್ಯ ಮುಂತಾದ ವಿದ್ವಾಂಸರು ಒಂದು ವ್ಯವಸ್ಥಿತವಾದ ಚೌಕಟ್ಟನ್ನು ನಿರ್ಮಿಸಿದರು.

ಎಂ.ವಿ.ಸೀತಾರಾಮಯ್ಯನವರು ಹೇಳುವಂತೆ "ಹಸ್ತಪ್ರತಿಶಾಸ್ತ್ರ ಪೂರ್ವಖಂಡವಾದರೆ, ಗ್ರಂಥಸಂಪಾದನೆ ಉತ್ತರಖಂಡವಾಗಿದೆ. ಗ್ರಂಥಸಂಪಾದನೆ ಹಸ್ತಪ್ರತಿಯೊಂದನ್ನು ಮುದ್ರಿತ ರೂಪಕ್ಕೆ

ತರುವ ಪ್ರಕ್ರಿಯೆಯಾದರೆ ಹಸ್ತಪ್ರತಿಶಾಸ್ತ್ರ ಆ ಹಸ್ತಪ್ರತಿಗಳನ್ನು ಕಾಪಾಡುವ, ಸುಸ್ಥಿತಿಯಲ್ಲಿಡುವ ಸಂರಕ್ಷಣ ಪ್ರಕ್ರಿಯೆಯಾಗಿದೆ"[1] ಎನ್ನುತ್ತಾರೆ.

ಒಟ್ಟಾರೆಯಾಗಿ ಹಸ್ತಪ್ರತಿ ಎನ್ನುವುದು ಮೊದಲು ಓಲೆಗರಿ, ಕಾಗದ, ಬೂರ್ಜಪತ್ರ ಮುಂತಾದವುಗಳ ಮೂಲಕ ಬರೆದಿರುವುದನ್ನು ಹಸ್ತಪ್ರತಿ ಎನ್ನಲಾಗುತ್ತಿದದು ನಂತರ ಈ ಹಸ್ತಪ್ರತಿಗಳ ಸ್ವರೂಪ, ಮಹತ್ವ, ಸಂಗ್ರಹ, ಸಂರಕ್ಷಣೆ, ಸಂಪ್ರತೀಕರಣ, ಸೂಚೀಕರಣ ಹೀಗೆ ಇತ್ಯಾದಿ ಕಾರ್ಯ ವಿಧಾನಗಳನ್ನು ಹಸ್ತಪ್ರತಿಶಾಸ್ತ್ರ ಎಂದು ಕರೆಯಬಹುದು.

- ಹಸ್ತಪ್ರತಿಗಳ ಸ್ವರೂಪ ಎಂದಾಗ ಬರೆಯಲು ಉಪಯೋಗಿಸುವ ಸಾಮಗ್ರಿಗಳಾದ ಬೂರ್ಜಪತ್ರ, ತಾಳೆಗರಿ, ಕಾಗದ, ಕಡತ ಮುಂತಾದ ಸಾಧನಗಳನ್ನು ಹಾಗೂ ಲಿಪಿಯ ವೈವಿಧ್ಯತೆಯನ್ನು ಇಲ್ಲಿ ನೋಡಬಹುದಾಗಿದೆ.
- ಹಸ್ತಪ್ರತಿ ಸಂಗ್ರಹದಲ್ಲಿ ಹಸ್ತಪ್ರತಿಗಳನ್ನು ಸಂಗ್ರಹಿಸಿಡುವ ಸಂಸ್ಥೆಗಳಾದ ಕನ್ನಡ ಸಾಹಿತ್ಯ ಪರಿಷತ್ತು, ಬಿ.ಎಂ.ಶ್ರೀ ಪ್ರತಿಷ್ಠಾನ, ಜೈನ, ವೀರಶೈವ, ವೈದಿಕ ಮಠಗಳು ಹೀಗೆ ಅನೇಕ ಸಂಸ್ಥೆಗಳು ಹಸ್ತಪ್ರತಿಗಳು ಹಾಳಾಗದಂತೆ ಸಂಗ್ರಹಿಸಿರುವುದನ್ನ ನೋಡಬಹುದು.
- ಹಸ್ತಪ್ರತಿ ಸಂರಕ್ಷಣೆಯಲ್ಲಿ ಹಸ್ತಪ್ರತಿಗಳು ಕ್ರಿಮಿ-ಕೀಟಗಳಿಂದ ಹಾಳಾಗದೇ ಇರುವ ಹಾಗೆ ಹಸ್ತಪ್ರತಿಗಳಿಗೆ ತೈಲ, ಮಸಿ, ಹಾಗೂ ಹಲವು ರಾಸಾಯನಿಕ ಪದಾರ್ಥಗಳನ್ನು ಲೇಪನ ಮಾಡಿ ಇಡುತ್ತಿದ್ದನ್ನು ನೋಡಬಹುದು.
- ಹಸ್ತಪ್ರತಿಗಳ ಸಂಪ್ರತೀಕರಣದಲ್ಲಿ ಲಿಪಿಕಾರರು ಪ್ರಮುಖರಾಗಿದ್ದು ಇಲ್ಲಿ ನಿಯುಕ್ತ ಲಿಪಿಕಾರರು, ಹವ್ಯಾಸಿ ಲಿಪಿಕಾರರು ಹಾಗೂ ವೃತ್ತಿ ಲಿಪಿಕಾರರೆಂದು ವರ್ಗೀಕರಿಸಬಹುದು ಹಾಗೂ ಲಿಪಿಕಾರರ ಆದರ್ಶಗಳನ್ನು ಇಲ್ಲಿ ನೋಡಬಹುದು.
- ದಾಖಲೀಕರಣದಲ್ಲಿ ಹಸ್ತಪ್ರತಿಗಳ ಪಟ್ಟಿಯನ್ನು ಸಿದ್ಧಪಡಿಸುವುದು, ಮೈಕ್ರೋಫಿಲ್ಮಿಂಗ್ ಹಾಗೂ ಸಾಫ್ಟ್‌ವೇರ್ ತಂತ್ರಜ್ಞಾನ ಮುಂತಾದ ವೈಜ್ಞಾನಿಕ ವಿಧಾನದಿಂದ ದಾಖಲೀಕರಣ ಮಾಡುವುದನ್ನು ನೋಡಬಹುದು.
- ಹಸ್ತಪ್ರತಿ ಸೂಚೀಕರಣವು ಕೊನೆಯ ಹಂತವಾಗಿದ್ದು ಇದರಿಂದ ಹಸ್ತಪ್ರತಿಯ ವಿವರವನ್ನು ಹೆಚ್ಚಾಗಿ ತಿಳಿದುಕೊಳ್ಳಬಹುದಾಗಿದೆ.

"ಹಸ್ತಪ್ರತಿ ಸೂಚಿಗಳು ಅಂಗೈಯಲ್ಲಿ ಅರಮನೆ ತೋರಿಸುವ ಸಂಕ್ಷಿಪ್ತ ಸೂಚಿಗಳು, ವ್ಯವಸ್ಥಿತ ನಿರ್ಮಿತಿಯಿಂದಾಗಿ ಸೂಚೀ ಸಾಹಿತ್ಯಕ್ಕೆ ಇಂದು ವಿಜ್ಞಾನ ಮರ್ಯಾದೆ ಪ್ರಾಪ್ತವಾಗಿದೆ"[2] ಎಂಬುದನ್ನು ನೋಡಬಹುದು. ಇದರಿಂದ ಅಧ್ಯಯನ, ಉಪಯೋಗ ಇನ್ನು ಅಧಿಕಗೊಳ್ಳುತ್ತದೆ.

ಹೀಗೆ ಈ ಮೇಲಿನ ಎಲ್ಲಾ ಅಂಶಗಳು ಹಸ್ತಪ್ರತಿಶಾಸ್ತ್ರದ ಪ್ರಮುಖ ಅಂಶಗಳಾಗಿ ಕಾರ್ಯ ನಿರ್ವಹಿಸುವುದನ್ನು ನೋಡಬಹುದು.

## ಹಸ್ತಪ್ರತಿ ಅಧ್ಯಯನ :-

ಹಸ್ತಪ್ರತಿ ಅಧ್ಯಯನವು ಗ್ರಂಥಸಂಪಾದನೆ ಹಾಗೂ ಹಸ್ತಪ್ರತಿಶಾಸ್ತ್ರಕ್ಕಿಂತ ಬೇರೆಯಾದದ್ದು ಹಾಗೂ ಭಿನ್ನವಾದುದ್ದು. ಗ್ರಂಥಸಂಪಾದನಾ ಶಾಸ್ತ್ರವೂ ಹಸ್ತಪ್ರತಿಶಾಸ್ತ್ರದ ಬೆಳವಣಿಗೆಗೆ ಕಾರಣವಾದರೆ ಹಸ್ತಪ್ರತಿಶಾಸ್ತ್ರವು ಹಸ್ತಪ್ರತಿ ಅಧ್ಯಯನದ ಬೆಳವಣಿಗೆಗೆ ಕಾರಣವಾಗಿದೆ ಎನ್ನಬಹುದು. ಹೀಗೆ ಗ್ರಂಥ ಸಂಪಾದನೆ ಮತ್ತು ಹಸ್ತಪ್ರತಿಗಳ ಮುಂದುವರಿದ ಚಿಂತನಾಕ್ರಮವನ್ನು ಹಸ್ತಪ್ರತಿ ಅಧ್ಯಯನ ಎನ್ನಬಹುದು.

ಗ್ರಂಥಸಂಪಾದನೆ, ಹಸ್ತಪ್ರತಿಶಾಸ್ತ್ರ, ಹಸ್ತಪ್ರತಿ ಅಧ್ಯಯನ ಈ ಮೂರು ಸಹ ಪರಸ್ಪರ ಪೂರಕವಾಗಿದ್ದು ಒಂದರೊಳಗೊಂದು ಸಂಬಂಧವನ್ನು ಪಡೆದುಕೊಳ್ಳುತ್ತಾ ಒಂದು ಶಿಸ್ತಾಗಿ ಪರಿಣಮಿಸಿರುವುದನ್ನು ನೋಡಬಹುದು.

"ಗ್ರಂಥ ಸಂಪಾದನೆಯು ಪಠ್ಯಕೇಂದ್ರಿತ, ಕೃತಿಕೇಂದ್ರಿತ ಅಧ್ಯಯನವಾಗಿದ್ದು, ಹಸ್ತಪ್ರತಿಶಾಸ್ತ್ರ ಸಾಮಗ್ರಿಕೇಂದ್ರಿತ, ಪ್ರತಿ ಕೇಂದ್ರಿತ ಅಧ್ಯಯನವಾಗಿದ್ದು, ಹಸ್ತಪ್ರತಿ ಅಧ್ಯಯನ 'ವಿಷಯ ಕೇಂದ್ರಿತ' ಸಂಸ್ಕೃತಿ ಕೇಂದ್ರಿತ ಅಧ್ಯಯನವಾಗಿದೆ"[೮]

ಹೀಗೆ ಗ್ರಂಥ ಸಂಪಾದನೆಯಿಂದ ಈ ಹಸ್ತಪ್ರತಿ ಅಧ್ಯಯನ ಎನ್ನುವಂತಹ ಚಿಂತನೆ ಆರಂಭವಾಯಿತನ್ನಬಹುದು. 'ಹಸ್ತಪ್ರತಿಗಳನ್ನು ಒಟ್ಟಾರೆಯಾಗಿ ಅಧ್ಯಯನಕ್ಕೆ ಒಳಪಡಿಸುವ ಚಿಂತನಾ ಕ್ರಮವೇ ಹಸ್ತಪ್ರತಿ ಅಧ್ಯಯನವಾಗಿದೆ' ಹಾಗೂ ಹಸ್ತಪ್ರತಿಗಳಲ್ಲಿ ಸಿಗುವ ಅನೇಕ ವಿಷಯಗಳ ಬಗ್ಗೆ ನಡೆಸುವ ಹಸ್ತಪ್ರತಿಗಳ ಸಾಂಸ್ಕೃತಿಕ, ಬಹುಮುಖಿ, ಬಹುಶಾಸ್ತ್ರೀಯ ಅಧ್ಯಯನವೇ ಹಸ್ತಪ್ರತಿ ಅಧ್ಯಯನ ಎಂದು ಹೇಳಬಹುದು.

ಒಟ್ಟಾರೆಯಾಗಿ ಹಸ್ತಪ್ರತಿ ಅಧ್ಯಯನಶಾಸ್ತ್ರ ಎನ್ನುವುದು ಗ್ರಂಥಸಂಪಾದನೆಯನ್ನು ಒಳಗೊಂಡಂತಹ ಒಂದು ಬಹುಮುಖಿ ಶಿಸ್ತುಗಳನ್ನು ಬಯಸುವ ಒಂದು ವ್ಯಾಪಕ ಅಧ್ಯಯನಾಂಗವಾಗಿದೆ. "ಇದರಲ್ಲಿ ಇತಿಹಾಸವಿದೆ, ಸಮಾಜವಿದೆ, ಭಾರತೀಯ ವಿದ್ಯೆಗಳಾದ ವಿಜ್ಞಾನ, ವೈದ್ಯ, ಜ್ಯೋತಿಷ್ಯ, ವಾಸ್ತು, ತಾಂತ್ರಿಕ, ಧರ್ಮಶಾಸ್ತ್ರಗಳಿವೆ ಹಾಗೂ ಸಾಂಸ್ಕೃತಿಗೆ ಸಂಬಂಧಪಟ್ಟಂತೆ ವಿಭಿನ್ನ ಆಚರಣೆಗಳು, ವ್ಯಕ್ತಿಗಳ ಮನೋಭಾವಗಳಿವೆ, ನಂಬಿಕೆಗಳಿವೆ ಹೀಗೆ ಇವುಗಳೆಲ್ಲದರ ಬಿಡಿ

ಅಧ್ಯಯನವೇ ಹಸ್ತಪ್ರತಿ ಅಧ್ಯಯನಶಾಸ್ತ್ರವಾಗಿದೆ" ಎಂಬುದರ ಮೂಲಕ ಹಸ್ತಪ್ರತಿ ಅಧ್ಯಯನದ ವ್ಯಾಪಕತೆ ವ್ಯಕ್ತವಾಗುತ್ತದೆ.

ಈ ಹಸ್ತಪ್ರತಿ ಅಧ್ಯಯನ ಶಾಸ್ತ್ರದಲ್ಲಿ 'ಪುಷ್ಪಿಕೆಗಳು' ಅತ್ಯಂತ ಅಮೂಲ್ಯವಾದ ಸಾಂಸ್ಕೃತಿಕ ಆಕರವೆನ್ನಬಹುದು.

**ಪುಷ್ಪಿಕೆಗಳು :–**

ಈ ಪುಷ್ಪಿಕೆಗಳನ್ನು 'ಕಾಲೋಫಿನ್ಸ್', 'ಪ್ರಶಸ್ತಿಬರಹ' ಎಂದು ಕರೆಯಬಹುದು. ಹಸ್ತಪ್ರತಿಗಳನ್ನು ಕೇವಲ ಸಾಹಿತ್ಯ ಅಧ್ಯಯನದ ಪ್ರಾಚೀನ ಸಾಮಗ್ರಿಗಳಾಗಿ ಹಾಗೂ ಗ್ರಂಥ ಸಂಪಾದನೆಗಷ್ಟೇ ಸೀಮಿತವಾಗದೇ ಸಾಂಸ್ಕೃತಿಕ ಅಧ್ಯಯನ ಆಕರಗಳಾಗಿ ಹಸ್ತಪ್ರತಿಗಳ ಅಧ್ಯಯನವನ್ನು ನೋಡಬಹುದು. ಇದು ಸಂಸ್ಕೃತಿಯನ್ನು ದಾಖಲಿಸುವ ಪ್ರಮುಖ ಅಧ್ಯಯನವಾಗಿದೆ. ಇದುವರೆವಿಗೂ "ಹಸ್ತಪ್ರತಿಗಳು, ಶಾಸನ, ದಾಖಲೆ, ಸೂಚಿಗಳು, ಕಡತಗಳು, ಬಖೈರುಗಳು ಆಕರಕೋಶಗಳಾಗಿದ್ದವು. ಈಗ ಹಸ್ತಪ್ರತಿ ಪುಷ್ಪಿಕೆಗಳು ಸಹ ಸಂಸ್ಕೃತಿಯನ್ನು ಪುನರ್ ರಚಿಸುವ ಆಕರಗಳಾಗಿವೆ"[೧೦] ಎನ್ನಬಹುದು.

ಈ ಹಸ್ತಪ್ರತಿ ಪುಷ್ಪಿಕೆಗಳಲ್ಲಿ ಆದಿ–ಅಂತ್ಯದ ಹೇಳಿಕೆಗಳು ಕೃತಿಯನ್ನು ಬರೆದವರ, ಬರೆಯಿಸಿದವರ ಚರಿತ್ರೆ ಮತ್ತು ಇತರ ವಿಷಯಗಳ ಬಗ್ಗೆ ಹೆಚ್ಚು ಮಾಹಿತಿಯನ್ನು ಒದಗಿಸುತ್ತದೆ. ಹಾಗೂ ಸ್ಥಳೀಯ ಸಂಸ್ಕೃತಿಯನ್ನು ತಿಳಿಯುವಲ್ಲಿ ಪುಷ್ಪಿಕೆಗಳು ಪ್ರಧಾನವಾಗಿರುವುದರಿಂದ ಇದನ್ನ ಮೂಲ ಆಕರ ಸಾಮಗ್ರಿಯಾಗಿ ಪರಿಗಣಿಸಬಹುದಾಗಿದೆ.

ಹಸ್ತಪ್ರತಿ ಲಿಪಿಕಾರರು ಇಲ್ಲಿ ಪ್ರಮುಖವಾಗಿದ್ದು ಪುಷ್ಪಿಕೆಗಳಲ್ಲಿ ತಮ್ಮ ಚರಿತ್ರೆಗೆ ಉಪಯುಕ್ತವಾದ ಸಂಗತಿಗಳನ್ನು ನೀಡಿದ್ದಾರೆ. ಇವರ ಚರಿತ್ರೆಗೆ ಸಂಬಂಧಿಸಿದಂತೆ ಲಿಪಿಕಾರರ ಹೆಸರು, ಅವರು ವಾಸಿಸುತ್ತಿದ್ದ ಗ್ರಾಮ, ತಂದೆ, ಗುರು, ಇಷ್ಟದೈವ, ವಂಶ ಇತ್ಯಾದಿ ವಿವರಗಳು ಈ ಪುಷ್ಪಿಕೆಗಳಿಂದ ದೊರೆಯುವುದನ್ನು ನೋಡಬಹುದು. ಹಾಗೆಯೇ ಇವರು ವಾಸ ಮಾಡುತ್ತಿದ್ದ ಗ್ರಾಮ ಅಥವಾ ಪ್ರತಿ ಮಾಡಿಸಿದ ಸ್ಥಳಗಳು ಹಸ್ತಪ್ರತಿಗಳ ಪ್ರಾದೇಶಿಕತೆಯನ್ನು ತಿಳಿದುಕೊಳ್ಳಲು ಸಾಧ್ಯವಾಗುತ್ತದೆ. ಹೀಗೆ ಈ ಪುಷ್ಪಿಕೆಗಳಿಂದ ಹಸ್ತಪ್ರತಿ ಪ್ರತಿಕಾರನ ಮನೋಭಾವಗಳನ್ನು ಅವರ ಸಾಮಾಜಿಕ ಆಚರಣೆಗಳಿಂದ, ಜೀವನ ವಿವರಗಳು, ಬದುಕಿನ ಮೌಲ್ಯಗಳು ದಾಖಲಾಗಿರುವುದನ್ನು ನೋಡಬಹುದು.

"ಹಸ್ತಪ್ರತಿ ಪುಷ್ಪಿಕೆಗಳಲ್ಲಿ ದೊರೆಯುವ ಮತ್ತೊಂದು ಮುಖ್ಯ ಸಂಗತಿ ಎಂದರೆ 'ಸ್ಥಳೀಯ ಅರಸರ ಚರಿತ್ರೆ' ಇಂದು ಇತಿಹಾಸದಲ್ಲಿ ದಾಖಲಾಗದೇ ಇರುವ ಎಷ್ಟೋ ಸ್ಥಳೀಯ ವಿವರಗಳು ಹಸ್ತಪ್ರತಿಗಳ ಪುಷ್ಪಿಕೆಗಳಲ್ಲಿ ದೊರೆಯುವುದರೊಂದಿಗೆ ಅವರ ಅಧಿಕಾರ ಇತ್ಯಾದಿ ವಿವರಗಳು

ದೊರೆಯುವುದನ್ನ ನೊಡಬಹುದು"[11] ಹಾಗೆಯೇ ಅನೇಕ ಮಠ, ಬಸದಿಗಳ ಹೆಸರು, ಮಠಾಧೀಶರ ಹೆಸರು, ಅವರ ಕಾಲಾವಧಿ, ಗುರು-ಶಿಷ್ಯರ ಸಂಬಂಧ ಇತ್ಯಾದಿ ಮಾಹಿತಿಗಳು ಪುಷ್ಪಿಕೆಗಳಲ್ಲಿ ದೊರೆಯುತ್ತದೆ.

ಹೀಗೆ ಹಸ್ತಪ್ರತಿ ಪುಷ್ಪಿಕೆಗಳಲ್ಲಿ ಲಿಪಿಕಾರರ ಬಗ್ಗೆ, ಧಾರ್ಮಿಕತೆ, ಸಾಮಾಜಿಕತೆ, ಭಾಷೆ, ಗ್ರಂಥದಾನ ಇತ್ಯಾದಿ ವಿವರಗಳನ್ನು ನೋಡಬಹುದು. ಈ ಎಲ್ಲಾ ಪ್ರಮುಖ ಅಂಶಗಳನ್ನು ನಾವು ಎಸ್.ಶಿವಣ್ಣನವರು ಸಂಪಾದಿಸಿರುವ 'ವೀರಶೈವ ಹಸ್ತಪ್ರತಿ ಪುಷ್ಪಿಕೆಗಳು' ಎಂಬ ಗ್ರಂಥದಲ್ಲಿ ನೋಡಬಹುದಾಗಿದೆ.

## ಅಡಿ ಟಿಪ್ಪಣಿಗಳು

೧. ಕನ್ನಡ ಗ್ರಂಥಸಂಪಾದನೆ : ಡಾ.ಡಿ.ಎಲ್.ನರಸಿಂಹಾಚಾರ್, ಶಾರದ ಮಂದಿರ, ಮೈಸೂರು, ಮೂರನೆ ಮುದ್ರಣ–೧೯೭೬.

೨. ಹಸ್ತಪ್ರತಿ ಅಧ್ಯಯನ ಶಾಸ್ತ್ರ : ಡಾ.ನಾ.ಗೀತಾಚಾರ್ಯ, ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ, ಬೆಂಗಳೂರು, ೨೦೦೯, ಪುಟ–೧೬

೩. ಮಣಿಹ : ಸಂ. ಎಂ.ವಿ.ಸೀತಾರಾಮಯ್ಯ ಮತ್ತು ಡಾ.ಆರ್.ಶೇಷಶಾಸ್ತ್ರೀ, ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ, ಬೆಂಗಳೂರು, ೧೯೮೨, ಪುಟ–೧೦೩

೪. ಕನ್ನಡ ಗ್ರಂಥಸಂಪಾದನೆ : ಡಾ.ಡಿ.ಎಲ್.ನರಸಿಂಹಾಚಾರ್, ಶಾರದ ಮಂದಿರ, ಮೈಸೂರು, ಮೂರನೆ ಮುದ್ರಣ–೧೯೭೬, ಪುಟ–೧೦

೫. ಕನ್ನಡ ಹಸ್ತಪ್ರತಿಶಾಸ್ತ್ರ : ಡಾ.ಎಂ.ಎಂ.ಕಲಬುರ್ಗಿ, ಸ್ನೇಹ ಪ್ರಕಾಶನ, ಬೆಂಗಳೂರು, ೧೯೯೩, ಪುಟ–೩

೬. ಹಸ್ತಪ್ರತಿ ಅಧ್ಯಯನ ಶಾಸ್ತ್ರ : ಡಾ.ನಾ.ಗೀತಾಚಾರ್ಯ, ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ, ಬೆಂಗಳೂರು, ೨೦೦೯, ಪುಟ–೨೦

೭. ಅದೇ, ಪುಟ –೩೧

೮. ಅದೇ, ಪುಟ –೩೩

೯. ಅದೇ, ಪುಟ –೩೫

೧೦. ವೀರಶೈವ ಹಸ್ತಪ್ರತಿ ಪುಷ್ಪಿಕೆಗಳು : ಶ್ರೀ.ಎಸ್.ಶಿವಣ್ಣ, ವೀರಶೈವ ಅಧ್ಯಯನ ಸಂಸ್ಥೆ, ಗದಗ, ೧೯೯೪, ಪ್ರಕಾಶಕರ ನುಡಿ

೧೧. ಹಸ್ತಪ್ರತಿ ವ್ಯಾಸಂಗ : ಡಾ.ಎಫ್.ಟಿ.ಹಳ್ಳೀಕೇರಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮, ಪುಟ–೧೭೮

# ಅಧ್ಯಾಯ – ೪

## ವೀರಶೈವ ಹಸ್ತಪ್ರತಿ ಪುಷ್ಪಿಕೆಗಳ ಸಾಂಸ್ಕೃತಿಕ ಅಧ್ಯಯನ

ಕರ್ನಾಟಕದಲ್ಲಿ ಜೈನಧರ್ಮ ಶೈವಧರ್ಮ ಹಾಗೂ ವೈಷ್ಣವಧರ್ಮ ಅತ್ಯಂತ ಪ್ರಮುಖ ಧರ್ಮಗಳೆಂದೇ ಗುರುತಿಸಬಹುದು. ಈ ಮೂರು ಧರ್ಮಗಳು ಸಹ ಕಾಲದಿಂದ ಕಾಲಕ್ಕೆ, ಪೀಳಿಗೆಯಿಂದ ಪೀಳಿಗೆಗೆ ಬಂದಿದ್ದಂತಹ ಹಸ್ತಪ್ರತಿಗಳನ್ನು ಸಂಗ್ರಹಿಸಿ ಸಂರಕ್ಷಿಸಿ ಬೆಳೆಸಿರುವುದನ್ನು ನೋಡಬಹುದು. ಇವರ ಸಂರಕ್ಷಣಾ ಕಾರ್ಯದಿಂದಲೇ ಇಂದು ನಾವು ಹಸ್ತಪ್ರತಿಗಳ ಬಗೆಗೆ ಹೆಚ್ಚಿನ ಮಾಹಿತಿಗಳನ್ನು ತಿಳಿದುಕೊಳ್ಳುವುದಕ್ಕೆ ಹಾಗೂ ನಮ್ಮ ಜ್ಞಾನದ ವೃದ್ಧಿಗೆ ಸಹಾಯಕವಾಗುತ್ತಿದೆ.

ಜೈನ, ವೈಷ್ಣವರಂತೆ ಶೈವರು ಸಹ ಅಧಿಕ ಪ್ರಮಾಣದಲ್ಲಿ ಹಸ್ತಪ್ರತಿಗಳನ್ನು ಬೆಳೆಸಿದವರೆಂದು ಹೇಳಬಹುದು. ಇವರಲ್ಲಿ ಮಠಗಳು ವಿದ್ಯಾಕೇಂದ್ರಗಳಾಗಿದ್ದು, ಅಲ್ಲಿ ದೊಡ್ಡ ಪ್ರಮಾಣದ ಗ್ರಂಥಭಂಡಾರವನ್ನೇ ನೋಡಬಹುದು. ಇದರಿಂದಾಗಿ ಇವರ ಮಠಗಳಂತಹ ಧಾರ್ಮಿಕ ಕೇಂದ್ರಗಳಲ್ಲಿ ಒಂದು ಧರ್ಮದ ಸಾಹಿತ್ಯ ಹೆಚ್ಚು ಪ್ರಸಾರವಾಗುವುದನ್ನು ನೋಡಬಹುದು.

ಇದಕ್ಕೆ ಉದಾಹರಣೆಯಾಗಿ ಶ್ರೀಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಗದಗನ್ನು ತೆಗೆದುಕೊಳ್ಳಬಹುದಾಗಿದೆ. ಈ ಸಂಸ್ಥಾನಮಠವು ಶ್ರೀತೋಂಟದ ಸಿದ್ಧಲಿಂಗಯತಿಗಳ ಪರಿಶ್ರಮದಿಂದ ಸ್ಥಾಪಿಸಲ್ಪಟ್ಟಿದೆ. ಈ ಸಂಸ್ಥಾನಮಠದಲ್ಲಿ

- "ವೀರಶೈವ ಹಸ್ತಪ್ರತಿ, ಪ್ರಾಚ್ಯವಸ್ತುಗಳ ಸಂಗ್ರಹ ಮತ್ತು ಸಂರಕ್ಷಣೆ ಮಾಡುವುದು.
- ವೀರಶೈವ ಪುರಾತನ, ನೂತನ ಕೃತಿಗಳ ಗ್ರಂಥಭಂಡಾರ ಸ್ಥಾಪನೆ
- 'ವೀರಶೈವ ನೂತನ ಸಾಹಿತ್ಯ ರತ್ನಮಾಲೆ' ಹೆಸರಿನಲ್ಲಿ ಧರ್ಮ, ಸಂಸ್ಕೃತಿ, ಸಾಹಿಯ, ಸಮಾಜಗಳಿಗೆ ಸಂಬಂಧಪಟ್ಟ ಕೃತಿಗಳನ್ನು ಪ್ರಕಟಿಸುವುದು.
- 'ಸಮಗ್ರ ವೀರಶೈವ ಅಪ್ರಕಟಿತ ಪ್ರಾಚೀನ ಸಾಹಿತ್ಯ ಪ್ರಕಟನಾ ಯೋಜನೆ'ಯ ಮೂಲಕ ಪ್ರಾಚೀನ ವೀರಶೈವ ಅಪ್ರಕಟಿತ ಕೃತಿಗಳನ್ನು ಪ್ರಕಟಿಸುವುದು.
- ಅನುವಾದ ಸಾಹಿತ್ಯ ರತ್ನಮಾಲೆ'ಯ ಮೂಲಕ ಕನ್ನಡ ಮತ್ತು ಅನ್ಯಭಾಷೆಗಳ ವೀರಶೈವ ಕೃತಿಗಳನ್ನು ಪರಸ್ಪರ ಅನುವಾದ ಮಾಡುವುದು.
- 'ವೀರಶೈವ ಪುಣ್ಯಪುರುಷ ರತ್ನಮಾಲೆ'ಯ ಆಶ್ರಯದಲ್ಲಿ ವೀರಶೈವ ಸಮಾಜದಲ್ಲಿ ಬೆಳಗಿ ಹೋದ ಮಹಾಪುರುಷರ ಚರಿತ್ರೆಗಳನ್ನು ಪ್ರಕಟಿಸುವುದು.

• ವಿದ್ವಾಂಸರಿಂದ 'ವೀರಶೈವ ಗೋಷ್ಠಿ' ನಡೆಸುವುದು"[೧]

ಹೀಗೆ ಪ್ರಮುಖ ಧ್ಯೇಯಗಳನ್ನು ಹೊಂದಿದ್ದು ಇವುಗಳ ಮೂಲಕ ತನ್ನ ಕರ್ನಾಟಕದಾದ್ಯಂತ ತನ್ನ ವಿಸ್ತಾರತೆಯನ್ನು ಪಡೆದುಕೊಂಡಿರುವುದನ್ನು ನೋಡಬಹುದು.

ಎಸ್.ಶಿವಣ್ಣನವರ 'ವೀರಶೈವ ಹಸ್ತಪ್ರತಿ ಪುಷ್ಪಿಕೆಗಳು ಸಂಪುಟ-೧' ಎಂಬ ಕೃತಿಯು 'ವೀರಶೈವ ನೂತನ ರತ್ನಮಾಲೆ'ಯಲ್ಲಿ ಪ್ರಕಟವಾಗಿರುವುದನ್ನು ನೋಡಬಹುದು.

ಎಸ್.ಶಿವಣ್ಣನವರು 'ವೀರಶೈವ ಹಸ್ತಪ್ರತಿ ಪುಷ್ಪಿಕೆಗಳು' ಎಂಬ ಗ್ರಂಥದಲ್ಲಿ ಅವರ ಬರಹದ ಶೈಲಿಯ ಬಗೆಗೆ ಕೆಲವು ಮಾಹಿತಿಗಳನ್ನು ಮೊದಲ ಮಾತಿನಲ್ಲಿ ಓದುಗರಿಗೆ ಅನುಕೂಲವಾಗಲೆಂದು ನೀಡಿದ್ದಾರೆ. ಅವುಗಳೆಂದರೆ

- ಈ ಗ್ರಂಥದಲ್ಲಿ '೨೩೧೬' ಕೃತಿಗಳ ಉಲ್ಲೇಖವನ್ನು ಕೊಟ್ಟಿದ್ದು ಕೃತಿಗಳನ್ನು ಅಕಾರಾದಿ ಕ್ರಮದಲ್ಲಿ ಅಳವಡಿಸಿರುವುದು
- ಕೃತಿಯ ಹೆಸರು, ಕರ್ತೃ, ಕಾಲಗಳನ್ನು ಮೊದಲು ಕೊಟ್ಟಿದ್ದು ಅನಂತರ ಕೃತಿಯ ಕ್ರಮಾಂಕ ಹಾಗೂ ಕಾಲೋಲ್ಲೇಖವನ್ನು ಶಕವರ್ಷದ ಸಂಖ್ಯಾಗಳಲ್ಲಿ ಕೊಟ್ಟಿದೆ ಹಾಗೂ ಕೃತಿಯ ಆದಿ-ಅಂತ್ಯಗಳನ್ನು ಪ್ರತ್ಯೇಕ ಸಾಲುಗಳಲ್ಲಿ ಕೊಟ್ಟಿದ್ದು ಆದಿ-ಅಂತ್ಯ ಎಲ್ಲಿಯಾದರೂ ನಕ್ಷತ್ರ ಚಿನ್ಹೆ (*)ಇದ್ದರೆ ಅದು 'ಶ್ರೀಗುರುಬಸವಲಿಂಗಾಯನಮಃ' ಎಂಬುದನ್ನು ಸಂಕೇತಿಸುತ್ತದೆ ಎಂದು ಸೂಚನೆಯನ್ನು ಕೊಟ್ಟಿದ್ದಾರೆ. ಹೀಗೆ ಓದುಗರಿಗೆ ಅನುಕೂಲವಾಗಲೆಂದು ಕೆಲವು ಮಾಹಿತಿಗಳನ್ನು ಕೊಟ್ಟಿರುವುದನ್ನು ನೋಡಬಹುದು.

ಈ 'ವೀರಶೈವ ಹಸ್ತಪ್ರತಿ ಪುಷ್ಪಿಕೆಗಳು' ಎಂಬ ಗ್ರಂಥದಲ್ಲಿ ಸಾಂಸ್ಕೃತಿಕ ಅಂಶಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡಂತೆ '೭' ಅಧ್ಯಾಯಗಳಾಗಿ ಮಾಡಿಕೊಳ್ಳಲಾಗಿದೆ.

ಅವುಗಳೆಂದರೆ :-

ಅ. ಗ್ರಂಥದಾನ

ಆ. ಲಿಪಿಕಾರರು

ಇ. ಭಾಷೆ

ಈ. ಸಾಮಾಜಿಕತೆ

ಉ. ಧಾರ್ಮಿಕತೆ

ಊ. ಐತಿಹಾಸಿಕತೆ

ಋ. ಸಾಹಿತ್ಯಕ ಅಂಶಗಳು

### ಅ. ಗ್ರಂಥದಾನ :-

ಗ್ರಂಥದಾನ ಎಂಬುದು ಭಾರತೀಯರ ಭವ್ಯಸಂಸ್ಕೃತಿಯಾಗಿದ್ದು ಎಲ್ಲ ಧರ್ಮದವರಲ್ಲಿಯೂ ಸಹ ಕಂಡುಬಂದಿದೆ. ಹಾಗೆಯೇ ಈ ಶೈವ ಧರ್ಮದಲ್ಲೂ ಸಹ ಪುಷ್ಪಿಕೆಗಳ ಮೂಲಕವಾಗಿ ಗ್ರಂಥದಾನದ ಬಗ್ಗೆ ತಿಳಿದುಕೊಳ್ಳಬಹುದಾಗಿದೆ.

ಮೊದಲಿನಿಂದಲೂ ಅನೇಕ ಮನೆಗಳಲ್ಲಿ ಸ್ವಂತ ವ್ಯಾಸಂಗಕ್ಕಾಗಿ ಮುಂದಿನ ಪೀಳಿಗೆಯ ವಿದ್ಯಾಭ್ಯಾಸಕ್ಕಾಗಿ ಹಾಗೂ ಗುರುಗಳು ಶಿಷ್ಯರಿಗೆ ಬೋಧನೆ ಮಾಡುವುದಕ್ಕಾಗಿ ತಾಳೆಗರಿಯ ಮೇಲೆ ಸ್ವತಹ ಬರೆದಿಟ್ಟುಕೊಳ್ಳುತ್ತಿದ್ದರು ಇಲ್ಲವೇ ಬರೆಯುವ ಕಲೆಯಿದ್ದವರಲ್ಲಿ ಬರೆಯಿಸಿ ಅದನ್ನು ಪ್ರತಿ ಮಾಡಿಸಿ ಗ್ರಂಥಗಳನ್ನು ಪಡೆದುಕೊಂಡು ಸಂರಕ್ಷಿಸುತ್ತಿದ್ದರು. ಹಾಗೂ ತಾವು ಬರೆದ ಅಥವಾ ಬರೆಯಿಸಿದ ಗ್ರಂಥಗಳನ್ನು ತಮ್ಮ ಪ್ರೀತಿಪಾತ್ರರಾದವರಿಗೆ ದಾನ ಮಾಡುತ್ತಿದ್ದರು. ಇದು ಮುಂದೆ ಗ್ರಂಥದಾನವಾಗಿ ಪ್ರಸಿದ್ಧಿಯಾಗಿರುವುದನ್ನು ನೋಡಬಹುದು.

ಈ ಗ್ರಂಥದಾನಕ್ಕೆ ದಾನಚಿಂತಾಮಣಿ ಎಂದೇ ಬಿರುದನ್ನು ಪಡೆದಂತಹ ಅತ್ತಿಮಬ್ಬೆಯೂ ಪೊನ್ನನ 'ಶಾಂತಿಪುರಾಣ'ದ ಸಹಸ್ರ ಪ್ರತಿಗಳನ್ನು ಪ್ರತಿ ಮಾಡಿಸಿ ದಾನ ಮಾಡಿದ ಸಂಗತಿಯನ್ನು ಉದಾಹರಣೆಯಾಗಿ ನೋಡಬಹುದು. "ದಾನಚಿಂತಾಮಣಿ ಅತ್ತಿಮಬ್ಬೆ ಪೊನ್ನನ 'ಶಾಂತಿಪುರಾಣ' ಎಸೆಯದೆ ಪೊೞ್ದು ಕೆಟ್ಟಪುದು' ಎಂದು ಭಾವಿಸಿ ಅದನ್ನು ಪ್ರಚಾರ ಮಾಡುವುದಕ್ಕಾಗಿ ಅದರ ಸಹಸ್ರ ಪ್ರತಿಗಳನ್ನು"[೨] ಮಾಡಿಸಿದ ವಿಷಯ ಪ್ರಸಿದ್ಧವಾಗಿದೆ.

"ಗ್ರಂಥವನ್ನು ಯಾರು ಯಾರಿಗೆ ಪ್ರತಿ ಮಾಡಿಕೊಡುತ್ತಾರೆ, ಅದು ಕ್ರಯಕ್ಕೆ ಪ್ರತಿ ಮಾಡಬಹುದು ಅಥವಾ ಅದರಿಂದಾಗುವ ಲಾಭಕ್ಕೆ ಪ್ರತಿ ಕೊಡಬಹುದು ಅಥವಾ ತನ್ನ ಬಂಧುವೊಬ್ಬನಿಗೆ ಸದ್ಭಾವನೆಯಿಂದ ಪ್ರತಿ ಮಾಡಿಕೊಡಬಹುದು ಅಥವಾ ಅವನಲ್ಲಿ ಓದುವ ಆಸಕ್ತಿ ಬೆಳೆಯಲ್ಲಿಕ್ಕಾದರೂ ಪ್ರತಿ ಮಾಡಿಕೊಡಬಹುದು ಅಥವಾ ಒಂದು ಸಮಾರಂಭದ, ಒಂದು ಕುಟುಂಬದ ಧಾರ್ಮಿಕ ಆಚರಣೆಯ ಭಾಗವಾಗಿ ಪ್ರತಿ ಮಾಡಿಕೊಡಬಹುದು. ಹೀಗೆ ದಾನ ಗ್ರಂಥಗಳ ಪ್ರತೀಕರಣದ ಭಿನ್ನ ಭಿನ್ನವಾದಂತಹ ಚಿಂತನೆಗಳು ನಮ್ಮ ಸಮಾಜದಲ್ಲಿ ಹೇಗೆ ನಡೆದಿದೆ ಎಂಬುದನ್ನು ಈ ಪುಷ್ಪಿಕೆಗಳ ಹಿನ್ನೆಲೆಯಲ್ಲಿ ನೋಡಬಹುದಾಗಿದೆ."[೩]

ಈ ಮೇಲಿನ ಅಂಶಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡಂತೆ ಕೊಡುವ ಉದಾಹರಣೆಗಳು 'ವೀರಶೈವ ಹಸ್ತಪ್ರತಿ ಪುಷ್ಪಿಕೆಗಳು' ಎಂಬ ಗ್ರಂಥದಲ್ಲಿ ಕೊಟ್ಟಿರುವ ಕ್ರಮಸಂಖ್ಯೆಯನ್ನು ಸೂಚಿಸುತ್ತದೆ.

'ವೀರಶೈವ ಹಸ್ತಪ್ರತಿ ಪುಷ್ಪಿಕೆಗಳು' ಎಂಬ ಗ್ರಂಥದಲ್ಲಿ ಗ್ರಂಥದಾನಕ್ಕೆ ಸಂಬಂಧಿಸಿದಂತೆ ಯಾರು? ಯಾರಿಗೆ? ಏಕೆ? ಗ್ರಂಥ ಒಂದನ್ನು ಪ್ರತಿ ಮಾಡುತ್ತಾರೆ ಎಂಬುದರ ಮೇಲೆ

- ಕೌಟುಂಬಿಕ ಸದಸ್ಯರಿಗೆ
- ಸ್ನೇಹಿತರಿಗೆ
- ಶಿಷ್ಯರು– ಹಿರಿಯರಿಗೆ
- ಗುರುಗಳಿಗೆ / ಗುರುಪೀಠಗಳಿಗೆ
- ಬೇರೆಯವರಿಂದ ಗ್ರಂಥವೊಂದನ್ನು ಬರೆಸಿ ದಾನ ಮಾಡಿರುವುದು ಕಂಡುಬರುತ್ತದೆ.

**೧. ಕುಟುಂಬ ಸದಸ್ಯರಿಗೆ ಗ್ರಂಥದಾನ :–**

ಕುಟುಂಬ ಸದಸ್ಯರಾದಂತಹ ಅಣ್ಣ, ತಮ್ಮ, ತಂದೆ, ತಾಯಿ, ತಾತಾ, ಅಜ್ಜಿ, ಮೊಮ್ಮಗ ಮುಂತಾದ ಸಂಬಂಧಿಕರಿಗೆ ಪ್ರೀತಿಗಾಗಿ, ಆಯುರಾರೋಗ್ಯಭಾಗ್ಯಕ್ಕಾಗಿ, ಜ್ಞಾನಾರ್ಜನೆಗಾಗಿ ಗ್ರಂಥದಾನವನ್ನು ಮಾಡುವುದನ್ನು ಈ ಕೆಳಗಿನ ಉಲ್ಲೇಖಗಳ ಮೂಲಕ ನೋಡಬಹುದು.

- ಗಣಭಾಷ್ಯ ರತ್ನಮಾಲೆಯನ್ನೆ ಚಿತ್ರಿಗಿ ಶಿವಾನುಭವ ಚರವರ್ಯ ಮಹಾಂತಸ್ವಾಮಿಗಳ ಹಸ್ತೋದ್ಭವರಾದ ಮುಪ್ಪಿನ ಬಸವಲಿಂಗ ಸ್ವಾಮಿಗಳು ನಂಮ ಅಡವಿ ಅಪ್ಪನವರಿಗೆ ಬರಕೊಟ್ಟದ್ದು(ಕ್ರ.ಸಂ.೧೨೯೨)

ಇಲ್ಲಿ ಗಣಭಾಷ್ಯ ರತ್ನಮಾಲೆಯನ್ನು ಮುಪ್ಪಿನ ಬಸವಲಿಂಗ ಸ್ವಾಮಿಗಳು ತಮ್ಮ ತಂದೆಯವರಿಗೆ ಈ ಪುಸ್ತಕವನ್ನು ದಾನವಾಗಿ ಕೊಟ್ಟಿರುವುದನ್ನು ನೋಡಬಹುದು.

- ಸೂಳೆಕೆರೆ ಮಠದ ಚಂನಬಸವರಾಜದೇವರ ಕರಕಮಲೋದ್ಭವನಾದ ವೋದಿಸುವ ಚಂನಬಸವೈಯನು ಶ್ಯಾಡಗುಪ್ಪೆ ಮಠದ ಬಸವಲಿಂಗ ದೇವರ ಸಂಣವರು ಮಕ್ಕಳಿಗೆ ಅಷ್ಟೈಶ್ವರ್ಯ ಸಂಪತ್ತು ಆಗಲಿಯೆಂದು ಹರಶಿ ಬರಕೊಟ್ಟ ನಂನ್ನೈಯ್ಯ ಕಾವ್ಯ (ಕ್ರ.ಸಂ.೨೦೦೬)

ಅಷ್ಟೈಶ್ಚರ್ಯ ಉಂಟಾಗಲೆಂದು ಸೂಳೆಕೆರೆಮಠದ ಚಂನಬಸವೈಯನು ಬಸವಲಿಂಗದೇವರ ಮಕ್ಕಳಿಗೆ ಹರಶಿ ಬರೆದುಕೊಟ್ಟ ನನ್ನಯ್ಯ ಕಾವ್ಯ

- ಬೈಲಬಸವನ ಮಠದ ಕಪ್ಪಂಣದ್ಯಾವರ ಕುಮಾರು ಬಸವಂಣದ್ಯಾವರು ಚಿಕ್ಕಹಳ್ಳಿ ಚಂನ್ನೇಗೌಡಗೆ ಮಹಾಆಶೀರ್ವಾದ ಮಾಡಿ ಬರಕೊಟ್ಟ ದೀಪದ ಕಲಿ ಮಸ್ತಕ (ಕ್ರ.ಸಂ.೨೩೧೧)

ದೀಪದ ಕಲಿ ಪುಸ್ತಕವನ್ನ ಆಶೀರ್ವಾದ ಮಾಡಿ ಕಪ್ಪಂಣ ದ್ಯಾವರ ಕುಮಾರ ಬಸವಂಣದ್ಯಾವ ಚನ್ನೇಗೌಡನಿಗೆ ದಾನವಾಗಿ ಕೊಟ್ಟಿರುವುದನ್ನು ನೋಡಬಹುದು.

- ಕ್ರೋದನ ಸಂವತ್ಸರದ ಫಾಲ್ಗುಣ ಬಹುಳ ೧೦ರಲ್ಲು ಮದನಗೊಂಡನಹಳ್ಳಿ ಮರೆಗವುಡನ ಮಂಮಗ ವಿರಚಂನೆಗೆ ಗೊರಗಟ್ಟಿದ ವೆಂಕಟನರಸಪ್ಪನವರು ಬರೆದುಕೊಟ್ಟ ಚೋರಕತೆ (ಕ್ರ.ಸಂ.೧೬೨೨)

ಗೊರಗಟ್ಟಿದ ವೆಂಕಟನರಪ್ಪನವರು ಮರೆಗವುಡನ ಮಮ್ಮೊಗನಿಗೆ ಚೋರಕತೆಯನ್ನ ಬರೆದು ದಾನವಾಗಿ ಬರೆದುಕೊಟ್ಟಿರುವಂತಹುದು

ದಾನಪ್ಪನ ಪೌತ್ರನಾದಂತ್ತಾ ರಾಚಂಣನ ಶಿರೆಗೆರೆ ಹುಲ್ಲೂರ ದೊಡ್ಡಪ್ಪನವರ ಕುಮಾರನಾದಂತ್ತ ಕೊಟ್ಟೂರಪ್ಪಗೆ ಬರೆದುಕೊಟ್ಟ ಚೋರಬಸವ ಚಾರಿತ್ರ್ಯ (ಕ್ರ.ಸಂ.೧೭೭೦)

ಚೋರಬಸವ ಚಾರಿತ್ರ್ಯವನ್ನು ದಾನಪ್ಪನ ಪುತ್ರನಾದಂತ ರಾಚಣ್ಣನು ತನ್ನ ದೊಡ್ಡಪ್ಪನ ಮಗನಾದ ಕುಟ್ಟೂರಪ್ಪಗೆ ದಾನವಾಗಿ ಕೊಟ್ಟಿರುವಂತಹುದು

- ರೌದ್ರಿ ಸಂವತ್ಸರ ಶ್ರಾವಣ ಬ೧೦ರಲ್ಲೂ ಬಸವಲಿಂಗದೇವರ ಸಿದ್ದಪ್ಪನ ಮಗ ರೇವಣ್ಣನಿಗೆ ಸಂಪಿಗೆ ಉಂಗ್ರಾಮ್ಮೆಯನು ಹರಸಿ ಬರೆದುಕೊಟ್ಟ ಚಿತ್ರಶೇಖರ (ಕ್ರ.ಸಂ.೧೬೨೪)

ಚಿತ್ರಶೇಖರ ಯಕ್ಷಗಾನವನ್ನು ಸಂಪಿಗೆ ಉಗ್ರಾಮ್ಮೆಯನು ಸಿದ್ಧಪ್ಪನ ಮಗ ರೇವಣ್ಣನಿಗೆ ಹರಸಿ ದಾನವಾಗಿ ನೀಡಿರುವುದನ್ನು ನೋಡಬಹುದು.

- ಶ್ರೀಮದಾವರಗೊಳ್ಳದ ಸ್ತಲದಲ್ಲಿ ಶಾ।ಕೊಟ್ಟೊರೆಯ್ಯನವರ ಕುಮಾರ ರುದ್ರಯ್ಯನವರು ತಂಮ ಸ್ವಗೃಹ ಸಂಜಾತರಿಗೆ ವೋದಿಕೊಳ್ಳುವುದಕ್ಕೆ ಬರೆದುಕೊಟ್ಟ ಚೆನ್ನಬಸವಪುರಾಣ (ಕ್ರ.ಸಂ.೧೬೬೮)

ಚೆನ್ನಬಸವಪುರಾಣವನ್ನು ರುದ್ರಯ್ಯನವರು ತಮ್ಮ ಮನೆಯಲ್ಲಿರುವವರಿಗೆ ಓದಿಕೊಳ್ಳುವುದಕ್ಕೆ ಬರೆದುಕೊಟ್ಟಿರುವುದನ್ನು ನೋಡಬಹುದು

- ಪ್ಲವ ಸಂವತ್ಸರದ ಬಾದ್ರಪದ ಶುಧ ೧೨ಯಲ್ಲೂ ಕೃಷ್ಣಪ್ಪನು ಕಡಿತವಾಗಿಲು ಶಿದ್ದೆಯಂಗೈಯನ ಮಗಳಿಗೆ ಮನಪೂರ್ವಕವಾಗಿ ಬರೆದುಕೊಟ್ಟ ಕುಮಾರರಾಮ ಚರಿತ್ರೆ (ಕ್ರ.ಸಂ.೧೯೬)

ಇಲ್ಲಿ ಹೆಣ್ಣು ಮಕ್ಕಳಿಗೂ ಸಹ ಗ್ರಂಥವನ್ನು ದಾನ ಮಾಡುವುದನ್ನು ನೋಡಬಹುದು. ತುಂಬು ಮನಸ್ಸಿನಿಂದ ಕೃಷ್ಣಪ್ಪನು ಶಿದ್ದಯಂಗೈಯನ ಮಗಳಿಗೆ ಕುಮಾರರಾಮ ಚರಿತ್ರೆ ಎಂಬ ಗ್ರಂಥವನ್ನು

ದಾನವಾಗಿ ಕೊಟ್ಟಿರುವುದನ್ನು ನೋಡಬಹುದು. ಹೀಗೆ ತಮ್ಮ ಕುಟುಂಬಕ್ಕಾಗಿಯೇ ಗ್ರಂಥದಾನ ಮಾಡುತ್ತಿದ್ದದನ್ನ ಈ ಮೇಲಿನಂತೆ ನೋಡಬಹುದಾಗಿದೆ.

### ೨. ಸ್ನೇಹಿತರಿಗೆ ಗ್ರಂಥದಾನ :-

ತಮ್ಮ ಸ್ನೇಹಿತರಿಗಾಗಿ ಬರೆದು ಗ್ರಂಥವನ್ನು ದಾನ ಮಾಡುವುದನ್ನು ನೋಡಬಹುದು. ಪ್ರೀತಿಗಾಗಿ, ಆಯುರಾರೋಗ್ಯಕ್ಕಾಗಿ ಅಷ್ಟೈಶ್ವರ್ಯಕ್ಕಾಗಿ ಹೀಗೆ ನಾನಾ ಕಾರಣಗಳಿಂದ ಗ್ರಂಥದಾನ ಮಾಡುವುದನ್ನು ನೋಡಬಹುದು.

- ಶ್ರೀಮಚ್ಚಿನ್ಮೂಲಾದ್ರಿ ಮಠಾಂತರೆ ಅರವತ್ತು ಮೂವರ ಪುರಾತನರ ತ್ರಿವಿಧಿ ಬಾಗಡಕೋಟೆ ಚಂನವೀರಪ್ಪವರಿಗೆ ಲೋಚನದ ಮುರಿಗೆ ಮರಿಯ ಬರಕೊಟ್ಟ ಪುಸ್ತಕ. ಲೋಚನ ಚಿದಂಬರಪ್ಪನವರು ಚಂನವೀರಮರಿಗೆ ಲಿಖಿತವ ಮಾಡಿ ದಯದಿಂದ ಕೊಟ್ಟುದೂ (ಕ್ರ.ಸಂ.೩೭೯)

ಲೋಚನ ಚಿದಂಬರಪ್ಪರವರು ಚನವೀರಮರಿಗೆ ದಯೆಯಿಂದ ಬರೆದು ದಾನವಾಗಿ ಕೊಟ್ಟಿರುವುದನ್ನು ನೋಡಬಹುದು.

- ಶಾ.ಶ.೧೭೭೦ ಈಶ್ವರ ಕಾರ್ತಿಕ ಶುದ್ಧ ೧ರಲ್ಲಿ ಹರಕೇರಿ ರಂಗಪ್ಪನು ಸಂತೆಬೆನ್ನೂರ ಎಲ್ಲಪ್ಪನವರಿಗೆ ಬರಕೊಟ್ಟ ಕಾಶೀಕಾಂಡವು ಸಮಾಪ್ತ (ಕ್ರ.ಸಂ.೨೨೪೧)

ಸಂತೆಬೆನ್ನೂರ ಎಲ್ಲಪ್ಪನವರಿಗೆ ಹರಕೇರಿ ರಂಗಪ್ಪನು ಕಾಶೀಕಾಂಡವನ್ನು ಬರೆದು ದಾನವಾಗಿ ಕೊಟ್ಟಿರುವುದನ್ನು ನೋಡಬಹುದು.

- ಕಸಿಬೆ ಕೌಶಿಕೆ ಬಸವೇಶ್ವರನ ಆಲಯಕ್ಕೆ ಕಾರಣಕರ್ತರಾದಂಥ ಸಾಲಿ ಕೊಟ್ರಯ್ಯನು ಬಸಪ್ಪನ ಗರ್ಬಾಬ್ದಿ ಚಂದ್ರಮನಾದ ಸಿವರುದ್ರಪ್ಪಗೆ ಓದಲಿಕ್ಕೆ ಬರಕೊಟ್ಟದ್ದು (ಕ್ರ.ಸಂ.೧೯೫೮)

ಶಿವದಾಸಿ ಮಾರ್ಯನ ಪುರಾಣವನ್ನು ಕೊಟ್ರಯ್ಯನು ಸಿವರುದ್ರಪ್ಪಗೆ ಓದಲಿಕ್ಕೆ ಬರೆದುಕೊಟ್ಟದ್ದನ್ನು ನೋಡಬಹುದು.

- ಸ್ವಸ್ತಿಶ್ರೀ ಶತಾಬ್ದಿ ೧೭೫೬ನೇ ಜಯಸಂವತ್ಸರದ ಚೈತ್ರ ಬ-೫ ಸೋಮವಾರದಲ್ಲಿ ಬಾಗಲೂರು ಕೆಂಪುಶಿದ್ದದೇವರು ಮರಿಶಿದ್ದಪ್ಪನವರಿಗೆ ಧನಕನಕ - ಹರಸಿ ಬರೆದು ಕೊಟ್ಟಂದಾ ಗಿರಿಜಾಕಲ್ಯಾಣ (ಕ್ರ.ಸಂ.೧೩೭೬)

ಅಷ್ಟೈಶ್ವರ್ಯ ಉಂಟಾಗಲೆಂದು ಕೆಂಪುಶಿದ್ದದೇವರು ಮರಿಶಿದ್ದಪ್ಪನವರಿಗೆ ಗಿರಿಜಾಕಲ್ಯಾಣವನ್ನು ಹರಶಿ ಬರೆದು ದಾನವಾಗಿ ಕೊಟ್ಟಿರುವುದನ್ನ ನೋಡಬಹುದು.

- ಶಾಲಿವಾಹನ ಶಖ ೧೭೬೫ನೆ ಶೋಭಕೃತು ಸಂವತ್ಸರದ ಜೇಷ್ಠ ಬಹುಳ ೨ ಬುಧವಾರ ವಿಘಳಿಗೆ ೧೦ ಘಳಿಗೆಯಲ್ಲಿ ಕೋಡಿಹಳ್ಳಿ ಸ್ಥಳದ ದಳವಾಯಿ ಬೈಲಪ್ಪನವರ ಕುಮಾರನಾದ ಸಂಚವೈಯ್ಯನು ಕೋಡಿಹಳ್ಳಿ ಸ್ಥಳದ ಗವುಡರು ಅಚ್ಚೇಗೌಡರ ಕುಮಾರ ವೀರೇಗವುಡರಿಗೆ ಅತಿ ಪ್ರೀತಿಯಿಂದ ಬರೆದುಕೊಟ್ಟ ಚೆನ್ನಬಸವಪುರಾಣ (ಕ್ರ.ಸಂ.೧೬೭೧)

ಚನ್ನಬಸವಪುರಾಣವನ್ನ ಸಂಚವೈಯನು ವೀರಗವುಡರಿಗೆ ಪ್ರೀತಿಯಿಂದ ಬರೆದು ದಾನವಾಗಿ ಕೊಟ್ಟಿರುವುದನ್ನ ನೋಡಬಹುದು.

- ಸ್ವಸ್ತಿಶ್ರೀ ಶಕವರ್ಷ ೧೫೪೨ರ ಸಂದ ಶಾರ್ವರಿ ಸಂವತ್ಸರದ ಮಾರ್ಗಶಿರ ಶುದ್ಧ ೧೦ ಸ್ಥಿರವಾದ ಹೊನ್ನರಸಯ್ಯನ ಕುಮಾರ ದೇವಣ್ಣಪ್ಪರಸರಿಗೆ ಶೇಷಾದ್ರಿಭಟ್ಟರು ಆಯುರಾರೋಗ್ಯ ಉಂಟಾಗಲೆಂದ ಬರೆದ ಗಿರಿಜಾ ಕಲ್ಯಾಣ

ಆಯುರಾರೋಗ್ಯ ಅರಸಿ ಗಿರಿಜಾಕಲ್ಯಾಣ ಪುಸ್ತಕವನ್ನ ದೇವಣ್ಣಪ್ಪರಸರಿಗೆ ಶೇಷಾದ್ರಿಭಟ್ಟರು ಬರೆದು ದಾನವಾಗಿ ಕೊಟ್ಟಿರುವುದನ್ನ ನೋಡಬಹುದು.

- ಮಲ್ಲೇದೇವರ ಕುಮಾರ ಚಂನಮಲ್ಲಿಕಾರ್ಜುನೈಯನವರು ಬಸ್ತಿಹಳ್ಳಿ ಶಿದ್ದರಾವೇಗವುಡನಿಗೆ ಧನ ಕನಕ ವಸ್ತು ವಾಹನವಾಗಲೆಂದು ಹರಸಿ ಬರೆದುಕೊಟ್ಟ ಚನ್ನಬಸವೇಶ್ವರ ಕಾಲಜ್ಞಾನ (ಕ್ರ.ಸಂ.೧೦೬೩)

ಚನ್ನಬಸವೇಶ್ವರ ಕಾಲಜ್ಞಾನ ಎಂಬ ಗ್ರಂಥವನ್ನು ಐಶ್ವರ್ಯ ಉಂಟಾಗಲೆಂದು ಚಂನಮಲ್ಲಿಕಾರ್ಜುನೈಯನವರು ಬಸ್ತಿಹಳ್ಳಿ ಸಿದ್ಧರಾಮೇಗೌಡನಿಗೆ ಬರೆದುಕೊಟ್ಟಿರುವುದನ್ನು ನೋಡಬಹುದು.

ಹೀಗೆ ತಮಗೆ ಗೊತ್ತಿರುವ ಸ್ನೇಹಿಗರಿಗೂ ಐಶ್ವರ್ಯ ಉಂಟಾಗಲೆಂದು, ಆಯುರಾರೋಗ್ಯ ಉಂಟಾಗಲೆಂದು ಗ್ರಂಥದಾನ ಮಾಡಿರುವುದನ್ನ ನೋಡಬಹುದು.

## ೩. ಗುರು/ ಗುರುಪೀಠಗಳಿಗೆ ಗ್ರಂಥದಾನ :-

ಇಲ್ಲಿ ತಮ್ಮ ಗುರುಭಕ್ತಿಯಿಂದಾಗಿ ಗುರುಗಳಿಗೆ ಗ್ರಂಥವನ್ನ ಬರೆದುಕೊಡುವುದನ್ನು ಹಾಗೂ ಮಠಗಳಿಗೂ ಸಹ ಗ್ರಂಥದಾನ ಮಾಡುವುದನ್ನು ನೋಡಬಹುದು.

- ಸ್ವಸ್ತಿಶ್ರೀ ವಿಜಯಾಭ್ಯುದಯ ಕಲಿಯುಗ ಪ್ರಮಾಣ ೪೩೨೦೦೦೦ ವರುಷಕ್ಕೆ ಸಂದ ಕಲಿವರ್ಷ ೪೬೫೫ ಶಾಲಿವಾಹನ ಶಕವರ್ಷ ೧೪೮೦ ಸಂದ ವರ್ತಮಾನ ಕಾಳಯುಕ್ತ ಸಂವತ್ಸರದ ಆಷಾಢ ಬಹುಳ ೩ ಗುರುವಾರದಲ್ಲೂ ಶ್ರೀಮತ್ಸಜ್ಜನ ಶುದ್ಧ ಶಿವಾಚಾರ ಜ್ಞಾನವೈರಾಗ್ಯ ಸಂಪನ್ನರಾದ ಬೋಗೋದಿಮಠದ ಪಚ್ಚೆಕಂತೆದೇವರಿಗೆ ತಗಡೂರು ಬಸವರಸ ವುಪಾಧ್ಯಾಯರ ಮಗ ತಮ್ಮಪ್ಪನು ಬರೆದುಕೊಟ್ಟ ದಶಗ್ರಂಥಿಯ ವ್ಯಾಖ್ಯಾನ (ಕ್ರ.ಸಂ.೧೮೬೭)

ದಶಗ್ರಂಥಿಯ ವ್ಯಾಖ್ಯಾನವನ್ನು ಬೋಗಾದಿಮಠದಲ್ಲಿರುವ ಪಂಚೆಕಂತೆದೇವರಿಗೆ ಉಪಾಧ್ಯೆಯರ ಮಗ ತಮ್ಮಪ್ಪನು ದಾನವಾಗಿ ಕೊಟ್ಟಿರುವುದನ್ನು ನೋಡಬಹುದು.

- ಶ್ರೀಮನ್ ಮಹಾರಾಜಾಧಿರಾಜ ಪೂಜಿತಾ ಪಾದಪಲ್ಲವರಾದ ಬೆಣ್ಣೆಹಳ್ಳಿ ಪಟ್ಟ ಶಿವಾಮುದ್ರಾ ಕಾರಣಕರ್ತರಾದ - - ಸ್ವಾವಿಗಳ ಪಾದಸೇವಿಗೆ ಮನ್ನೆರ ಮೊಸಲನಾಡದ ಗೌಬ್ಬೈಲ್ಯದ ವೀರಪ್ಪನವರ ಮೊಂಮಗ ಚನವೀರಪ್ಪನು ಅಖಂಡೇಶ್ವರನ ವಚನ ಬರೆದದು (ಕ್ರ.ಸಂ.೧೧೭)

ಅಖಂಡೇಶ್ವರ ವಚನವನ್ನು ಚನ್ನವೀರಪ್ಪನು ಇಲ್ಲಿ ಸ್ವಾಮಿಗಳು ಯಾರು ಅಂತ ಗೊತ್ತಿಲ್ಲ ಇದು ತ್ರುಟಿತ ಭಾಗದಿಂದ ಕೂಡಿದೆ. ಆ ಸ್ವಾಮಿಗಳ ಪಾದಸೇವೆಗೆ ಈ ಗ್ರಂಥವನ್ನ ದಾನ ಮಾಡಿರುವುದನ್ನ ನೋಡಬಹುದು.

- ಶ್ರೀಮತು ವಿಳಂಬಿನಾಮ ಸಂವತ್ಸರದ ಶ್ರಾವಣ ಬಹುಳ ೧೦ ಭಾನುವಾರ ಮಹಂತ ಮಲ್ಲಿಕಾರ್ಜುನಸ್ವಾಮಿ ಪಾದಾರವಿಂದಕ್ಕೆ ಸಂಗೀತದ ಚಂನಬಸವಪ್ಪನು ಭಕ್ತಿ ಪುರಸ್ಕಾರದಿಂದ ಬರೆದು ಕೊಟ್ಟ ಅನುಭವಸಾರ (ಕ್ರ.ಸಂ.೨೩೨)

ಸಂಗೀತಗಾರನಾದಂತಹ ಚನ್ನಬಸವಪ್ಪನು ಮಲ್ಲಿಕಾರ್ಜುನಸ್ವಾಮಿಯ ಭಕ್ತಿಗಾಗಿ ಅನುಭವಸಾರ ಗ್ರಂಥವನ್ನು ಬರೆದು ದಾನ ಮಾಡಿರುವುದನ್ನ ನೋಡಬಹದು.

- ಎಮ್ಮಿಗನೂರ ಮಠದ ಪಟ್ಟದ ಗುರುಪಾದದೇವರಿಗೆ ರಂಗದ ಶ್ರೀ ಪರುವಪ್ಪನ ಮಗ ಚಿನ್ನದ ಗುಡಿಶೆಟ್ಟಿ ತಮ್ಮ ಗುರುವಿನ ಪಾದದ ದಯೆಯಿಂದ ತನ್ನ ಭಕ್ತಿಯಿಂದ ಬರೆದ ಪುರಾತನ ವಚನ (ಕ್ರ.ಸಂ.೬೩೯)

ಗುರುವಿನ ಅಪಾರ ಭಕ್ತಿಯಿಂದ ಎಮ್ಮಿಗನೂರ ಮಠದ ಗುರುಪಾದ ದೇವರಿಗೆ ಚಿನ್ನದ ಗುಡಿಶೆಟ್ಟಿ ಎಂಬುವವರು ಪುರಾತನ ವಚನ ಗ್ರಂಥವನ್ನ ದಾನವಾಗಿ ಕೊಟ್ಟಿರುವುದನ್ನ ನೋಡಬಹುದು.

*ವಿಳಂಬಿ ಸಂವತ್ಸರದ ವೈಶಾಖ ಬಹುಳ ಮೂರರಲು ಕೊಡಗೇಹಳ್ಳಿ ಗುರುಬಸವಯ್ಯನು ಮಠದ ಗಂಗಾಧರದೇವರಿಗೆ ಬರೆದುಕೊಟ್ಟ ಕೈವಲ್ಯಪದ್ಧತಿ (ಕ್ರ.ಸಂ.೧೧೫೦)

ಕೊಡಗೇಹಳ್ಳಿಯ ಮಠದಲ್ಲಿರುವ ಗಂಗಾಧರದೇವರಿಗೆ ಗುರುಬಸವಯ್ಯನು ಕೈವಲ್ಯಪದ್ಧತಿ ಎಂಬ ಗ್ರಂಥವನ್ನ ದಾನವಾಗಿ ಕೊಟ್ಟಿರುವುದನ್ನ ನೋಡಬಹುದು.

- ಶಾಲಿವಾಹನ ಶಖೆ ೧೬೭೭ಯಿದ ಸಂವತ್ಸರದ ಜೇಷ್ಟ ಸುದ್ದ ೧೧ರಲ್ಲೂ ಪುರಾಣದ ಬಗೆ ವೀರಪ್ಪವಡೇರ ಕರಜಾತನಾದ ಕಲ್ಯಾಣದೈಯ್ಯನು ಹೇರೂರ ಕೆರೆಮಠದ ಚೆಂನಮಲ್ಲಪ್ಪನವರಿಗೆ ಬರೆದುಕೊಟ್ಟದ್ದು (ಕ್ರ.ಸಂ.೧೨೬೩)

ಹೇರೂರ ಕೆರೆಮಠದ ಚೆನ್ನಮಲ್ಲಪ್ಪನವರಿಗೆ ಕಲ್ಯಾಣದಯ್ಯನು ಗುಂಡಬ್ರಹ್ಮಯ್ಯನ ಸಾಂಗತ್ಯವನ್ನು ಬರೆದು ದಾನವಾಗಿ ಕೊಟ್ಟಿರುವುದನ್ನ ನೋಡಬಹುದು.

- ದುರ್ಮುಖಿ ಸಂವತ್ಸರದ ಆಶ್ವೀಜ ಶು ೩ಲ್ಲೂ ಶ್ರೀಮತು ಗೂಳೂರ ನಡುವಣ ಮಠದ ಪಟ್ಟದ ಶಾಂತಲಿಂಗದೇವರ್ಯೆಯ್ಯನವರ ಕಾರುಣ್ಯ ಶಿಷ್ಯರಾದ ರಾಚಂಣನವರು ಗಜ್ಜಹಳ್ಳಿ ದಾನ್ಯಾಪ್ಪನವರಿಗೆ ಬರಕೊಟ್ಟ ಅಮುಗಿದೇವನ ಸಾಂಗತ್ಯ (ಕ್ರ.ಸಂ.೨೧೬೮)

ಗಜರಹಳ್ಳಿ ದಾನ್ಯಪ್ಪರವರಿಗೆ ಶಿಷ್ಯರಾದ ರಾಚಂಣನವರು ಅಮುಗಿದೇವನ ಸಾಂಗತ್ಯವನ್ನ ದಾನವಾಗಿ ಕೊಟ್ಟಿರುವುದನ್ನು ನೋಡಬಹುದು.

ಹೀಗೆ ಗುರುಗಳಿಗೆ, ಮಠಗಳಿಗೆ ಗ್ರಂಥಗಳನ್ನು ದಾನವಾಗಿ ಕೊಟ್ಟಿರುವುದನ್ನು ಈ ಮೇಲಿನಂತೆ ನೋಡಬಹುದಾಗಿದೆ.

**೪. ಬೇರೆಯವರಿಂದ ಬರೆಸಿಕೊಂಡು ಗ್ರಂಥದಾನ ಮಾಡುವುದು:-**

ಇಲ್ಲಿ ಅಕ್ಷರ ಬರುವಂತಹವರಿಂದ ಗ್ರಂಥಗಳನ್ನು ಬರೆಸಿಕೊಂಡು ದಾನ ಮಾಡುವಂತಹುದನ್ನು ನೋಡಬಹುದು. ಇಲ್ಲಿ ಸಮಾಜಕ್ಕೆ ಒಳಿತಾಗಲಿ ಎಂಬ ಉದ್ದೇಶದಿಂದ, ಉದ್ಧಾರವಾಗಲಿ ಎಂದು, ತಮ್ಮ ಭಕ್ತಿಯಿಂದ ಬರೆಸಿ ಅಂತಹ ಗ್ರಂಥಗಳನ್ನ ದಾನ ಮಾಡಿರುವುದನ್ನ ನೋಡಬಹುದು.

- ಯೀ ವುದ್ದರಣಿ ಪುಸ್ತಕ ಯಿರನಾಳ ಮುರಗೆಪ್ಪ ಬರೆಸಿದ್ದು ಯಿದು ತೋಟಪ್ಪಾ ಬಿಂನ ಮುರಿಗೆಪ್ಪ ಯರನಾಳ ಈತನು ೧೭೭೮ನೆಯ ಧಾತು ಸಂ- - ರದಲ್ಲಿ ಬರಗಾಲ ಗ್ರಾಸ ನಡೀದ್ಕೇರು - ೨ಕ್ಕೆ ಹನ್ನೆರಡು ಮಠದ ಸ್ವಾಮಿಗಳಿಗೆ ವಿಕ್ರಯಿಸಿದ್ದಾನೆ ಯಿದರ ಮೇಲೆ

ಅವನ ಸ್ವತ್ತು ಯಿಲ್ಲಾ ಯಿ ಬರಹ ಯಾರದು ಅಂದರೆ ಭೂಪಾಳ ಚನಬಸಪ್ಪದು (ಕ್ರ.ಸಂ.೫೫೩)

ಭೂಪಾಳಿ ಚನಬಸನಲ್ಲಿ ಯರನಾಳ ಮುರಗೆಪ್ಪನು ಬರಗಾಲ ಎಂಬುದು ಬರಬಾರದು ಎಂಬ ಉದ್ದೇಶದಿಂದ ಉದ್ದರಣಿ ಪುಸ್ತಕವನ್ನು ಬರೆಸಿದ್ದು ೧೨ ಮಠದ ಸ್ವಾಮಿಗಳಿಗೆ ದಾನವಾಗಿ ಆ ಗ್ರಂಥವನ್ನು ಕೊಟ್ಟಿದ್ದು ಅದರ ಮೇಲೆ ಯಾರ ಅಧಿಕಾರ ಇಲ್ಲ ನನ್ನ ಸ್ವಇಚ್ಚೆಯಿಂದ ಕೊಟ್ಟಿದ್ದೇನೆ ಎಂದು ಹೇಳಿರುವುದನ್ನ ಇಲ್ಲಿ ನೋಡಬಹುದು.

- ಶ್ರೀಕುಮಾರ ಸಮಯಕ್ಕೆ ಕರ್ತೃಗಳಾದ ಭೂಪುರದ ತ್ರಿಸಹಸ್ರ ಮಠಾಧಿಕಾರಿಗಳಾದ ಶ್ರೀ ಹುಚ್ಚಗುರುಶಿದ್ದ ಸ್ವಾಮಿಯವರ ಕರಕಂಜೋದ್ಭವರಾದ ಶ್ರೀ ಗಂಗಾಧರ ಸ್ವಾಮಿಯವರ ಹಸ್ತಪದ್ಮಭವರಾದ ಗುರುಶಿದ್ದ ಸ್ವಾಮಿಯವರು 'ಸರ್ವರು ಉದ್ದಾರವಾಗಲಿ' ಎಂದು ಬೈಲಹೊಂಗಲದ ಮಠದ ಬಾಲಕನಾದ ಷಣ್ಮುಖಯ್ಯನ ಕೈಯಲ್ಲಿ ಬರೆಯಿಸದ ಚೆನ್ನಬಸವಪುರಾಣ (ಕ್ರ.ಸಂ.೧೬೯)

ಇಲ್ಲಿ 'ಸರ್ವರು ಉದ್ದಾರವಾಗಲಿ' ಎಂಬ ಕಾರಣದಿಂದ ಬೈಲಹೊಂಗಲದ ಮಠದ ಬಾಲಕನಾದ ಷಣ್ಮುಖಯ್ಯನ ಕೈಯಲ್ಲಿ ಬರೆಸಿ ಗುರುಶಿದ್ದ ಸ್ವಾಮಿಯವರು ಚೆನ್ನಬಸವಪುರಾಣವನ್ನ ದಾನವಾಗಿ ನೀಡಿರುವುದನ್ನ ನೋಡಬಹುದು.

- ಅರವತ್ತು ಮೂರು ಪುರಾತನರ ಪುರಾಣವನ್ನ ಶಲವೆಡಿ ಗ್ರಾಮದಲ್ಲಿ ಶಾನುಭೋಗರ ಮಠದಲ್ಲಿರುವ ಕಲ್ಲಯ್ಯನವರ ಗರ್ಭಸಂಜಾತರಾದ ಚನವೀರಯ್ಯನವರು ಭಕ್ತಿಯಿಂದ ಸಂಗನಹಾಳ ಶಾಸ್ತ್ರೀಮಠದ ಅನ್ನದಾನಯ್ಯನವರಿಂದ ಬರೆಸಿದ್ದಾರೆ (ಕ್ರ.ಸಂ.೩೨೨)

ಅನ್ನದಾನಯ್ಯನವರಿಂದ ಕಲ್ಲಯ್ಯನವರ ಗರ್ಭಸಂಜಾತರಾದ ಚನವೀರಯ್ಯನವರು ಭಕ್ತಿಯಿಂದ ಅರವತ್ತು ಮೂರು ಪುರಾತನರ ಪುರಾಣವನ್ನ ಬರೆಸಿರುವುದನ್ನ ನೋಡಬಹುದು.

- ಶ್ರೀ ಅರುವತ್ತು ಮೂರು ಪುರಾತನರ ನಾಮಾವಳಿಗಳು ಇದು ರೋಣದ ಶಾಸ್ತ್ರೀ ಅಂನದಾನಿ ಕವಿಗಳಿಂದ ರಚಿಸಲ್ಪಟ್ಟಿತು. ಹುಬ್ಬಳ್ಳಿ ನೀಲಿ ಗುರುಶಿದ್ದಪ್ಪನವರು ಲೋಕಹಿತಾರ್ಥವಾಗಿ ಪ್ರಕಟಿಸಿದರು ಯೀ ಪುಸ್ತಕ ಯಾವತ್ತು ಹಕ್ಕು ಮಾಲೀಕರ ಕಡೆಗೆ ಅದೆ (ಕ್ರ.ಸಂ.೩೨೭)

ಗುರುಶಿದ್ದಪ್ಪನವರು ಲೋಕಹಿತಾರ್ಥವಾಗಿ ಅರವತ್ತುಮೂರು ಪುರಾತನರ ನಾಮಾವಳಿಗಳನ್ನ ಶಾಸ್ತ್ರೀ ಅಂನದಾನಿ ಕವಿಗಳಿಂದ ರಚಿಸಿದ್ದುದ್ದನ್ನ ಹಾಗೂ ಅದಕ್ಕೆ ತಾನೇ ಸ್ವಂತ ಖರ್ಚಿನಿಂದ

ಬರೆದುಕೊಂಡಿದ್ದರಿಂದ ಅದರ ಮೇಲೆ ಯಾರ ಯಾವುದೇ ಹಕ್ಕಿಲ್ಲ ಎನ್ನುವಂತಹುದನ್ನ ನೋಡಬಹುದು.

- ೧೭೭೮ನೆಯ ಸುಮುಖಿ ನಾಮ ಸಂವತ್ಸರದ ಮಾಘ ಶುದ್ಧ ೧೨ ಸೋಮವಾರ ಮೃಗಶಿರ ನಕ್ಷತ್ರ ಅಮೃತಸಿದ್ಧಿಯೋಗ ಭಗೀರಥನೆಂಬ ಮುಹೂರ್ತ ಸತ್ವ ೨ ಓದಿಸುವ ಮುಕ್ಕಣ್ಣೈಯ್ಯಗಳ ಸುಪುತ್ರ ವಿರೂಪಾಕ್ಷಯ್ಯಗಳು ಲೋಕಪ್ರಸಿದ್ಧಿಯಾಗಬೇಕೆಂದು ಶಿವಭಕ್ತಿ ಜನಂಗಳಿಗೆ ಸುಕೃತ ಬರಲೆಂದು ತಮ್ಮ ಸ್ವಹಸ್ತ ಲಿಖಿತದಿಂದ ಬರೆದ ಚೆನ್ನಬಸವಪುರಾಣ (ಕ್ರ.ಸಂ.೧೬೮೦)

ಶಿವಭಕ್ತರ ಜನಗಳಿಗೆ ಒಳ್ಳೆಯದಾಗಲಿ ಎಂಬ ಉದ್ದೇಶದಿಂದ ಹಾಗೂ ಶಿವನ ಮಕ್ಕಳ ಲೋಕ ಪ್ರಸಿದ್ಧಿಯಾಗಬೇಕೆಂದು ಚೆನ್ನಬಸವಪುರಾಣವನ್ನ ಹಿರಿಯೂರ ಸಿವರುದ್ರಪ್ಪನು ಬರೆದು ದಾನ ಮಾಡಿರುವುದನ್ನ ನೋಡಬಹುದು.

ಹೀಗೆ ಗ್ರಂಥದಾನವನ್ನು ತನ್ನ ಕೌಟುಂಬಿಕ ಸದಸ್ಯರಿಗೆ, ಸ್ನೇಹಿತರಿಗೆ, ಶಿಷ್ಯ, ಹಿರಿಯರಿಗೆ, ಗುರು, ಗುರುಪೀಠಗಳಿಗೆ, ಓದಿನ ಕಾರಣಕ್ಕೆ, ಭಕ್ತಿಯಿಂದ, ಐಶ್ವರ್ಯಕ್ಕಾಗಿ, ಜ್ಞಾನಾರ್ಜನೆಗಾಗಿ, ಆಯುರಾರೋಗ್ಯ ಭಾಗ್ಯಕ್ಕಾಗಿ, ಗುರುಭಕ್ತಿಗಾಗಿ, ಲೋಕಹಿತಾರ್ಥಕ್ಕಾಗಿ, ಧನ-ಕನಕಕ್ಕಾಗಿ, ಸುಖಬಾಳ್ವೆಗಾಗಿ, ಪುತ್ರ-ಪೌತ್ರಾಭಿವೃದ್ಧಿಗಾಗಿ ಹೀಗೆ ಅನೇಕ ಕಾರಣ ಹಾಗೂ ಉದ್ದೇಶಗಳಿಗಾಗಿ ಗ್ರಂಥದಾನ ಮಾಡುವುದನ್ನು ಹಸ್ತಪ್ರತಿ ಪುಷ್ಪಿಕೆಗಳ ಮೂಲಕವಾಗಿ ನೋಡಬಹುದಾಗಿದೆ.

## ಆ. ಲಿಪಿಕಾರರು :-

ಇಂದು ನಾಡಿನಾದ್ಯಂತ ಸಿಗುತ್ತಿರುವ ಹಸ್ತಪ್ರತಿಗಳ ಮೂಲಕ ನಮ್ಮ ಜ್ಞಾನವನ್ನು ಹೆಚ್ಚಿಸಿಕೊಳ್ಳುತ್ತಿದ್ದೇವೆಂದರೆ ಅದಕ್ಕೆ ಕಾರಣ ಈ ಲಿಪಿಕಾರರು. ಇವರು ತಮಗೆ ಸಿಕ್ಕಿದಂತಹ ಹಸ್ತಪ್ರತಿಗಳನ್ನು ಶ್ರಮ, ಶ್ರದ್ಧೆಗಳಿಂದ ಬರೆದು ಅದು ಮುಂದಿನ ಪೀಳಿಗೆಗೂ ಸಹ ದೊರಕುವಂತೆ ಮಾಡಿದರು.

"ಕವಿ ಕಾವ್ಯವನ್ನು ಹೇಳುತ್ತಾನೆ. ಇಲ್ಲವಾದರೆ ಬರೆಯುತ್ತಾನೆ. ಅವನು ಹೇಳಿದ್ದನ್ನು ಬರೆದುಕೊಳ್ಳುವವನು ಲಿಪಿಕಾರ. ಅವನು ಬರೆದದನ್ನು ನಕಲು ಮಾಡುವವನು ಲಿಪಿಕಾರ"[೪]

"ಲಿಪಿಕರನನ್ನು ಮೊದಲು ಚಪಡ ಎಂಬ ವ್ಯಕ್ತಿಯ ಮೂಲಕವಾಗಿ ಗುರುತಿಸಬಹುದು. ಅಶೋಕನ ಬ್ರಹ್ಮಗಿರಿಯ ಶಾಸನದ ಅಂತ್ಯದಲ್ಲಿ 'ಚಪಡೇನ ಲಿಖಿತಂ ಲಿಪಿಕರೇಣ' ಎಂದು ಖರೋಷ್ಠಿ ಅಕ್ಷರದಲ್ಲಿ ಬರೆದಿರುವುದನ್ನು ನೋಡಬಹುದು."[೫]

"ಲಿಪಿಕಾರ ಎಂಬುದಕ್ಕೆ ಅಶೋಕನ ಶಾಸನಗಳಲ್ಲಿ ಲಿಪಿ, ಲಿಬಿ, ದಿಪಿ ಎಂಬ ಸಮಾನಾರ್ಥಕ ಶಬ್ದಗಳಿವೆಯೆಂದೂ 'ದಿಪಿ' ಎಂಬ ಪದವು ಪಾರಶೀ ಭಾಷೆಗೆ ಸೇರಿದ್ದು ಇದರಿಂದ 'ಲಿಪಿ' ಶಬ್ದ ಬಂದಿರಬಹುದೆನ್ನಲಾಗಿದೆ" ಆದ್ದರಿಂದ ಲಿಪಿ ಮಾಡುವವನೇ ಲಿಪಿಕಾರ ಎನ್ನಲಾಗಿದೆ."[೬]

ಪ್ರತಿಯೊಬ್ಬ ಲಿಪಿಕಾರನೂ ತಾನು ಕೈಗೆತ್ತಿಕೊಂಡ ಗ್ರಂಥವನ್ನು ಪ್ರತಿಮಾಡುವ ಮೊದಲು ಇಷ್ಟದೈವ, ಆರಾಧ್ಯದೈವ ಹಾಗೂ ಗುರುಗಳನ್ನು ಸ್ತುತಿಸುತ್ತಿದ್ದರು. ಹಾಗೂ ಶುಭ ಮುಹೂರ್ತ ದಿನಗಳನ್ನು ನೋಡುತ್ತಿದ್ದರು. ಇವರು ಶ್ರದ್ಧೆ, ಭಕ್ತಿಯಿಂದ ಪ್ರಾಮಾಣಿಕತೆಯಿಂದ ಪ್ರತಿ ಮಾಡುವ ಕಾರ್ಯವನ್ನು ಮಾಡುತ್ತಿದ್ದರು. ಆದರೂ ಕೆಲವು ಸಂದರ್ಭದಲ್ಲಿ ಅವರಿಗೆ ಅರಿಯದಾತ ಕೆಲವು ದೋಷಗಳು ಕೈತಪ್ಪು, ಕಿವಿತಪ್ಪು, ಕಣ್ಣು ತಪ್ಪಿನಿಂದಾಗಿ ಸ್ಖಾಲಿತ್ಯಗಳು ಉಂಟಾಗುವಂತಹುದು. ಅದಕ್ಕೆ ತನ್ನ ಪ್ರಾಮಾಣಿಕತೆಯಿಂದ ಇವರು ಗ್ರಂಥಗಳ ಕಡೆಯಲ್ಲಿ ಪ್ರತಿ ಮಾಡುವಾಗ ಮರವೆ, ಆಲಸ್ಯಗಳಿಂದ ಸಂಭವಿಸಿದ ಸ್ಖಾಲಿತ್ಯಗಳನ್ನು ಸರಿಪಡಿಸಿ ಓದಿಕೊಳ್ಳಬೇಕೆಂದು ವಿನಯದಿಂದ ಹೇಳಿಕೊಳ್ಳುವುದನ್ನು ನೋಡಬಹುದು. ಇದನ್ನ ಲಿಪಿಕಾರರ ಆದರ್ಶಗಳು ಎಂದು ಗುರುತಿಸಬಹುದು. ಈ ಆದರ್ಶಗಳಿಂದ ಲಿಪಿಕಾರರ ಮನೋಧರ್ಮವನ್ನು ತಿಳಿಯಬಹುದು. "ಇಲ್ಲಿ ಲಿಪಿಕಾರನು ಯಾವ ಮಾತೃಕೆಯನ್ನು ಪ್ರತಿ ಮಾಡುತ್ತಾನೋ ಅದರಲ್ಲಿರುವಂತೆಯೇ ಬರೆಯುವುದು ತನ್ನ ಕೆಲಸವೆಂದು ಅದರಲ್ಲಿ ತಪ್ಪಿರಲಿ, ಇಲ್ಲದಿರಲಿ ಅದರಂತೆ ಬರೆದೆ ಇದರಲ್ಲಿ ತನ್ನ ದೋಷವೇನೂ ಇಲ್ಲ"[೭] ಎಂಬುದು ಇದರ ಮೂಲಕವಾಗಿ ಅವರು ಮೂಲಮಾತೃಕೆಗೆ ಎಷ್ಟು ಪ್ರಾಮಾಣಿಕವಾಗಿದ್ದರೆಂಬುದನ್ನು ನೋಡಬಹುದು. ಹಾಗೆಯೇ "ಪ್ರತಿಮಾಡಿದ ಲಿಪಿಕಾರರನ್ನು ಆಗಿನ ಜನ ಸಮುದಾಯ ಪ್ರೀತಿ, ವಿಶ್ವಾಸ ಹಾಗೂ ಗೌರವದಿಂದ ಕಾಣುತ್ತಿದ್ದರು. ಸಂಸ್ಕೃತಿಯ ಸಂವರ್ಧನೆಗಾಗಿ ದುಡಿದ ಲಿಪಿಕಾರನರರನ್ನು ನಾಡಿನ ಜನತೆ

ತುಂಬಾ ಅಭಿಮಾನದಿಂದ, ಸ್ನೇಹ ಸೌಹಾರ್ದತೆಯಿಂದ ನಡೆಸಿಕೊಂಡ ರೀತಿ ತುಂಬಾ ಮೌಲಿಕವಾಗಿದೆ"[೮] ಎಂಬುದರ ಮೂಲಕ ಲಿಪಿಕಾರರಿಗೆ ಸಮಾಜದಲ್ಲಿದ್ದ ಸ್ಥಾನವನ್ನು ನೋಡಬಹುದು.

ಹಸ್ತಪ್ರತಿಗಳಲ್ಲಿ ಬರುವ ವಿಭಿನ್ನ ಲಿಪಿಕಾರರನ್ನ '೩' ರೀತಿಯಲ್ಲಿ ವರ್ಗೀಕರಿಸಬಹುದು.

೧. ಹವ್ಯಾಸಿ ಲಿಪಿಕಾರರು

೨. ನಿಯುಕ್ತ ಲಿಪಿಕಾರರು

೩. ವೃತ್ತಿ ಲಿಪಿಕಾರರು

ಹೀಗೆ ಲಿಪಿಕಾರರನ್ನು ಪ್ರತ್ಯೇಕವಾಗಿ ಅಧ್ಯಯನ ಮಾಡುವ ಮೂಲಕ ಅವರ ಆಶಯಗಳು, ಉದ್ದೇಶಗಳು, ಮನೋಧರ್ಮಗಳನ್ನು ತಿಳಿದುಕೊಳ್ಳಬಹುದಾಗಿದೆ. ಹಾಗೂ ಪ್ರತಿ ಮಾಡಿದ ಕಾಲ ತಿಳಿಯುವುದರಿಂದ ಒಂದು ಗ್ರಂಥದ ಪಾಠ ಆಯಾ ಕಾಲದಲ್ಲಿ ಯಾವ ರೂಪದಲ್ಲಿದ್ದಿತು. ಪ್ರತಿ ಮಾಡುವ ಕೆಲಸ ಯಾವ ಊರಿನಲ್ಲಿ, ಮಠದಲ್ಲಿ ನಡೆಯಿತೆನ್ನುವುದನ್ನು ತಿಳಿಯಬಹುದಾಗಿದೆ.

ಎಸ್.ಶಿವಣ್ಣನವರ 'ವೀರಶೈವ ಹಸ್ತಪ್ರತಿ ಪುಷ್ಪಿಕೆಗಳು' ಎಂಬ ಗ್ರಂಥದಲ್ಲಿ ಈ ಮೇಲಿನಂತೆ ವಿಭಿನ್ನ ಲಿಪಿಕಾರರನ್ನು ವರ್ಗೀಕರಿಸಿಕೊಂಡಿದ್ದು ಅವರ ವಿವರಣೆಯನ್ನು ಮುಂದೆ ನೋಡಬಹುದಾಗಿದೆ.

**೧. ಹವ್ಯಾಸಿ ಲಿಪಿಕಾರರು :-**

"ಹವ್ಯಾಸಿ ಲಿಪಿಕಾರರ ಸಂಖ್ಯೆಯನ್ನು ಹೆಚ್ಚಾಗಿ ನೋಡಬಹುದು. ಇವರು ತಮ್ಮ ಸ್ವಪ್ರಯೋಜನಕ್ಕಾಗಿ, ಪರಪ್ರಯೋಜನಕ್ಕಾಗಿ, ತಮ್ಮ ಜ್ಞಾನಾರ್ಜನೆಗಾಗಿ, ತಮ್ಮ ಕುಟುಂಬದವರಿಗಾಗಿ ಬರಣಿಗೆ ಕಾರ್ಯವನ್ನು ಪೂರೈಸಿದ್ದಾರೆ."[೯] ಹಾಗೆಯೇ ಬೇರೆಯವರಿಂದ ಗ್ರಂಥಗಳನ್ನು ಬರೆಯಿಸಿ ತಮ್ಮ ಉದ್ದೇಶವನ್ನು ಈಡೇರಿಸಿಕೊಂಡಿರುವುದನ್ನು ನೋಡಬಹುದು.

**೧.ಅ. ಹವ್ಯಾಸಿ ಲಿಪಿಕಾರರು ತಮ್ಮ ಸ್ವಂತಕ್ಕಾಗಿ ಗ್ರಂಥಗಳನ್ನು ಬರೆದುಕೊಂಡಿರುವುದು :-**

* ಹಳೇ ಹುಬ್ಬಳ್ಳಿಯೊಲಗಿರುವ ಲಕ್ಕುಂಡಿ ಗುರುಪಾದಪ್ಪನು ಅನುಭವಸಾರ ಪುಸ್ತಕವನು ಯೋಗಾಭ್ಯಾಸ ಸಾಧನೆಗೆ ಯಂತಾ ಬರೆದು ಇಟಗೊಂಡರು (ಕ್ರ.ಸಂ.೨೩೩)

ಲಕ್ಕುಂಡಿ ಗುರುಪಾದನು ತನ್ನ ಸ್ವಂತಕ್ಕಾಗಿ ಯೋಗಾಭ್ಯಾಸ ಸಾಧನೆಗಂತ ಅನುಭವಸಾರವನ್ನು ಬರೆದುಕೊಂಡಿರುವುದರಿಂದ ಇವರನ್ನ ಹವ್ಯಾಸಿ ಲಿಪಿಕಾರ ಎಂದು ಗುರುತಿಸಬಹುದಾಗಿದೆ.

*ರೌದ್ರಿ ಸಂವತ್ಸರದ ವೈಶಾಕ ಬಹುಳ ೨ ಸೋಮವಾರ ಯಿ ಆರಾಧ್ಯಚಾರಿತ್ರವನು ನಣಂಜಿಯ ಸಿಂಹಾಸನಾಗ್ರಣ್ಯರಾದ ಮರುಳವೀರಂಒಡೆದೇವರು ಅವರ ಕರಕಂಜೋದ್ಭವರು ಜಕ್ಕಡಹಳ್ಳಿಯ ವೀರಂಒಡೆದ್ದೇವರು ಅವರ ಹಸ್ತಸಂಭವರು ಮರುಳಸಿದ್ಧದೇವರ ಅವರ

ಕರಬಿಸರುಹರ ಚಂದ್ರಶೇಖರ ದೇವರು ಆ ಚಂದ್ರಶೇಖರ ದೇವರ ಕರಕಮಲದಲ್ಲಿ ಉತ್ಪತ್ತಿಯಾದ ವೀರಮಾಹೇಶ್ವರಾಚಾರ್ಯರ ಭೃತ್ಯರಾದ ವಿರಕ್ತಮಠಸಿದ್ದದೇವರು ತಮಗೆ ಬರದುಕೊಂಡ ಪುಸ್ತಕವಿದು (ಕ್ರ.ಸಂ.೫೧೪)

ವೀರಮಹೇಶ್ವರಾಚಾರ್ಯರ ವಿರಕ್ತ ಮರುಳಸಿದ್ದದೇವರು ಆರಾಧ್ಯ ಚಾರಿತ್ರ್ಯವನ್ನ ತಮಗೆ ತಮ್ಮ ಸ್ವಂತಕ್ಕಾಗಿ ಬರೆದುಕೊಂಡಿದ್ದರಿಂದ ಇವರು ಹವ್ಯಾಸಿ ಲಿಪಿಕಾರರೆನ್ನಬಹುದು.

- ಟೀಕಿನ ಮಠದ ಸಂತತಿ ಅರ್ಚರಿ ವಿರಕ್ತಮಠದ ಸಿದ್ರಾಮಪ್ಪನು ತನ್ನ ಮನ ಹರುಷದಿಂದ ಬರದುಕೊಂಡ ಚನ್ನಬಸವಪುರಾಣ (ಕ್ರ.ಸಂ.೧೭೩೧)

ಹವ್ಯಾಸಿ ಲಿಪಿಕಾರನಾದ ಸಿದ್ರಾಮಪ್ಪನು ತನ್ನ ಮನಸ್ಸಂತೋಷಕ್ಕಾಗಿ ಚನ್ನಬಸವ ಪುರಾಣವನ್ನ ಬರೆದುಕೊಂಡಿರುವುದನ್ನ ನೋಡಬಹುದು

- ಯಿ ಅನುಭವಸಾರ ವಲಸಿದಾತ ನವಲಗುಂದ ತಾಲ್ಲುಕ ಹಿರೇಶಲವಡಿವಾಳಗಿರುವ ಬಿದರಿ ತಿಪ್ಪಪ್ಪನಾ ಸುಪುತ್ರ ವೀರಪ್ಪನು ತಂನ್ನ ಅನುಭವಸ್ಕೋರವಾ ಬರಕೊಂಡಿರುತ್ತಾನೆ (ಕ್ರ.ಸಂ.೨೩೮)

ಹವ್ಯಾಸಿ ಲಿಪಿಕಾರನಾದ ವೀರಪ್ಪನು ತನ್ನ ಅನುಭವಕ್ಕೋಸ್ಕರ ಅನುಭವಸಾರವನ್ನ ಬರೆದುಕೊಂಡಿರುವುದನ್ನ ನೋಡಬಹುದು.

- ಯವನಾಮ ಸಂವತ್ಸರದ ಫಾಲ್ಗುಣ ಬಹುಳ ೮ ಮಂದವಾರದಲ್ಲಿ ಮರವಂಜಿಯ ಮಠದ ಮರುಳಪ್ಪನವರ ಮಗ ಮರುಳಯ್ಯನವರು ತಂಮನಾದ ಗುರುಪಾದಯ್ಯನಿಗೆ ಪಾಠ ಹೇಳಿಕೊಡುವುದಕ್ಕೆ ಬರೆದಂತ ಕಾಶ್ಮೀರರಾಯನ ಪ್ರಸಂಗ (ಕ್ರ.ಸಂ.೧೮೯೦)

ತನ್ನ ಕುಟುಂಬದವರಿಗಾಗಿ ಗ್ರಂಥವನ್ನ ಬರೆದಿರುವುದನ್ನ ನೋಡಬಹುದು. ತಮ್ಮ ತಮ್ಮನಿಗೆ ಪಾಠ ಹೇಳಿಕೊಡುವುದಕ್ಕೆ ಅಣ್ಣನಾದ ಮರುಳಯ್ಯ ಎಂಬುವರು ಕಾಶ್ಮೀರರಾಯನ ಗ್ರಂಥವನ್ನು ಬರೆದಿರುವುದನ್ನ ನೋಡಬಹುದು.

- ಪ್ಲವ ಸಂವತ್ಸರದ ಬಾದ್ರಪದ ಶುಧ ೧೨ಯಲ್ಲು ಕೃಷ್ಣಪ್ಪನು ಕಡಿತವಾಗಿಲು ಶಿದ್ದಯಂಗ್ಯೆಯನ ಮಗಳಿಗೆ ಮನಪೂರ್ವಕವಾಗಿ ಬರೆದುಕೊಟ್ಟ ಕುಮಾರರಾಮನ ಚರಿತ್ರೆ (ಕ್ರ.ಸಂ.೧೮೯೬)

ಹೆಣ್ಣುಮಕ್ಕಳಿಗೂ ಸಹ ಗ್ರಂಥವನ್ನು ಹೆಚ್ಚಿನ ಜ್ಞಾನಕ್ಕಾಗಿ, ಇಲ್ಲವೇ ಸುಖಶಾಂತಿಗಾಗಿ, ತಮ್ಮ ಮಕ್ಕಳು ಸುಖವಾಗಿರಲೆಂದು ಶಿದ್ದಯಂಗ್ಯೆಯ ಎಂಬ ಲಿಪಿಕಾರ ಕುಮಾರರಾಮ ಚರಿತ್ರೆಯನ್ನ ಬರೆದಿರುವುದನ್ನ ನೋಡಬಹುದು.

- ಶ್ರೀ ಶಕಾಬ್ದ ೧೫೬೧ನೆಯ ಸೌಮ್ಯ ಸಂವತ್ಸರದ ಫಾಲ್ಗುಣ ಶುದ್ಧ ೨ ಶುಕ್ರವಾರ ಬರೆದನು ಮಲೆಯೂರ ಆದಪ್ಪಯ್ಯ ತನಗೆ ಬರೆದಂಥ ರಾಮನ ಸಾಂಗತ್ಯ (ಕ್ರ.ಸಂ.೧೦೯೩)

ಇಲ್ಲಿ ಆದಪ್ಪಯ್ಯ ಎಂಬ ಲಿಪಿಕಾರ ರಾಮನ ಸಾಂಗತ್ಯವನ್ನ ತನಗೋಸ್ಕರ ಅಂದರೆ ತನ್ನ ಸ್ವಂತಕ್ಕಾಗಿ ಬರೆದುಕೊಂಡಿರುವುದನ್ನ ನೋಡಬಹುದು.

- ಪ್ಲವ ಸಂ ಮಾಘ ಬ ೧೦ ಶುಕ್ರವಾದವರಿಗೆ ಶ್ರೀಗಿರಿಜಾಕಲ್ಯಾಣ ಮಹಾ ಪ್ರಬಂಧಮಂ ಮದ್ದಗಿರಿ ಗುರಿಕಾರು ನಂಜಪ್ಪನವರ ಕುಮಾರ ಕೊಮಾರಪ್ಪನು ಬರೆದಂಥಾ ಪ್ರತಿ ಯೀ ಪ್ರತಿ ತಂಮ ಮನಿಗೆಯೆಂಬುದಾಗಿ ಬರೆದಂಥ ಪ್ರತಿಗೆ ಶುಭಮಸ್ತು (ಕ್ರ.ಸಂ.೧೩೮೭)

ಕುಮಾರ ಕೊಮಾರಪ್ಪನು ಹವ್ಯಾಸಿ ಲಿಪಿಕಾರನಾಗಿದ್ದು ತನ್ನ ಮನೆಗೋಸ್ಕರವಾಗಿ ಗಿರಿಜಾಕಲ್ಯಾಣ ಕೃತಿಯನ್ನು ಬರೆದು ಕೊಂಡಿರುವುದನ್ನ ನೋಡಬಹುದು.

- ವಿಳಂಜಿನಾಮ ಸಂವತ್ಸರದ ವೈಶಾಖ ಶುದ್ದ ಪಂಚಮಿ ಗುರುವಾರ ಘಳಿಗೆ ಹತ್ತರಲ್ಲಿ ಹೊನ್ನವಳ್ಳಿ ಕರಿಸಿದ್ದೇಶ್ವರಸ್ವಾಮಿಯವರ ಕರಕಮಲ ಸಂಜಾತರಾದ ಪಟ್ಟದ ಗುರುಪಾದಸ್ವಾಮಿಯವರು ತಮ್ಮ ಸ್ವಂತಕ್ಕೆ ತಾವೇ ಬರೆದುಕೊಂಡ ಗುರು ರಗಳೆ ಗ್ರಂಥ (ಕ್ರ.ಸಂ.೧೪೯೦)

ಗುರುಪಾದಸ್ವಾಮಿಗಳು ಹವ್ಯಾಸಿ ಲಿಪಿಕಾರರಾಗಿದ್ದು, ಇವರು ತಮ್ಮ ಸ್ವಂತಕ್ಕಾಗಿ ಗುರುರಗಳೆ ಎಂಬ ಗ್ರಂಥವನ್ನು ಬರೆದುಕೊಂಡಿರುವುದನ್ನ ನೋಡಬಹುದು.

- ಸ್ವಸ್ತಿಸ್ತಿ ಜಯಾ. . . ೧೭೭೧ನೆಯ ಕೀಲಕ ಸಂವತ್ಸರದ ಶ್ರಾವಣ ಶು ೨ ಭೌಂಮ್ಯವಾರ ತಾಸು ೧೨ ಮಘ ನಕ್ಷತ್ರದಲ್ಲು ಕುಪಟೂರಲ್ಲು ಯಿರುವ ಪಂಚಪಕ್ಷಿ ರುದ್ರಪ್ಪನವರು ವೋದಿಕೊಳ್ಳುವ ಬಗ್ಗೆ ಬರಕೊಂಡ ಪುಸ್ತಕಕ್ಕೆ ಆಯುರಾರೋಗ್ಯ ಮಸ್ತು (ಕ್ರ.ಸಂ.೧೬೭೬)

ರುದ್ರಪ್ಪ ಎಂಬುವರು ಓದಿಕೊಳ್ಳಬೇಕೆಂಬ ಉದ್ದೇಶವನ್ನಿಟ್ಟುಕೊಂಡು ಚೆನ್ನಬಸವಪುರಾಣವನ್ನ ತಮಗೋಸ್ಕರ ತಾವೇ ಬರಸಿಕೊಂಡಿರುವುದನ್ನ ನೋಡಬಹುದು.

- ಸೋಮ್ಲಾಪುರದ ಬಿಳೆಗೋಲಪ್ಪನ ಕುಮಾರ ವೀರಪ್ಪನು ತನ್ನ ಮನೋಪ್ರೀತಿಯಿಂದ ವೋದಿ ಮುಕ್ತಿ ಪಡೆಕೊಂಬೋದಕ್ಕೆ ಬರೆದ ದೀಪದ ಕಲಿ ಕಾವ್ಯ (ಕ್ರ.ಸಂ.೧೯೫೮)

ವೀರಪ್ಪ ಎಂಬ ಲಿಪಿಕಾರನು ತನ್ನ ಪ್ರೀತಿಯಿಂದ ಓದಿ ಮುಕ್ತಿಪಡೆಯಬೇಕು ಎಂಬ ಉದ್ದೇಶವನ್ನಿಟ್ಟುಕೊಂಡು ದೀಪದ ಕಲಿ ಕಾವ್ಯವನ್ನು ಬರೆದುಕೊಂಡಿರುವುದನ್ನ ನೋಡಬಹುದು.

* ಕಲ್ಯಾಣ ಬಸವಣ್ಣನ ಮಠದ ಗುರುಪಾದಪ್ಪನವರ ವರ ತನುಜನಾದ ಚನ್ನಬಸಪ್ಪನವರ ಸುಕುಮಾರನಾದ ಗುರುಶಿದ್ದಪ್ಪ ಪಟ್ಟದೇವರ ಅನುಜನಾದ ಅಂತ್ಯವಾಗಿ ವಿರೂಪಾಕ್ಷಯ್ಯನು ಸ್ವತೇವ ಬರಕೊಂಡ ತ್ರಿಭುವನ ಮೋಹಿನಿ (ಕ್ರ.ಸಂ.೧ಲ೫ಲ)

ವಿರೂಪಾಕ್ಷ ಎಂಬ ಲಿಪಿಕಾರನು ತಾನೇ ಸ್ವತಃ ತ್ರಿಭುವನ ಮೋಹಿನಿಯನ್ನು ಬರೆದುಕೊಂಡಿರುವುದನ್ನ ಅಂದರೆ ತನ್ನ ಸ್ವಂತಕ್ಕಾಗಿ ರಚನೆ ಮಾಡಿಕೊಂಡಿರುವುದನ್ನ ನೋಡಬಹುದು.

ಹೀಗೆ ತಮ್ಮ ಸ್ವಂತಕ್ಕಾಗಿ, ಮುಕ್ತಿಪಡೆದುಕೊಳ್ಳುವುದಕ್ಕಾಗಿ, ಮನಸ್ಸಂತೋಷಕ್ಕಾಗಿ, ಅನುಭವಕ್ಕೊಸ್ಕರವಾಗಿ, ಪಾಠಹೇಳಿಕೊಡುವುದಕ್ಕಾಗಿ, ಮಗಳಿಗೆ ಮನಃಪೂರ್ವಕವಾಗಿ, ಮಕ್ಕಳ ಸುಖಕ್ಕಾಗಿ, ಓದಿಕೊಳ್ಳುವುದಕ್ಕಾಗಿ ಗ್ರಂಥ ರಚನೆ ಮಾಡಿರುವುದನ್ನ ನೋಡಬಹುದು.

**೧.ಆ. ಬೇರೆಯವರಿಂದ ಗ್ರಂಥಗಳನ್ನು ಬರೆಯಿಸಿ ತಮ್ಮ ಉದ್ದೇಶವನ್ನು ಈಡೇರಿಸಿಕೊಂಡಿರುವಂತಹುದನ್ನು ನೋಡಬಹುದು :-**

* ಜಗನ್ನಾಥೀಯ ಕಥೆಯನ್ನು ಚೆಂದಮಟದ ಸ್ತಲದಲ್ಲಿ ವಾಸವಾಗಿರುವಂತ್ತ ಬನ್ನೆಯ್ಯದೇವರು ತಂಮ ಮನವು ಭಾವದಿಂದ ವೋದಿಕೊಂಬುಕ್ಕೆ ಬರಿಸಿದನು (ಕ್ರ.ಸಂ.೧೭೮೮)

ಬೇರೆಯ ಲಿಪಿಕಾರರಿಂದ ಬನ್ನಯ್ಯದೇವರು ಎಂಬುವವರು ಓದಿಕೊಳ್ಳಬೇಕೆಂಬ ಉದ್ದೇಶವನ್ನು ಈಡೇರಿಸಿಕೊಳ್ಳಬೇಕೆಂದು ಜಗನ್ನಾಥೀಯ ಕಥೆಯನ್ನು ಬರೆಸಿರುವುದನ್ನ ನೋಡಬಹುದು.

* ಕಲ್ಯಾಣದಯ್ಯ ಅರಸಿನವರಿಗೆ ಆಯುರಾರೋಗ್ಯ ಸಕಲ ಸೌಭಾಗ್ಯ ಸಮಗ್ರತೆ ಸಹಿತಮಾಗಿ ಸಪ್ತಸಮುದ್ರ ಮುದ್ರಿತ ವಸುಧಾಧಿಪತಿತ್ಯ ಸಂತೋಷ ಸಂಜನಿತ ಸುಖಮಂ ಕ್ಷೇಮದಿಂದಹ ದೊಳನುಭವಿಸಿ ಮೇಲೆ ಸರ್ವೋತ್ಕರ್ಷಮಾದ ಶ್ರೀಗುರುಶಂಭುಲಿಂಗ ದೊಡಗೂಡಿ ಸರ್ವಜ್ಞತ್ವ ಸರ್ವಕರ್ತೃತ್ವದಿಂ ಸತ್ಯಾನಂದ ಸ್ವರೂಪರಾಗಿಯಿರಬೇಕೆಂಬ ಕಣಿಯಕಲ್ಲು ಅಪ್ಪಯ್ಯನವರ ಕುಮಾರ ಕೃಷ್ಣಯ್ಯ ಉಪಾಧ್ಯರು ತ್ರಿಭುವನ ತಿಲಕವನ್ನು ಬರೆದುಕೊಟ್ಟರು (ಕ್ರ.ಸಂ.೧ಲ೫೭)

ಕೃಷ್ಣಯ್ಯ ಎಂಬ ಉಪಾಧ್ಯಾಯರು ಹವ್ಯಾಸಿ ಲಿಪಿಕಾರರಾಗಿದ್ದು, ತಮ್ಮ ಗುರುಭಕ್ತಿಯಿಂದ ಕಲ್ಯಾಣದಯ್ಯ ಎಂಬುವವರಿಗೆ ಆಯುರಾರೋಗ್ಯ ಸಕಲ ಸೌಭಾಗ್ಯವನ್ನ ಅರಸಿ ಹಾಗೂ ಸತ್ಯಾನಂದ ಸ್ವರೂಪರಾಗಿ ಇರಬೇಕೆಂಬುದು ತ್ರಿಭುವನ ತಿಲಕವನ್ನು ಬರೆದು ಕೊಟ್ಟಿರುವುದನ್ನ ನೋಡಬಹುದು.

- ವೀವ ಸಂದ ಆಶಾಡ ಬ ೧೨ರಲ್ಲು ಮೇಗಳ ಕೆರೆ ಶಾನುಭೋಗ ಶಾಂತಪ್ಪನ ಮಗ ಆವರಗೋಳದ ಶಾನಭೋಗ ಮಲ್ಲಣ್ಣನ ಮಗ ಹಿರೇಕೊಟ್ಟಪ್ಪನ ಶಿಷ್ಯ ಸಿದ್ಧಲಿಂಗಣ ಬರೆದ ಕಾಲಚಕ್ರ

ಶಾನುಭೋಗನ ಮಲ್ಲಣ್ಣನ ಮಗನ ಶಿಷ್ಯನಾದ ಸಿದ್ಧಲಿಂಗಣ್ಣ ಎಂಬುವವನು ಹವ್ಯಾಸಿ ಲಿಪಿಕಾರನಾಗಿದ್ದು ಕಾಲಚಕ್ರವನ್ನು ಬರೆದಿರುವುದನ್ನ ನೋಡಬಹುದು.

ಹೀಗೆ ಬೇರೆಯವರಿಂದ ಹಾಗೂ ಬೇರೆಯವರು ಅರಸಿ ಬರೆದು ಕೊಡುವುದನ್ನ ಸಹ ನೋಡಬಹುದು. ಓದಿಕೊಳ್ಳಬೇಕೆಂದು, ಯಾವಾಗಲೂ ಸಕಲ ಸೌಭಾಗ್ಯವಾಗಿ ಇರಲೆಂದು, ಸ್ವರೂಪರಾಗಿರಬೇಕೆಂದು ಇಲ್ಲಿ ಗ್ರಂಥವನ್ನ ಬರೆದು ಕೊಟ್ಟಿರುವುದನ್ನ ಹಾಗೂ ಬರೆಸಿಕೊಂಡಿರುವುದನ್ನ ನೋಡಬಹುದು.

## ೨. ನಿಯುಕ್ತ ಲಿಪಿಕಾರರು :-

"ಇವರು ಸಂಬಳ ತೆಗೆದುಕೊಂಡು ಸರಕಾರದಲ್ಲಿ ಲೇಖನವೃತ್ತಿ ಮಾಡುವವರೆ ಹೊರತು ಹಸ್ತಪ್ರತಿ ನಕಲು ಕಾರ್ಯಕ್ಕಾಗಿ ನೇಮಿಸಲ್ಪಟ್ಟವರಲ್ಲ. ಮೈಸೂರು ಅರಸರ ಕಾಲಕ್ಕೆ ಇವರನ್ನು 'ಲೇಖರಿ' ಎಂದು ಕರೆಯುತ್ತಿದ್ದರು."[೧೦]

ಇವರು ಬೇರೆಯವರ ಆಜ್ಞೆಯ ಮೇರೆಗೆ ಅಥವಾ ಕೋರಿಕೆಯ ಮೇರೆಗೆ ಪ್ರತಿ ಮಾಡುವವರಾಗಿದ್ದಾರೆ. ಇವರನ್ನ ರಾಯಸದವರು, ಸುಬೇದಾರ, ಶಾನುಭೋಗ, ರಾಯಸ್ತ ಎಂದು ಗುರುತಿಸಬಹುದಾಗಿದೆ. 'ವೀರಶೈವ ಹಸ್ತಪ್ರತಿ ಪುಷ್ಪಿಕೆಗಳಲ್ಲಿ' ನಿಯುಕ್ತ ಲಿಪಿಕಾರರನ್ನು ನೋಡಬಹುದು.

- ಶುಭಕೃತು ಸಂವತ್ಸರದ ಆಶ್ವೀಜ ಬಹುಳ ೧೦ರಲ್ಲು ಕಲ್ಲಹಳ್ಳಿಯ ಕೆಂಪಯ್ಯ ಅರಸಿನವರ ಕೊಮಾರ ಲಕ್ಷ್ಮಿಕಾಂತಯ್ಯ ಅರಸಿನವರ ವಾಳಿಗದ ಜಣನಿಗೆ ಹಂಚಿಡ ಶ್ಯಾನಭೋಗ ಬಸವಯ್ಯನವರ ಮಗ ಮುದ್ದಯ್ಯ ಬರೆದ ಕರಿಯಬಂಟನ ಪುಸ್ತಕ (ಕ್ರ.ಸಂ.೯೭೯)

ಶ್ಯಾನುಭೋಗದ ಮಗನಾದ ಬಸವಯ್ಯನು ವಾಳಿಗದ ಜಣನಿಗೆ ಕರಿಯಬಂಟನ ಪುಸ್ತಕವನ್ನ ಬರೆದಿರುವುದನ್ನ ನೋಡಬಹುದು.

- ರಾಮುಗಟ ಅವರಗೊಳದ ಪಟ್ಟದ ಹಿರೇಕೊಟ್ಟಪ್ಪದೇವರ ಕರಾಬ್ಧಿ ಚಂದ್ರ ಅವರೊಳಗದ ಶಾನುಭೋಗ ಗುರಪ್ಪನವರು ಬರೆದಂತ ನನ್ನಯ್ಯನ ಚರಿತೆ (ಕ್ರ.ಸಂ.೨೦೦೭)

ಶಾನುಭೋಗ ಗುರಪ್ಪನವರು ನನ್ನಿಯ ಚರಿತ್ರೆಯನ್ನ ಬರೆದಿದ್ದಾರೆ, ಶಾನುಭೋಗನಾದ ಗುರಪ್ಪನು ನಿಯುಕ್ತ ಲಿಪಿಕಾರರೆನ್ನಬಹುದು.

- ಪರಾಭವ ಸಂ।ದ ಶ್ರಾವಣ ಶು ೧೦ಯಲು ಶ್ರೀಮತು ಯಾದಕೆರೆ ವೆಂಕಪನ ಕುಮಾರ ಸೀತಾರಾಮನು ಸ್ಥಳದ ಶಾನಭೋಗ ತಿಪ್ಪಣ್ಣನ ಕುಮಾರ್ರು ರುದ್ರಪ ಅಯಂಣಗೆ ಬರಕೊಟ್ಟ ಚಿತ್ರಶೇಖರ ಸೋಮಶೇಖರ ಯಕ್ಷಗಾನ (ಕ್ರ.ಸಂ.೧೬೧೧)

ಶಾನುಭೋಗ ತಿಪ್ಪಣ್ಣನ ಕುಮಾರನಾದ ರುದ್ರಪ ಅಯ್ಯಣ್ಣನಿಗೆ ವೆಂಕಟಪನ ಕುಮಾರ ಸೀತಾರಾಮನು ಚಿತ್ರಶೇಖರ ಸೋಮಶೇಖರ ಯಕ್ಷಗಾನವನ್ನು ಬರೆದುಕೊಟ್ಟಿದ್ದಾರೆ.

- ಸಾಧಾರಣ ಸಂವತ್ಸರದ ಕಾರ್ತಿಕ ಬ ೧೩ ಭಾನುವಾರದಲ್ಲು ಕೊರಟಗೆರೆ ಬಳೇಸಾಲೆ ಚಿಕ್ಕನಂಜುಂಡಪ್ಪಗೆ ವುಪಾದ್ಯ ತಂಮ್ಮೆಯ್ಯನವರ ಕುಮಾರ ಭಾಸ್ಕರೈಯನು ಬರೆದುಕೊಟ್ಟ ಅಖಂಡೇಶ್ವರ ವಚನ (ಕ್ರ.ಸಂ.೧೪೫)

ಉಪಾದ್ಯ ಎಂಬುವವರು ಲಿಪಿಕಾರರಾಗಿದ್ದು ಇವರು ಪೀಳಿಗೆಯಿಂದ ಪೀಳಿಗೆಗೆ ಲಿಪಿಕಾರ ವೃತ್ತಿ ಬಂದಿದ್ದರಿಂದ ತಂಮ್ಮೆಯ್ಯನವರ ಕುಮಾರ ಭಾಸ್ಕರೈಯನು ಬಿಳೀಸಾಲೆ ಚಿಕ್ಕನಂಜುಂಡಪ್ಪಗೆ ಅಖಂಡೇಶ್ವರ ವಚನವನ್ನು ಬರೆದುಕೊಟ್ಟಿರುವುದನ್ನ ನೋಡಬಹುದು.

- ವಿಜಯ ಸಂವತ್ಸರದ ಪುಷ್ಯಮಾಸದಲ್ಲಿ ದಳವಾಯಿ ಹಂಪಭೂಪಾಲರವರ ಪುತ್ರ ನಂಜರಾಜನ ಗರ್ಭ ಚಂದ್ರಾಬ್ಧಿಯಲ್ಲಿ ಉದಿಸಿದ ಮಹರಾಜ ರಾಜಶೇಖರೈಯರಸಿನವರು ರಾಯಸ್ತ ಗಿರಿರಾಮನ ಕೈಯ್ಯ ಬರೆಸಿದ ಸೋಮಶೇಖರ ಯಕ್ಷಗಾನ (ಕ್ರ.ಸಂ.೧೬೧೪)

ದಳವಾಯಿಯ ಹಂಪಭೂಪಾಲರ ಪುತ್ರನಾಗಿರುವ ನಂಜರಾಜ ಇವನ ಮಗನಾದ ರಾಜಶೇಖರ ಎಂಬ ಮಹಾರಾಜನು ತನ್ನ ಅರಮನೆಯಲ್ಲಿರುವ ರಾಯಸ್ತನಾಗಿರತಕ್ಕಂಥ ಗಿರಿರಾಮನ ಕೈಯಲ್ಲಿ ಚಿತ್ರಶೇಖರ ಸೋಮಶೇಖರ ಯಕ್ಷಗಾನವನ್ನು ಬರೆಸಿರುವುದನ್ನು ನೋಡಬಹುದು.

- ಶ್ರೀಮತು ಘನಲಿಂಗ ಚಕ್ರವರ್ತಿಗಳಾದ ಕಲ್ಲಪ್ಪದೇವರ ಮೊಮ್ಮಗ ರುದ್ರಪ್ಪನವರಿಗೆ ಹಟ್ಟಿ ರಾಯಸ್ತ ವೆಂಕಣ್ಣನ ಮಗ ರಂಗಪ್ಪನು ಪುತ್ರ ಪೌತ್ರಭಿವೃದ್ಧಿ ಯಾಗಲೆಂದು ಬರೆದ ಚೆನ್ನಬಸವಪುರಾಣ (ಕ್ರ.ಸಂ.೧೬೬೧)

ಘನಲಿಂಗ ಚಕ್ರವರ್ತಿಗಳಾಗಿ ಆಳುತ್ತಿದ್ದ ಕಲ್ಲಪ್ಪದೇವರ ಮೊಮ್ಮಗನಾದ ರುದ್ರಪ್ಪನವರಿಗೆ ಪುತ್ರ ಪೌತ್ರಾಭಿವೃದ್ಧಿಯಾಗಲೆಂದು ರಾಯಸ್ತನಾದ ವೆಂಕಣ್ಣನ ಮಗ ರಂಗಪ್ಪನು ಚೆನ್ನಬಸವಪುರಾಣವನ್ನು ಬರೆದುಕೊಟ್ಟಿದ್ದಾರೆ.

- ನಾರುವೆ ಶಾನಭಾಗ ಬಸವಂಣನವರ ಪಾದದ ಕೃಪೆಯಿಂದ ಲಿಂಗಪ್ಪನು ಆದಿತ್ಯವಾರ ಪೇಟೆಯಲ್ಲಿದ್ದ ಪರುವತಭದ್ರ ಶೆಟ್ಟಿಯ ಕೈಯ್ಯ ಬರಸಿದ ಗಣಭಾಷ್ಯ ರತ್ನಮಾಲೆ (ಕ್ರ.ಸಂ.೧೨೮೯)

ಶಾನುಭೋಗನಾದ ಲಿಂಗಪ್ಪನು ಬಸವಣ್ಣನವರ ಮೇಲಿನ ಅಪಾರಭಕ್ತಿಯಿಂದ ಗಣಭಾಷ್ಯ ರತ್ನಮಾಲೆಯನ್ನು ಪರುವತಭದ್ರ ಶೆಟ್ಟಿಯ ಕೈಯಲ್ಲಿ ಬರೆಸಿರುವುದನ್ನು ನೋಡಬಹುದು.

- ರಾಯಬೇಲೂರ ಸ್ಥಳದ ಶಾನಭೋಗಿ ನರಸಯ್ಯ ಬರೆದ ಚೋರಕಥೆ ಪುಸ್ತಕ ಯಿಡಕನಾಹಳ್ಳಿ ಹಳೆಯಪ್ಪನ ಮಗ ನರಸನಿಗೆ (ಕ್ರ.ಸಂ.೧೬೧೬)

ಇಲ್ಲಿ ಯಿಡಕಣಹಳ್ಳಿ ಹಳೆಯಪ್ಪನ ಮಗ ನರಸನಿಗೆ ರಾಯಬೇಲೂರಿನ ಶಾನಭೋಗ ನರಸಯ್ಯ ಎಂಬುವವನು ಚೋರಕಥೆ ಪುಸ್ತಕವನ್ನ ಬರೆದುಕೊಟ್ಟಿದ್ದಾರೆ.

- ವಿಭವನಾಮ ಸಂವತ್ಸರದ ಆಶ್ವಿಜ ೯ ತ್ರದಿಲ್ಲು ಕಾರ್ತಿಕ ಶುದ್ಧ ೫ ಸೋಮವಾರ ದಿನ ದೀಪದ ಕಲಿಯ ಕಾವ್ಯವನ್ನು ಕಾಗಗುರ್ತಿ ಗುಣಾರಿ ಚನವೀರ್ರೈಯ್ಯನನ ಕುಮಾರ ಅಗ್ರಜ ಜಂಬೈಯನ ತನುಜ ಶಿವಬಸಯ್ಯನು ಸುಬೇದಾರ ಬಸೆಸೆಟ್ಟಯಪ್ಪನವರಿಗೆ ಆಶಿರ್ವಾದ ಮಾಡಿ ಬರಕೊಟ್ಟ (ಕ್ರ.ಸಂ.೧೯೩೩)

ಕಾಗಗುರ್ತಿ ಗುಣಾರಿ ಚನವೀರ್ರೈಯ್ಯನ ಕುಮಾರರಲ್ಲಿ ಮೊದಲನೆಯವನಾದ ಜಂಬೈಯನ ಮಗನಾದ ಶಿವಬಸಯ್ಯನು ಸುಬೇದಾರನಾದ ಬಸೆಸೆಟ್ಟಿಯಪ್ಪನವರಿಗೆ ಆಶೀರ್ವಾದವನ್ನ ಮಾಡಿ ದೀಪದ ಕಲಿಯರ ಕಾವ್ಯವನ್ನ ಬರೆದುಕೊಟ್ಟಿದ್ದಾರೆ.

- ರಾಕ್ಷಸನಾಮ ಸಂವತ್ಸರದ ವೈಶಾಕ ಬಹುಳ ೧೪ ಸ್ತಿರವಾರದಲ್ಲೂ ಬಳಿಚೇಡಸ್ತಳ ಶಾನಭೋಗರಾದ ಗಿರ್‍ರಿಯಪ್ಪನವರ ಮರಿಮಗನಾದ ಮಲ್ಲಣ್ಣನು ಬರೆದ ಚಿತ್ರಶೇಖರ ಕಥೆ (ಕ್ರ.ಸಂ.೧೬೦೪)

ಬಿಳಿಚೇಡಸ್ತಳದ ಶಾನುಭೋಗರಾದ ಗಿರಿಯಪ್ಪನವರ ಮರಿಮಗನಾದ ಮಲ್ಲಣ್ಣನು ಚಿತ್ರಶೇಖರ ಕಥೆಯನ್ನು ಬರೆದು ಶಾನುಭೋಗನ ಕುಟುಂಬಕ್ಕೆ ಸೇರಿದ ಮಲ್ಲಣ್ಣನನ್ನು ನಿಯುಕ್ತ ಲಿಪಿಕಾರರೆನ್ನಬಹುದು.

ಹೀಗೆ ನಿಯುಕ್ತ ಲಿಪಿಕಾರರಲ್ಲಿ ಈ ಮೇಲಿನಂತೆ ರಾಯಸ್ತ, ಸುಬೇದಾರ, ಶಾನಭೋಗ, ಉಪಾದ್ಯ ಮುಂತಾದವರು ಬೇರೆಯವರ ಆಜ್ಞೆಯ ಮೂಲಕವಾಗಿ ಅಥವಾ ತಮ್ಮ ಪ್ರೀತಿಯಿಂದ ಗ್ರಂಥಗಳನ್ನು ಬರೆದು ಕೊಟ್ಟಿರುವುದನ್ನ ನೋಡಬಹುದು.

### ೩. ವೃತ್ತಿ ಲಿಪಿಕಾರರು :-

ಇವರು ತಮ್ಮ ಜೀವನವನ್ನು ನಡೆಸುವುದಕ್ಕೆ ಬರವಣಿಗೆಯನ್ನು ತಮ್ಮ ವೃತ್ತಿಯನ್ನಾಗಿ ಮಾಡಿಕೊಂಡಿದ್ದಾರೆ. "ಇವರು ಹಣ, ಬಟ್ಟೆ ಇನ್ನು ಮುಂತಾದವುಗಳನ್ನು ಪಡೆದು ಹಸ್ತಪ್ರತಿಗಳನ್ನು ಬರೆದು ಕೊಡುತ್ತಿದ್ದರು. ಈ ವೃತ್ತಿ ಲಿಪಿಕಾರರಲ್ಲಿ ಕೆಲವರ ಹೆಸರಿನ ಹಿಂದೆ ಬರಹದ ಎಂಬ ವಿಶೇಷಣವನ್ನು ನೋಡಬಹುದಾಗಿದೆ."[೧೧] "ಇವರು ಪ್ರಾಚೀನ ಕಾಲದಲ್ಲಿದ್ದು ಇಂದಿನ ಬೆರಳಚ್ಚುಗಾರರಂತೆ ಮುದ್ರಣಾಲಯದವರಂತೆ ಗ್ರಂಥೋತ್ಪಾದನ ಕೆಲಸದಲ್ಲಿ ನಿರತರಾಗಿದ್ದರು."[೧೨]

ಎಸ್.ಶಿವಣ್ಣನವರ "ವೀರಶೈವ ಹಸ್ತಪ್ರತಿ ಪುಷ್ಪಿಕೆಗಳು" ಎಂಬ ಗ್ರಂಥದಲ್ಲಿ ವೃತ್ತಿ ಲಿಪಿಕಾರರನ್ನು ನೋಡಬಹುದಾಗಿದ್ದು ಅವರನ್ನು ಈ ಗ್ರಂಥದ ಉಲ್ಲೇಖಗಳ ಮೂಲಕವಾಗಿ ಸೂಚಿಸಲಾಗಿದೆ.

- ಶುಕ್ರವಾರ ೨೧ನೇ ನವಂಬರ್ ೧೯೧೩ ಪ್ರಮಾ ಸಂಕಾತ್ರಿ ಬ ೧೨ ಚಿದೈಶ್ವರ್ಯ ಚಿದಾಭರಣವೆಂಬ ಪುಸ್ತಕ ಬರಸುವುದಕ್ಕೆ ವಂದು ತಿಂಗಳಿಗೆ ೧೫ ರೂಪಾಯಿ ಗೊತ್ತು ಮಾಡಿ ೩ ತಿಂಗಳಿಗೆ ೪೫ ರೂಪಾಯಿ ಗೊತ್ತು ಮಾಡಿ ಶಿಡ್ಲಗಟ್ಟದ ನಂಜಪ್ಪನವರ ಕೈಯಲ್ಲಿ ೧೨ ರೂಪಾಯಿಗಳ ಕೊಟ್ಟು ಇದೆ (ಕ್ರ.ಸಂ.೨೦೬೨)

ಇಲ್ಲಿ 'ಶಿಡ್ಲಗಟ್ಟದ ನಂಜಪ್ಪ ಎಂಬುವವರು ವೃತ್ತಿಲಿಪಿಕಾರರಾಗಿದ್ದು ಇಲ್ಲಿ ಹಣವನ್ನು ಪಡೆದು ಚಿದೈಶ್ವರ್ಯ ಚಿದಾಭರಣ ಎಂಬ ಪುಸ್ತಕವನ್ನು ಬರೆದುಕೊಡುವುದನ್ನ ನೋಡಬಹುದು. ಇಲ್ಲಿ ಒಂದು ತಿಂಗಳಿಗೆ ೧೫ ರೂಪಾಯಿ ಎಂದು ೩ ತಿಂಗಳಿಗೆ ೪೫ ರೂಪಾಯಿ ಎಂದು ಗೊತ್ತು ಮಾಡಿ ಈಗ ಲಿಪಿಕಾರನಿಗೆ ೧೨ ರೂಪಾಯಿ ಕೊಟ್ಟಿರುವುದನ್ನು ನೋಡಬಹುದು. ಇಲ್ಲಿ ಹಣದ ರೂಪದಲ್ಲಿ ಗ್ರಂಥವನ್ನು ಲೇಖಗೈಯುವುದನ್ನ ನೋಡಬಹುದು.

- ಪ್ರಜೋತ್ಪತ್ತ್ಯನಾಮ ಸಂ ಮಾರ್ಗಶಿರ ಶು ೩ಲ್ಲೂ ಕೊಡಲಿಪೇಟೆಯ ಬರಹದ ಫಲಾರದಯ್ಯ ಸಂಗಪ್ಪಸೆಟ್ಟಿಗೆ ಧನ – – ಗುರುಭಕ್ತನ ಕಾವ್ಯಕ್ಕೆ ಶುಭಮಸ್ತು (ಕ್ರ.ಸಂ.೧೪೬೩)

ಬರಹದ ಫಲಾರದಯ್ಯ ವೃತ್ತಿ ಲಿಪಿಕಾರನಾಗಿದ್ದು ಇವರು ಸಂಗಪ್ಪಸೆಟ್ಟಿಗೆ ಧನಕನಕ ಅಭಿವೃದ್ಧಿಯಾಗಲೆಂದು ಗುರುಭಕ್ತನ ಕಾವ್ಯವನ್ನ ಬರೆದಿರುವುದನ್ನ ನೋಡಬಹುದು.

- ಶಾರ್ವರಿ ಸಂ । ಆಷಾಢ ಬಹುಳ ೭ಲ್ಲು ಬರಹದ ರಾಚವಟ್ಟಿ ದೇವರ ಪುಸ್ತಕವು ಬರೆದು ಮುಗಿಯಿತ್ತು (ಕ್ರ.ಸಂ.೧೫೫೭)

ಬರಹದ ರಾಚವಟ್ಟಿ ವೃತ್ತಿ ಲಿಪಿಕಾರನಾಗಿದ್ದು ಘನಲಿಂಗದೇವರ ವಚನ ಪುಸ್ತಕವನ್ನು ಬರೆದಿರುವುದನ್ನ ನೋಡಬಹುದು.

- ಸಂಣಬರಹದ ಗುರುಬಸವರಾಜದೇವರು ಶ್ರೀಪಾದಕಟಾಕ್ಷದಿಂದ ಶಿವಲಿಂಗದೇವರಿಗೆ ಯೇಕೋತ್ತರ ಶತಸ್ಥಲ ವಚನ ಬರೆದುಕೊಟ್ಟಿದ್ದು. (ಕ್ರ.ಸಂ.೧೪೨೩)

ಗುರುಬಸವರಾಜದೇವರು ವೃತ್ತಿ ಲಿಪಿಕರರಾಗಿದ್ದು ಇವರು ಸಣ್ಣಬರಹ ಬರೆಯುತ್ತಿದ್ದರಿಂದ ಏಕೋತ್ತರ ಶತಸ್ಥಲ ವಚನವನ್ನು ಬರೆದಿರುವುದನ್ನ ನೋಡಬಹುದು. ಸಣ್ಣಬರಹ ಇವರಿಗೆ ವಿಶೇಷಣವಾಗಿರುವುದನ್ನು ನೋಡಹುದಾಗಿದೆ.

- ಬಡ್ಡಣಿಯ ಸ್ಥಳದ ಸಾಲಿ ನಾಗಪ್ಪನ ಸ್ವಹಸ್ತದ ಬರಹವು ರಾ । ಬೆನ್ನೂರ ಹಿರೇಮಠದ ಚರಂತ್ಯಪ್ಪನವರಿಗೆ ಮಾರಲಿಕ್ಕೆ ಕೊಟ್ಟಿತು ದೀಪದ ಕಲಿ ಕಾವ್ಯ (ಕ್ರ.ಸಂ.೯೯೩೬)

ಬಡ್ಡಣಿಯ ಸ್ಥಳದ ಸಾಲಿ ನಾಗಪ್ಪ ಎಂಬುವವನು ವೃತ್ತಿ ಲಿಪಿಕಾರನಾಗಿದ್ದು ಇವರು ದೀಪದ ಕಲಿಯರ ಕಾವ್ಯವನ್ನು ತಮ್ಮ ಸ್ವಹಸ್ತದಿಂದ ಬರೆದಿದ್ದು ಅದನ್ನು ಮಾರಲಿಕ್ಕೆ ಎಂದು ಬೆನ್ನೂರ ಹಿರೇಮಠದ ಚರಂತ್ಯಪ್ಪನವರಿಗೆ ಕೊಟ್ಟಿದ್ದು ಎಂದರೆ ಇಲ್ಲಿ ಮಾರುವುದಕ್ಕೂ ಸಹ ಮಾರಾಟಗಾರರನ್ನು ಇಟ್ಟುಕೊಂಡಿರುವುದನ್ನು ನೋಡಬಹುದು.

ವೃತ್ತಿ ಲಿಪಿಕಾರರು 'ವೀರಶೈವ ಹಸ್ತಪ್ರತಿ ಪುಷ್ಟಿಕೆಗಳು' ಎಂಬ ಗ್ರಂಥದಲ್ಲಿ ಹೆಚ್ಚಾಗಿ ಕಾಣಸಿಗುವುದಿಲ್ಲ. ಹೀಗೆ ಈ ಮೇಲಿನಂತೆ ವೃತ್ತಿ ಲಿಪಿಕಾರರನ್ನು ನೋಡಬಹುದಾಗಿದೆ.

**೪. ಲಿಪಿಕಾರ್ತಿಯರು** :- ಸ್ತ್ರೀಯರು ಸಹ ಹಸ್ತಪ್ರತಿ ಲಿಪಿಕಾರ್ಯದಲ್ಲಿ ತೊಡಗುವುದನ್ನು ನೋಡಬಹುದು. "ಸ್ತ್ರೀಯರು ಪ್ರತಿ ಮಾಡಿದ ಹಸ್ತಪ್ರತಿಗಳು ಆದಿ, ಅಂತ್ಯದಲ್ಲಿನ ಅವರ ಪ್ರಶಸ್ತಿ ದಾನಗಳಿಂದ ಆ ಕಾಲದ ಸ್ತ್ರೀಯರ ಶಿಕ್ಷಣದ ಬಗೆಗೆ ಮಾಹಿತಿ ವ್ಯಕ್ತವಾಗುತ್ತದೆ."[೧೩] ಎಂಬುದನ್ನು ತಿಳಿಯಬಹುದು.

'ವೀರಶೈವ ಹಸ್ತಪ್ರತಿ ಪುಷ್ಟಿಕೆಗಳು' ಎಂಬ ಗ್ರಂಥದಲ್ಲಿ ಲಿಪಿಕಾರ್ತಿಯರು ಸಹ ಗ್ರಂಥಗಳನ್ನು ಬರೆದಿರುವುದನ್ನು ನೋಡಬಹುದು. ಈ ಹಿನ್ನೆಲೆಯಲ್ಲಿ ಇವರ ಮನೋಭಾವವೇನು? ಎಂಬುದನ್ನು ತಿಳಿಯಬಹುದಾಗಿದೆ.

- ನೈಜಾಂ ಇಲಾಕಾ ಸಿದ್ಧರಾಂಪುರದ ಶ್ರೀ ವಿರೂಪಾಕ್ಷಯ್ಯನವರನುಜ್ಞೆಯಂತೆ ಶ್ರೀಮತಿ ಕೆಂಚನಗುಡ್ಡದ ವೀರಮ್ಮನವರು ಕಾಡಸಿದ್ದೇಶ್ವರ ವಚನವನ್ನು ಬರೆದುಕೊಂಡಿದ್ದಾರೆ. (ಕ್ರ.ಸಂ.೧೦೧೭)

ಕೆಂಚನಗುಡ್ಡದ ವೀರಮ್ಮ ಎಂಬುವವರು ಲಿಪಿಕಾರ್ತಿಯಾಗಿದ್ದು ವಿರೂಪಾಕ್ಷಯ್ಯನವರು ಕಾಡಸಿದ್ದೇಶ್ವರ ವಚನವನ್ನು ಬರೆಯಬೇಕೆಂದು ಆಜ್ಞೆ ಮಾಡಿದ್ದರಿಂದಾಗಿ ಇವರು ಬರೆದಿರುವುದನ್ನು ನೋಡಬಹುದು. ಇವರು ನಿಯುಕ್ತ ಲಿಪಿಕಾರ್ತಿ ಎಂತಲೂ ಕರೆಯಬಹುದಾಗಿದೆ.

- ಶ್ರೀರಸ್ತು ನಾ ಕಲ್ಯಾಣ ಪಟ್ಟಣದ ಹರಳ್ಳೆಯನವರಾ ಹೆಂಡತಿ ಕಲ್ಯಾಣಂಮನವರು ನಿರೂಪಿಸಿದಾ ಕಾಲಜ್ಞಾನ (ಕ್ರ.ಸಂ.೧೧೪೦)

ನಾ ಕಲ್ಯಾಣ ಪಟ್ಟಣದ ಹರಳೈಯನವರ ಹೆಂಡತಿಯಾದ ಕಲ್ಯಾಣಮ್ಮನವರು ಕಾಲಜ್ಞಾನವನ್ನು ಬರೆದಿದ್ದಾರೆ ಅದು ಅವರು ಕುಟುಂಬಕ್ಕಾಗಿ ಇರಬಹುದು.

ಗ್ರಂಥದಲ್ಲಿ ಈ ಮೇಲಿನಂತೆ ಇಬ್ಬರು ಲಿಪಿಕಾರ್ತಿಯರನ್ನು ಕಾಣಬಹುದಾಗಿದೆ.

**೫. ಲಿಪಿಕಾರರ ಆದರ್ಶಗಳು :-**

ಹಸ್ತಪ್ರತಿಗಳನ್ನು ತಪ್ಪಿಲ್ಲದಂತೆ ಶುದ್ಧವಾಗಿ ಶ್ರದ್ಧೆಯಿಂದ ಪ್ರತಿಮಾಡುವ ಲಿಪಿಕಾರರ ಆದರ್ಶಗಳು ಒಂದು ವಿಶೇಷವಾದ ಅಧ್ಯಯನವಾಗಿ ನೋಡಬಹುದಾಗಿದೆ. ಲಿಪಿಕಾರರು ಶ್ರದ್ಧೆ, ಭಕ್ತಿ, ಪ್ರಾಮಾಣಿಕತೆಯಿಂದ ಹಸ್ತಪ್ರತಿಗಳನ್ನು ಪ್ರತಿ ಮಾಡುತ್ತಿದ್ದರು. ಆದರೂ ಕೆಲವು ಸಂದರ್ಭದಲ್ಲಿ ಅವರಿಗೆ ಅರಿಯದಂತೆ ಕೆಲವು ದೋಷಗಳು, ತಪ್ಪುಗಳು ಆಗುತ್ತಿದ್ದವು. ಅದು ಅವರ ಗಮನಕ್ಕೆ ಬಂದಾಗ ಪಶ್ಚಾತ್ತಾಪ ಪಡುವುದು ಹಾಗೂ ತಪ್ಪಿದರೆ ತಿದ್ದಿ ಓದುವುದೆಂದು ಹಾಗೂ ಮೂಲ ಮಾತೃಕೆಗೆ ಪ್ರತಿ ಸಮಾನವಾಗಿ ಬರೆದಿದ್ದೇನೆ ಎಂದು ಹಸ್ತಪ್ರತಿ ಪ್ರಶಸ್ತಿಗಳಲ್ಲಿ ದಾಖಲಾಗಿರುವುದನ್ನು ನೋಡಬಹುದಾಗಿದೆ.

ಉದಾ: **"ತಪ್ಪಂ ಬರೆದವ ಕಡುಜಡ**
**ನಪ್ಪಾತಂ ಬರೆದನೆಂದು ಬಯ್ಯಲ್ಬೇಡಿಂ**
**ತಪ್ಪಕ್ಕು ಶುದ್ದಮಕ್ಕುಂ**
**ತಪ್ಪಿದ್ದರೆ ತಿದ್ದಿಕೊಳ್ಳಿರುತ್ತಮೆ ಪುರುಷರ್"**[೧೪]

ಇಲ್ಲಿ ಲಿಪಿಕಾರನು ವಿನಯದಿಂದ ತಪ್ಪಿದ್ದರೆ ತಿದ್ದಿಕೊಂಡು ಓದಬೇಕೆಂದು ವಿನಂತಿಸಿಕೊಳ್ಳುವುದನ್ನು ನೋಡಬಹುದು.

'ವೀರಶೈವ ಹಸ್ತಪ್ರತಿ ಪುಷ್ಪಿಕೆಗಳು' ಎಂಬ ಗ್ರಂಥದಲ್ಲೂ ಸಹ ಲಿಪಿಕಾರರ ಆದರ್ಶಗಳನ್ನು ನೋಡಬಹುದಾಗಿದೆ.

- ಅಖಂಡೇಶ್ವರ ಜೋಗುಳ ವಚನ - ಯಿ ಪುಸ್ತಕದೊಳಗೆ ತಪ್ಪುಯಿದ್ದಾರೆ ಬಲ್ಲಾ ಮಹಾಪುರುಷರು ತಿದ್ದಿಕೊಳುವದೂ ಯಿದಕ್ಕೆ ಏನಾದರೂ ಅಪನಿಂದೆ ಮಾಡಿದರೆ

ಅಖಂಡೇಶ್ವರನ ಪಾದದಾಣೆ ಶ್ರೀ ಗುರುವಿನ ಪಾದಾರವಿಂದಗಳಿಗೆ ಮಾಡುವ ಬಿಂನಹ (ಕ್ರ.ಸಂ.೧೦೩)

ಅಖಂಡೇಶ್ವರ ವಚನವನ್ನು ಬರೆದ ಅಂತ್ಯದಲ್ಲಿ ಈ ಪುಸ್ತಕದಲ್ಲಿ ತಪ್ಪಿದರೆ ಗೊತ್ತಿರುವಂತವರು ತಿದ್ದಿಕೊಂಡು ಓದಬೇಕೆಂದು ಅದನ್ನು ಅಪಮಾನ ಮಾಡಬಾರದೆಂದು ಹಾಗೆ ಮಾಡಿದರೆ ಅದು ದೇವರಿಗೆ ಬಿಟ್ಟಿದ್ದು ಎಂದು ಹೇಳಿರುವುದರ ಮೂಲಕ ಲಿಪಿಕಾರರ ಆದರ್ಶಗಳನ್ನು ನೋಡಬಹುದಾಗಿದೆ.

- ಕ್ಷಯನಾಮ ಸಮಕ್ಷರದಲ್ಲು ಮಾರ್ಗಸಿರದಲ್ಲು ಚಿಟ್ಟಿಯಾಮಾಸಿಯ ತದಿಗಿ ಹತ್ತನೇ ತಾಸದಲ್ಲಿ ಸುಕ್ರಹೋರದಲ್ಲಿ ಅಲ್ಲಮಪ್ರಭುವದೇವರ ನಟನ ತಾರಾವಳಿ ಮುಗಿದು ಯಿದು ತಪ್ಪುತಡಿ ಬಲ್ಲಂಥ ಪ್ರಬುಧರು ತಿದ್ದಿ ಓದುವುದು (ಕ್ರ.ಸಂ.೩೩೪)

ಶುಕ್ರವಾದಲ್ಲಿ ಅಲ್ಲಮಪ್ರಭುದೇವರ ನಟನ ತಾರಾವಳಿಯನ್ನು ಬರೆದು ಅಂತ್ಯದಲ್ಲಿ ಇದರಲ್ಲಿ ತಪ್ಪಿದ್ದರೆ ಪ್ರಬುದ್ಧರು ಅಂದರೆ ಬುದ್ಧಿವಂತರು ತಿದ್ದಿ ಓದಬೇಕೆಂದಿದ್ದಾರೆ.

- ಕರಣ ಹಸಿಗೆ – ಯೀ ಶಾಸ್ತ್ರವನು ಬಲ್ಲಂಥ ಜ್ಞಾನಿಗಳು ಬಡಮಗನ ಮೇಲೆ ದಯಮಾಡಿ ತಪ್ಪನು ತಿದ್ದಿ ಅರ್ಥಅನ್ವಯ ಮಾಡಿ ಓದುವದು (ಕ್ರ.ಸಂ.೮೫೧)

ಕರಣ ಹಸಿಗೆ ಕಾವ್ಯವನ್ನು ಬರೆದು ಅಂತ್ಯದಲ್ಲಿ ತಪ್ಪಿದರೆ ಈ ಶಾಸ್ತ್ರ ಬಲ್ಲಂಥವರು ತಪ್ಪನ್ನ ತಿದ್ದುಕೊಂಡು ಹಾಗೂ ಅರ್ಥ ಗೊತ್ತಾಗದಿದ್ದರೆ ಸಂಬಂಧ ಕಲ್ಪಿಸಿಕೊಂಡು ಓದಬೇಕೆಂದು ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತಿರುವುದನ್ನ ನೋಡಬಹುದು

- ಗಿರಿಜಾ ಕಲ್ಯಾಣ – ಹಸ್ತವೇಗ, ಜಡಬುದ್ಧಿ, ಪೂರ್ವಕಂ ಕೃತಂ ಸಮೀಕ್ಷ ಸಜ್ಜನಾ ಕರಕೃತಮಪರಾಧಂ ಕ್ಷಮಂತು ಮರ್ಹಂತು (ಕ್ರ.ಸಂ.೧೩೬೫)

ಗಿರಿಜಾ ಕಲ್ಯಾಣ ಎಂಬ ಗ್ರಂಥವನ್ನು ಬರೆದು ಅಂತ್ಯದಲ್ಲಿ ಬರಹದ ವೇಗದಿಂದ, ಜಡಬುದ್ಧಿಯಿಂದ ಏನಾದರೂ ತಪ್ಪಾಗಿದ್ದರೆ ದಯವಿಟ್ಟು ಕ್ಷಮಿಸಬೇಕೆಂದಿದ್ದಾರೆ.

* ಚೆನ್ನಬಸವಪುರಾಣ – ನಡೆವ ನಡೆಹುವನು ಬಲ್ಲವಾ
ನುಡಿಯೊಳ್ ತಪ್ಪುವಂ ಇಪ್ಪಾ ನಾಣ್ನುಡಿಯಂತಿ
ಗೆಡರಿಂಗೆ ತಿಳಿವ ಕೋವಿದಾ
ಮೃಡಭಕ್ತಿ ತಪ್ಪ ಬರೆದ ಮಾತೃಕೆಯನ್ನ
ನೋಡಿ ಬರೆದ ಪುರಾಣಂ (ಕ್ರ.ಸಂ.೧೬೭೧)

ಚನ್ನಬಸವಪುರಾಣವನ್ನು ಬರೆದ ಅಂತ್ಯದಲ್ಲಿ ಮೂಲಮಾತ್ರಕೆಗೆ ಪ್ರತಿ ಸಮಾನವಾಗಿ ಬರೆದಿದ್ದೇನೆ. ಹೇಳಿದ ಹಾಗೆ ಬರೆದಿದ್ದೇನೆ. ತಪ್ಪಿಲ್ಲದಂತೆ ಬರೆದಿದ್ದೇನೆ ಎಂದು ಹೇಳುವ ಮೂಲಕ ಲಿಪಿಕಾರರ ಆದರ್ಶಗಳನ್ನ ನೋಡಬಹುದು.

- ಕರಣ ಹಸಿಗೆ – ತಪ್ಪುಯಿದ್ದಾಗೂ ತತ್ವಗುರು ತಿದ್ದಿಕೊಳುವುದು ತಂಮ ಬಾಲಕನಾದ ತಪ್ಪುಗಳು ಅನಂತವಾಗಿ ಯಿದ್ದಾಗ್ಯೂ ಕ್ಷಮಿಸಿ ಯಿ ತತ್ವಶಾಸ್ತ್ರ ಗ್ರಂಥವನ್ನು ತಾಉಗಳು ತಿಳಿದು ಅಂದು ನೋಡಿಕೊಂಡು ಚಂನ್ನಾಗಿ ಪರಾಂಪರಿಸಿ ಅರ್ಥ ವಂದುವೇಳೆ ತಪ್ಪುಗಳು ಇದಾಗ್ಯೂ ನಂನ ಶತಾಪರಾಧವಂನು ಕ್ಷಮಿಸಬೇಕೆಂದು ಯರಡು ಕರಗಳನೊಡ್ಡಿ ಬೇಡಿಕೊಳ್ಳುವೆನು ಶ್ರೀ ಗುರುವೆ (ಕ್ರ.ಸಂ.೨೨೦೦)

ಕರಣಹಸಿಗೆಯನ್ನು ಬರೆದ ಅಂತ್ಯದಲ್ಲಿ ಲಿಪಿಕಾರನು ತಪ್ಪು ಇದ್ದರೆ ತಿದ್ದಿಕೊಂಡು ಓದಬೇಕೆಂದು, ನಾನು ನಿಮ್ಮ ಮಗನಿದ್ದಹಾಗೆ ಇದರ ಬಗ್ಗೆ ಹೆಚ್ಚು ಅಧಯ್ಯನ ಮಾಡಿ ನೋಡಬೇಕೆಂದು, ಅದಕ್ಕು ತಪ್ಪಿದ್ದರೆ ನನ್ನ ಅಪರಾಧವನ್ನು ಕ್ಷಮಿಸಬೇಕೆಂದು ಎರಡು ಕೈಗಳಿಂದ ನಿಮ್ಮನ್ನು ಬೇಡಿಕೊಳ್ಳುವೆನೆಂದು ವಿನಯಪೂರ್ವಕವಾಗಿ ಕೇಳಿಕೊಳ್ಳುವುದರ ಮೂಲಕ ಇವರ ಆದರ್ಶವನ್ನು ನೋಡಬಹುದಾಗಿದೆ.

- ದೀಪದ ಕಲಿಕಾವ್ಯ ತಿಳಿದಂತ ಪುಣ್ಯಾತ್ಮರು ತಪ್ಪು ನೆಪ್ಪುಗಳು ಯಿದ್ದರೆ ತಿದ್ದಿಕೊಂಬುದು ಬೈಯ್ಯಲಾಗದು ಬೈದರೆ ದೋಷ ತಪ್ಪದು (ಕ್ರ.ಸಂ.೨೩೧೧)

ಇಲ್ಲಿ ದೀಪದ ಕಲಿಕಾವ್ಯವನ್ನ ಬರೆದ ಅಂತ್ಯದಲ್ಲಿ ಲಿಪಿಕಾರನು ತಪ್ಪಿದ್ದರೆ ತಿದ್ದಿಕೊಂಡು ಓದಬೇಕೆಂದು ಬೈಯಬಾರದೆಂದು ಬೈದರೆ ನಿಮಗೆ ಅದು ದೋಷ ಎಂದು ಹೇಳುವುದರ ಮೂಲಕ ಅವರ ಆದರ್ಶಗಳನ್ನು ನೋಡಬಹುದಾಗಿದೆ.

ಹೀಗೆ ಲಿಪಿಕಾರರು ಅತ್ಯಂತ ಪ್ರಮುಖರೆಂದೇ ಹೇಳಬಹುದು. ಈ ಮೇಲಿನಂತೆ ವಿಭಿನ್ನ ಲಿಪಿಕಾರರನ್ನು ವರ್ಗೀಕರಿಸಿ ಕೊಂಡಿದ್ದು ಅವರ ಬಗೆಗಿನ ವಿವರಣೆಯನ್ನು ಹಾಗೂ ಜೊತೆಗೆ ವಿಶೇಷವಾಗಿ ಇಲ್ಲಿ ಲಿಪಿಕಾರ್ತಿಯರು ಬರುವುದರಿಂದ ಅವರ ಬಗೆಗಿನ ಮಾಹಿತಿಯನ್ನು ಮತ್ತು ಲಿಪಿಕಾರರ ಆದರ್ಶಗಳನ್ನು ಇಲ್ಲಿ ತಿಳಿಯಲಾಗಿದೆ. ಇವುಗಳ ಮೂಲಕವಾಗಿ ಸಮಾಜದಲ್ಲಿ ವಿವಿಧ ಉದ್ದೇಶಗಳಿಗಾಗಿ ಹಾಗೂ ಕುಟುಂಬ ಸ್ವಾಸ್ಥ್ಯಕ್ಕಾಗಿ ಹಸ್ತಪ್ರತಿಗಳು ಪ್ರಸಾರದಲ್ಲಿದ್ದುದ್ದನ್ನು ನೋಡಬಹುದು.

## ಇ) ಭಾಷೆ :–

ಹಸ್ತಪ್ರತಿಗಳಲ್ಲಿ ಭಾಷೆಗೆ ಸಂಬಂಧಿಸಿದಂತೆ ವೈವಿಧ್ಯಪೂರ್ಣ ವಿವರಗಳನ್ನು ನೋಡಬಹುದು. ಇಂದು ನಾವು ಭಾಷೆಯನ್ನು ಅಧ್ಯಯನ ಮಾಡುತ್ತಿರುವುದು ಪ್ರಸ್ತುತ ಬಳಕೆಯ ರೂಪದಲ್ಲಿ ಪ್ರಸ್ತುತ ಸಂದರ್ಭದಲ್ಲಿ ನಾವು ಯಾವ ರೂಪದ ಭಾಷೆಯನ್ನು ಬಳಸುತ್ತೇವೆಯೋ ಅದೇ ನಿಜವಾದ ಭಾಷೆ ಎಂದು ಹೇಳಬಹುದು. ಭಾಷೆ ಎನ್ನುವಂತಹುದು ಕಾಲದಿಂದ ಕಾಲಕ್ಕೆ ಬದಲಾವಣೆಯನ್ನು ಪಡೆದುಕೊಳ್ಳುತ್ತಲೇ ಇರುವಂತಹುದಾಗಿದೆ.

“ಹಸ್ತಪ್ರತಿಯೊಂದರ ಭಾಷಾಸ್ವರೂಪವನ್ನು ನಿಯಂತ್ರಿಸುವ ಹಲವಾರು ಅಂಶಗಳನ್ನು ಹೀಗೆ ಗುರುತಿಸಬಹುದು. ಯಾವ ಕಾಲಘಟ್ಟದಲ್ಲಿ, ಯಾವ ಪ್ರದೇಶದಲ್ಲಿ, ಯಾವ ಸಾಮಾಜಿಕ ಜಾತಿ ಶ್ರೇಣಿಗೆ ಸೇರಿದ ವ್ಯಕ್ತಿಯಿಂದ ಹಸ್ತಪ್ರತಿ ಸಿದ್ಧವಾಗಿದೆ ಎನ್ನುವುದರ ಮೇಲೆ ಆ ಪ್ರತಿಯ ಭಾಷಾಸ್ವರೂಪ ನಿರ್ಧಾರಿತವಾಗುತ್ತದೆ”[೧೫] ಗ್ರಂಥ ಸಂಪಾದನೆಯ ಮೂಲಕ ರೂಪಿಸಿ ತಂದ ಗ್ರಂಥಗಳ ಭಾಷೆಯು ಹಸ್ತಪ್ರತಿಯು ಭಾಷೆಗಿಂತ ಸಂಪೂರ್ಣವಾಗಿ ಭಿನ್ನವಾಗಿದೆ ಎನ್ನಬಹುದು. ಹಸ್ತಪ್ರತಿಗಳಲ್ಲಿ ಲಿಪಿಕಾರರು ಅವರ ಕಾಲದಲ್ಲಿ ಬಳಕೆಯಲ್ಲಿದ್ದ ಭಾಷೆಯನ್ನು ಲಿಖಿಸುವುದನ್ನು ನೋಡಬಹುದು. ಆ ಲಿಖಿತವಾದ ಭಾಷೆಯಲ್ಲಿ ಹೆಚ್ಚಾಗಿ ಆಡುವ ಮಾತಿನ ಭಾಷಾ ಬಳಕೆ ಹೆಚ್ಚಾಗಿ ಲಿಖಿಸಿರುವುದನ್ನು ನೋಡಬಹುದು. ಹಾಗೆಯೇ ಅಕ್ಷರ ರೂಪಗಳನ್ನು ವಿವಿಧ ವಿನ್ಯಾಸಗಳಿಂದ ಬರೆದು ಆ ಅಕ್ಷರ ವಿನ್ಯಾಸದ ಮೂಲಕ ಹಾಗೂ ಪದಗಳ ಮೂಲಕವಾಗಿ ಆ ಭಾಷೆಯ ಸ್ವರೂಪವನ್ನ ಅಧ್ಯಯನ ಮಾಡಿದಂತಹ ಸಂದರ್ಭದಲ್ಲಿ ಆಯಾ ಕಾಲದ ಆಡುಮಾತಿನ ಭಾಷೆಯನ್ನು ಅಧ್ಯಯನ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇದರಿಂದ ಭಾಷೆಯಲ್ಲಿ ಪ್ರಧಾನವಾಗಿ ಬರುವ ವ್ಯಕ್ತಿ ಭಾಷೆಯನ್ನು ಅಧ್ಯಯನ ಮಾಡುವುದರೊಂದಿಗೆ ಆಯಾ ವ್ಯಕ್ತಿಗಳು ಪ್ರತಿನಿಧಿಸುವ ಸಮಾಜವನ್ನು, ಕಾಲ, ಧರ್ಮವನ್ನು ಸಹ ಅಧ್ಯಯನ ಮಾಡಬಹುದು. “ಈ ಮೇಲಿನ ಎಲ್ಲ ಅಂಶಗಳಿಂದ ‘ಭಾಷೆಯ ವಿವಿಧ ಮುಖಗಳಿಗೆ ಈ ಹಸ್ತಪ್ರತಿಗಳು ಕೈಗನ್ನಡಿಯಾಗುತ್ತದೆ”[೧೬] ಎನ್ನಬಹುದು.

ಹೀಗೆ ಭಾಷೆಯ ಬೆಳವಣಿಗೆಗೆ ಅನುಗುಣವಾಗಿ ಭಾಷಿಕ ಬದಲಾವಣೆಯಾಗುವುದನ್ನು ಹಾಗೂ ಪ್ರಮಾಣ ಭಾಷೆಯಲ್ಲಿ ಹಸ್ತಪ್ರತಿಗಳಲ್ಲಿ ಕಾಣಬಹುದಾದರೂ ಸಹ ಅಲ್ಲಿಲ್ಲಿ ಉಪಭಾಷೆಯ ಪ್ರಯೋಗಗಳು ದೊರೆಯುವುದನ್ನು ನೋಡಬಹುದು. ಹೀಗೆ ಭಾಷಿಕ ವ್ಯತ್ಯಾಸಗಳ ಅಧ್ಯಯನಕ್ಕೆ ಈ ಹಸ್ತಪ್ರತಿಗಳು ವಿಫುಲವಾದ ಸಾಮಗ್ರಿಗಳನ್ನು ಒದಗಿಸುವುದರೊಂದಿಗೆ ವೈವಿಧ್ಯಮಯವಾದ ಭಾಷಾ ವ್ಯತ್ಯಾಸಗಳನ್ನು ಇಲ್ಲಿ ನೋಡಬಹುದಾಗಿದೆ.

ಎಸ್.ಶಿವಣ್ಣನವರ ‘ವೀರಶೈವ ಹಸ್ತಪ್ರತಿ ಪುಷ್ಪಿಕಗಳು’ ಎಂಬ ಗ್ರಂಥದಲ್ಲಿ ಈ ಭಾಷಾ ವ್ಯತ್ಯಾಸವನ್ನು ನೋಡಬಹುದು. ಇವುಗಳನ್ನು ಉಲ್ಲೇಖಗಳ ರೂಪದಲ್ಲಿ ಸೂಚಿಸಲಾಗಿದೆ.

೧. **"ಇ, ಈ ಗಳನ್ನು ಬಳಸುವ ಸಂದರ್ಭದಲ್ಲಿ 'ಯ'ಕಾರವನ್ನು ಬಳಸುವಂತಹುದು. ಇದಕ್ಕೆ ಯಶ್ರುತಿ"[೧೭] ಎಂದು ಹೆಸರು, ಇಲ್ಲಿ ಸ್ವರಗಳಿಗೆ ಬದಲಾಗಿ ವ್ಯಂಜನ ರೂಪಗಳು ಬಳಕೆಯಲ್ಲಿರುವುದನ್ನು ನೋಡಬಹುದು.**

- ಇ – ಯಿಮ್ಮಡಿ (ಕ್ರ.ಸಂ.೨೩೨), ಯಿಂದ್ರಕೀಲದ ಕಥೆ (ಕ್ರ.ಸಂ.೫೧೮) ಯಿಸವಿ (ಇಸವಿ) (ಕ್ರ.ಸಂ.೫೧೮), ಯಿದರ, ಯಿಲ್ಲಾ (ಕ್ರ.ಸಂ.೫೫೩) ಯಿದರೊಳಗೆ (ಕ್ರ.ಸಂ.೧೯೨೩), ಯಿಪ್ಪತ್ತೊಂದು (ಕ್ರ.ಸಂ.೨೧೮೭) ಯಿದಕ್ಕೆ (ಕ್ರ.ಸಂ.೧೦೩)..........
- ಈ – ಯಿಶ್ವರನಾಮ (ಕ್ರ.ಸಂ.೧೦೩, ೧೨೬, ೧೮೦) ಯೀರಯ್ಯ (ಕ್ರ.ಸಂ.೧೧೮, ೧೯೦)
- 'ಇ' ಕಾರ 'ವ'ಕಾರವಾಗಿರುವುದನ್ನ ಸಹ ನೋಡಬಹುದು. ವೀಶ್ವರನಾಮ (ಕ್ರ.ಸಂ.೩೮೪)

೨. **ಉ, ಊ ಗಳನ್ನು ಬಳಸುವ ಸಂದರ್ಭದಲ್ಲಿ 'ವ'ಕಾರವನ್ನು ಹೆಚ್ಚಾಗಿ ಬಳಕೆಯಾಗಿರುವುದನ್ನು ನೋಡಬಹುದು.**

. ವುಜ್ಜನಿ (ಕ್ರ.ಸಂ.೧೪೨, ೨೨೮೬), ವುಪಾದ್ಯ (ಕ್ರ.ಸಂ.೧೪೫, ೩೧೮)

. ಉ – ವುದಯವಾದ (ಕ್ರ.ಸಂ.೧೯೬), ವುದ್ಧರಣಿ (ಕ್ರ.ಸಂ.೫೫೩) ವುದ್ಭಟದೇವರ (ಕ್ರ.ಸಂ.೫೯೩) ಮುಂತಾದವು.

'ಉ'ಕಾರಕ್ಕೆ 'ಒ'ಕಾರ, 'ಔ' ಕಾರ ಬಳಕೆಯಾಗಿರುವುದನ್ನು ನೋಡಬಹುದು.

ಉ – ಪೊಸ್ತಕವ (ಕ್ರ.ಸಂ.೫೩೦)

ಪೌರಾಣ (ಕ್ರ.ಸಂ.೧೬೫೯, ೨೨೮೮)

- 'ಋ' ಕಾರಕ್ಕೆ ಬದಲಾಗಿ 'ರ', 'ವ'ಕಾರ ಬಳಕೆಯಾಗಿರುವುದನ್ನು ನೋಡಬಹುದು
- ಋ – ವೃಷ್ಯಾಶ್ರಮ (ಕ್ರ.ಸಂ.೧೮೦)

೩. **'ಎ'ಕಾರವು 'ಯ'ಕಾರವಾಗಿ, 'ಐ'ಕಾರವು 'ಅ'ಕಾರವಾಗಿ ಬಳಕೆಯಾಗಿರುವುದನ್ನು ನೋಡಬಹುದು.**

* ಎ – ಯೆಕವಾಕ್ಯ (ಕ್ರ.ಸಂ.೧೧೨), ಯರಡಕೆರೆ, ಯರಗುಂಟೆ

ಸ್ವಾಮಿ (ಕ್ರ.ಸಂ.೧೪೨), ಯೆಲವಕೂರು (ಕ್ರ.ಸಂ.೧೩೬೨)

ಹಾಗೆ 'ಎ' ಕಾರಕ್ಕೆ 'ಹ'ಕಾರ ಬಳಕೆಯಾಗಿದೆ

'ಎ' – ಹೆಚ್ಚರ (ಕ್ರ.ಸಂ.೨೨೨೩)

'ಐ' ಕಾರಕ್ಕೆ – 'ಅ'ಕಾರ ಬಳಕೆಯಾಗಿರುವುದು

ಐ – ಆಶ್ವರ್ಯಮಸ್ತು (ಕ್ರ.ಸಂ.೧೨೫), ಅಯಿಶ್ವರಿ (ಕ್ರ.ಸಂ.೫೪೮)

ಅಯಿನೂಱು (ಕ್ರ.ಸಂ.೬೫೬), ಅಯಿದನೆಯ (ಕ್ರ.ಸಂ.೧೮೨೮)

'ಐ'ಕಾರಕ್ಕೆ 'ಯ'ಕಾರ ಬಳಕೆಯಾಗಿರುವುದು

ಐ – ಜುಲಾಯಿ (ಜುಲೈ)

೪. ಒ, ಓ ಗಳನ್ನು ಬಳಸುವ ಸಂದರ್ಭದಲ್ಲಿ 'ವ'ಕಾರ ಬಳಕೆಯಲ್ಲಿರುವುದನ್ನು ನೋಡಬಹುದು.

ಒ – ವಂಬತ್ತು (ಕ್ರ.ಸಂ.೧೪೨, ೧೮೦, ೧೧೯)

ವಡೆಯ, ವಳಬಾಗಿಲ (ಕ್ರ.ಸಂ.೪೮೮)

ವೊಂಬೈನೂರು (೬೨೯), ವಳಗೆ (ಕ್ರ.ಸಂ.೩೩೧)

ವಪ್ಪಿದ (ಕ್ರ.ಸಂ.೧೦೮೮), ವೊಪ್ಪುವ (ಕ್ರ.ಸಂ.೨೩೧೧) ಮುಂತಾದವು

ಓ – ವೋದಿಸೋಮಠ (ಕ್ರ.ಸಂ.೧೧೨), ವೋದುವದು (ಕ್ರ.ಸಂ.೧೧೮)

ವೋದಬೇಕೆಂಬುದಾಗಿ (ಕ್ರ.ಸಂ.೧೨೫), ವೋದಿಕೊಂಡು (ಕ್ರ.ಸಂ.೧೯೦)

ವೋಬಳ (ಕ್ರ.ಸಂ.೧೯೪)

'ಉ'ಕಾರ ಬಳಕೆಯಾಗಿರುವುದನ್ನು ನೋಡಬಹುದು.

ಉದಾ :– ಬರೆಯೊಉದಕ್ಕೆ (ಬರೆಯೋದಕ್ಕೆ)

'ಔ'ಕಾರಕ್ಕೆ ಬದಲಾಗಿ 'ವ'ಕಾರ, 'ಉ'ಕಾರ ಬಳಕೆಯಲ್ಲಿರುವುದನ್ನು ನೋಡಬಹುದು.

ಔ – ಸುಪ್ರವುಡರು (ಕ್ರ.ಸಂ. ೧೯೨೪), ಶಿದ್ದರಾಮೇಗವುಡ (ಕ್ರ.ಸಂ.೧೦೬೩)

ಕಉದಿ (ಕ್ರ.ಸಂ.೭೯೮), ಕಉಲೆ (೨೨೮೪)

ಮುಂತಾದ ಉದಾಹರಣೆಗಳನ್ನು ನೋಡಬಹುದು.

೫.'ಖ'ಕಾರಕ್ಕೆ ಬದಲಾಗಿ 'ಕ'ಕಾರ ಬಳಕೆಯಲ್ಲಿರುವುದನ್ನು ನೋಡಬಹುದು.

ಉದಾ: ಸೋಮಸೇಕರ, ಚಿತ್ರಸೇಕರ (ಕ್ರ.ಸಂ.೧೬೨೧)

'ಘ' ಕಾರಕ್ಕೆ ಬದಲಾಗಿ 'ಗ' ಕಾರ ಬಳಕೆಯಾಗಿರುವುದನ್ನು ನೋಡಬಹುದು

ಉದಾ:– ಮಾಗ (ಕ್ರ.ಸಂ.೬೯೪, ೧೬೦೬)

'ಜ'ನಕ್ಕೆ ಬದಲಾಗಿ 'ಗ' ಕಾರ ಬಳಕೆಯಾಗಿರುವುದನ್ನು ನೋಡಬಹುದು.

ಉದಾ: ಗ್ಙಾನ (ಕ್ರ.ಸಂ.೬೪೧, ೭೦೫), ಆಗ್ನಾ (ಕ್ರ.ಸಂ.೩೧೮)

ಆಗ್ನಾಧಾರಕನಾದ (ಕ್ರ.ಸಂ.೪೮೮), ಗ್ನಾನಿಗಳು (ಕ್ರ.ಸಂ.೭೧೫)

ತತ್ವಗ್ನರು (ಕ್ರ.ಸಂ.೨೨೧೦), ಪರಮಗ್ನಾನ (೨೨೮೩)

೬. 'ಜ'ಕಾರಕ್ಕೆ 'ಝ'ಕಾರ ಬಳಕೆಯಾಗಿರುವುದು. ಅಂದರೆ ಅಲ್ಪಪ್ರಾಣ ಅಕ್ಷರಕ್ಕೆ ಬದಲಾಗಿ ಮಹಾಪ್ರಾಣ ಅಕ್ಷರ ಬಳಕೆಯಾಗಿರುವುದನ್ನು ನೋಡಬಹುದು.

ಉದಾ : ಗಿರಿಝು (ಕ್ರ.ಸಂ.೧೨೫೨)

**೭. 'ಟ'ಕಾರಕ್ಕೆ 'ಠ'ಕಾರದ ಬಳಕೆ ಹಾಗೂ 'ಠ'ಕಾರಕ್ಕೆ 'ಟ'ಕಾರ ಬಳಕೆಯಾಗಿರುವುದು, ಅಂದರೆ ಅಲ್ಪಪ್ರಾಣಕ್ಕೆ ಮಹಾಪ್ರಾಣ ಬಳಕೆ, ಹಾಗೂ ಮಹಾಪ್ರಾಣಕ್ಕೆ ಅಲ್ಪಪ್ರಾಣ ಬಳಕೆಯಾಗಿರುವುದನ್ನು ಕಾಣಬಹುದು. ಇದು ಉಚ್ಛಾರದ ದೋಷದಿಂದ ಆಗಿರುವಂತಹುದ್ದಾಗಿದೆ.**

ಉದಾ: ಟ – ಸೋಮವಾರಪೇಠೆ (ಕ್ರ.ಸಂ.೧೭೯೩)



ಠ – ವಿರಕ್ತಮಟ (ಕ್ರ.ಸಂ.೧೭೯೩)

**೮. 'ತ' ಕಾರಕ್ಕೆ ಬದಲಾಗಿ 'ಚ'ಕಾರ, 'ಛ'ಕಾರ ಬಳಕೆಯಾಗಿರುವುದನ್ನು ನೋಡಬಹುದು.**

ಉದಾ : ತ – ಸಂವಚರ (ಕ್ರ.ಸಂ.೧೨೫೨, ೧೬೬೪)

– ಸಂವಛರದಾ (ಕ್ರ.ಸಂ.೧೪೪೦)

'ದ'ಕಾರಕ್ಕೆ ಬದಲಾಗಿ 'ಡ'ಕಾರ ಬಳಕೆಯಾಗಿರುವುದನ್ನು ನೋಡಬಹುದು.

ಉದಾ : ದ – ಪ್ರಬುಢರು (ಕ್ರ.ಸಂ.೩೩೪)

– ಡಾವಣಗೇರಿ (ಕ್ರ.ಸಂ.೧೫೪೮)

'ಣ'ಕಾರಕ್ಕೆ ಬದಲಾಗಿ 'ನ'ಕಾರ ಬಳಕೆಯಾಗಿರುವುದನ್ನು ನೋಡಬಹುದು

ಉದಾ : ಣ – ಪೌರ್ನಮಿ (ಕ್ರ.ಸಂ.೫೪೭), ಪೂರ್ನ್ನವಾಗಿ (ಕ್ರ.ಸಂ.೧೦೮೬)

ಸಂಪೂರ್ನ್ನಾ (ಕ್ರ.ಸಂ.೧೯೫೫)

**೯. 'ಯ'ಕಾರಕ್ಕೆ ಬದಲಾಗಿ 'ಆ'ಕಾರ, 'ಉ'ಕಾರ, ಬಳಕೆಯಾಗಿರುವುದನ್ನ ನೋಡಬಹುದು.**

ಉದಾ : ಯ – ಆರುಯೆಂದರೆ (ಕ್ರ.ಸಂ.೧೬೬೮)

ಆರಂದಡೆ (ಕ್ರ.ಸಂ.೧೨೪೩), ಉಗಾದಿ (ಕ್ರ.ಸಂ.೧೯೧೮)

'ವ' ಕಾರಕ್ಕೆ 'ಔ'ಕಾರ, ಧೀರ್ಘ ಹ್ರಸ್ವವಾಗುವಂತಹುದನ್ನು ನೋಡಬಹುದು

ಉದಾ : ವ – ನೌಮಿ (ನವಮಿ) (ಕ್ರ.ಸಂ.೧೫೩೩)

ಗುರುವರ (ಗುರುವಾರ) (ಕ್ರ.ಸಂ.೧೨೬)

'ಸ'ಕಾರಕ್ಕೆ 'ಶ'ಕಾರ ಬಳಕೆಯಾಗುವುದನ್ನು ನೋಡಬಹುದು.

ಉದಾ : ಸ – ಶೇವಕ (ಕ್ರ.ಸಂ.೧೯೦), ಶರಸ್ವತಿ (ಕ್ರ.ಸಂ.೧೮೭)

ಗುರುಶಿದ್ದಪ್ಪ (ಕ್ರ.ಸಂ.೩೨೭), ದಿವಶಕ್ಕೆ (ಕ್ರ.ಸಂ.೫೧೫)

ನರಶಿಂಗರಾಯ (ಕ್ರ.ಸಂ.೫೧೮), ಮೀರಾಸನೇಶ್ವರಂ (ಕ್ರ.ಸಂ.೫೫೭)

ಶಿದ್ದಿಯಾಗಲೆಂದು (ಕ್ರ.ಸಂ.೧೩೨೩), ಶೀತಾ (ಕ್ರ.ಸಂ.೨೯೩) ಮುಂತಾದವು

'ಶ'ಕಾರಕ್ಕೆ ಬದಲಾಗಿ 'ಸ'ಕಾರ ಹಾಗೂ 'ಷ'ಕಾರ ಬಳಕೆಯಾಗುವುದನ್ನು ನೋಡಬಹುದು.

ಉದಾ : ಶ – ಸಣಿವಾರ (ಕ್ರ.ಸಂ.೧೯೧), ಸುಕ್ರಹೋರ (ಕ್ರ.ಸಂ.೩೩೪, ೧೨೯೧)

ಸುದ್ದ (ಕ್ರ.ಸಂ.೩೮೪), ವೈಸಾಕ (ಕ್ರ.ಸಂ೫೪೮)

ಸಿವಾಯ ನಮಃ (ಕ್ರ.ಸಂ.೫೫೪), ಸಿವರುದ್ರಪ್ಪ (ಕ್ರ.ಸಂ.೧೬೮೪)

ಸ್ರಾವಣ (ಕ್ರ.ಸಂ.೧೨೪೯), ಸಿರಸಾಷ್ಟಾಂಗ (ಕ್ರ.ಸಂ.೧೯೩೯)

**೧೦. ಪೂರ್ವದ ಹಳಗನ್ನಡ ರೂಪವಾದ ಸಪ್ತಮಿ ವಿಭಕ್ತಿ ಪ್ರತ್ಯಯದ 'ಒಳ್'ನ ಬಳಕೆಯಾಗಿರುವುದನ್ನು ನೋಡಬಹುದು.**

ಉದಾ : ಬುಧವಾರದೊಳ್ (ಕ್ರ.ಸಂ.೧೫೩೩)

ಶುಭವ್ಯಾಳಿದೊಳ್ (ಕ್ರ.ಸಂ.೧೬೫೧)

**೧೧. ಬಿಂದುಗಳ ಬಳಕೆಯನ್ನು ಹೆಚ್ಚಾಗಿ ನೋಡಬಹುದು.**

ಬಿಂದುಲಿಪಿಗೆ Capital an, o, a, cipher ciper, sun shapeletter, zero ಎಂಬ ಅರ್ಥವುಳ್ಳ ಶೂನ್ಯ, ಸ್ವರ್ಣ, ಖಂ, ಸೊನ್ನೆ, ಅನುಸ್ವಾರ ಎಂದು ಬೇರೆ ಬೇರೆ ಹೆಸರುಗಳಿವೆ. ಪೂಜ್ಯ, ಪೂಜೆ, ಎಂದು ಜನಬಳಕೆಯ ರೂಢಿಯ ಮಾತಿದೆ"[೧೮]

"ಸೊನ್ನೆ ಶಿವಶಕ್ತಿ ಮಯವಾಗಿ ಎರಡೊಂದಾದುದರ ಚಿಹ್ನೆಸಂಕೇತ, ಶಿವಶಕ್ತಿಮಯ ಬಿಂದು, ಅಂತಾಗಿ ಧ್ಯಾನ ಬಿಂದು, ಚಿತ್ಕಳೆಯೇ ಅಂಗವಾದ ನಿಷ್ಕಲಪರ ವಸ್ತುವಿನ ಸಾಕಾರ, ಅನುಸೃತ್ಯ ಸ್ವರತೇ ಇತಿ ಅನುಸ್ವಾರ, ನಿಶ್ಯಬ್ದ ಬ್ರಹ್ಮನಾದ ಶೂನ್ಯಲಿಂಗ ಸ್ವರೂಪವನ್ನು ಅನುಸರಿಸರಿಸುವುದರಿಂದ ಅನುಸ್ವಾರ ವೆಂದು ಪ್ರಸಿದ್ಧವಾಗಿದೆ. ನಾದಮಯ ಬಿಂದುವೇ ಶಿವ, ಜ್ಞಾನೇಂದುಧರ"[೧೯]

ಇಲ್ಲಿ ಬಿಂದುವನ್ನು ಶಿವಶಕ್ತಿಯ ಸ್ವರೂಪವಾಗಿರುವಂತದ್ದು, ಅದು ಅನುಸ್ವಾರವೆಂದು ಪ್ರಸಿದ್ಧಿಯನ್ನ ಪಡೆದಿದ್ದನ್ನು ನೋಡಬಹುದು.

ಲಿಪಿಕಾರರ ಬರಹದಲ್ಲಿ ಬಿಂದುವಿನ ರೂಪಗಳು ಬಳಕೆಯಾಗಿರುವುದನ್ನು ನೋಡಬಹುದು.

**೧೨. ವ್ಯಂಜನಗಳಿಗೆ ಬಿಂದುರೂಪ ಬಳಕೆಯಾಗಿರುವುದನ್ನು ನೋಡಬಹುದು.**

ಉದಾ : ಬಿಂನಹ (ಕ್ರ.ಸಂ.೧೦೩, ೧೯೪೨), ತಂಮ (೧೧೨, ೧೦೧೯......)

ಮೊಂಮಗ (ಕ್ರ.ಸಂ.೧೧೭), ತಂಮ್ಮೆಯ್ಯ (ಕ್ರ.ಸಂ.೧೪೫)

ಚೆಂನಬಸವ (ಕ್ರ.ಸಂ.೨೨೭), ಚೆಂನವೀರೇಶ್ವರ (೬೫೦)

ನಿಂಮ (೬೫೦), ಹುಂಣಿಮೆ (ಕ್ರ.ಸಂ.೫೯೫)

ಭೋಗಂಣ (ಕ್ರ.ಸಂ.೩೯೪), ಸಂಣಹಂಣ (ಕ್ರ.ಸಂ.೧೩೬೭)

ನಿಂಮಯ (ಕ್ರ.ಸಂ.೧೯೨೩), ತಿಂಮಂಣ, ವೆಂಕಂಣ (ಕ್ರ.ಸಂ.೧೩೬೮)

ಕಲ್ಯಾಣಂಮ (ಕ್ರ.ಸಂ.೧೦೪೦), ಅಂನದಾನಯ್ಯ (೧೪೨) ಮುಂತಾದವು

ಹೀಗೆ ಈ ಹಸ್ತಪ್ರತಿಗಳನ್ನ ಪ್ರತಿ ಮಾಡಿರುವಂತಹ ಲಿಪಿಕಾರರು ತಮ್ಮ ಆಡುಮಾತಿನ ಬಳಕೆಯಿಂದ ಅಂದರೆ ಉಚ್ಚಾರದ ಮೂಲಕವಾಗಿ ಭಾಷೆಯನ್ನು ವ್ಯತ್ಯಾಸ ಮಾಡಿರುವುದನ್ನು ನೋಡಬಹುದು. ಇದರಿಂದ ಅಲ್ಲಿಯ ಭಾಷಾ ಬಳಕೆಯ ವೈವಿಧ್ಯತೆಯ ತಿಳಿದುಕೊಳ್ಳುವುದರೊಂದಿಗೆ ಅಲ್ಲಿಯ ಕಾಲವನ್ನು ಸಹ ನಮಗೆ ತಿಳಿಯಲಿ ನೆರವಾಗುತ್ತದೆ. ಇಂದು ಪ್ರಸ್ತುತ ಸಂದರ್ಭದಲ್ಲಿ ನಾವು ಇಂತಹ ಭಾಷೆಯನ್ನು ಕಾಣುವುದಕ್ಕೆ ಸಾಧ್ಯವಾಗುವುದಿಲ್ಲ, ನಾವು ಆಡುಭಾಷೆಯನ್ನೇ ಉಪಯೋಗಿಸಿದರೂ ಸಹ ಇಂದು ಅದು ಶಿಷ್ಟ ಭಾಷೆಯೊಂದಿಗೆ ಸೇರಿಕೊಂಡಿರುವುದನ್ನು ನೋಡಬಹುದು.

## ಈ ) ಸಾಮಾಜಿಕತೆ :-

ಸಾಮಾಜಿಕ ಅಂಶಗಳ ಮೂಲಕವಾಗಿಯೂ ಒಂದು ಕಾಲದ ಸಮಾಜದ ಜನರ ಸಂಸ್ಕೃತಿಯನ್ನು ನೋಡಬಹುದು. ಇದಕ್ಕೆ "ಹಸ್ತಪ್ರತಿಗಳ ಕಾಲೋಫಿನ್ಸ್‌ಗಳು ಮೂಲ ಆಕರವಾಗಿದೆ"[೨೦] "ಹಸ್ತಪ್ರತಿ ಪುಷ್ಪಿಕೆಗಳಲ್ಲಿ ಸಿಗುವ ವೈವಿಧ್ಯಮಯವಾದ ವ್ಯಕ್ತಿನಾಮಗಳನ್ನು, ಸ್ಥಳನಾಮಗಳನ್ನು ಆಯಾ ಕಾಲದಲ್ಲಿ ಸಿಗುವ ಶಾಸನಗಳ ವ್ಯಕ್ತಿನಾಮಗಳ, ಸ್ಥಳನಾಮಗಳ ಜೊತೆಯಲ್ಲಿ ಇಟ್ಟು ಒಂದು ಸಾಂಸ್ಕೃತಿಕ ಅಧ್ಯಯನವನ್ನು ಮಾಡಲು ಸಾಧ್ಯವಿದೆ"[೨೧] ಹಸ್ತಪ್ರತಿ ಸೇವಾ ಕಾರ್ಯದಲ್ಲಿ ಕುಟುಂಬ, ಊರು, ಮಠಗಳು, ವ್ಯಕ್ತಿಗಳು ತೊಡಗಿರುವುದನ್ನು ಕಾಣುವ ಮೂಲಕ ಸಮಾಜದ ಜನರ ಬದುಕಿನ ರೀತಿ-ನೀತಿಯ ಪ್ರತಿಬಿಂಬಿಸುತ್ತದೆ. ಹಾಗೂ ಪ್ರಮುಖವಾಗಿ ಸ್ಥಳನಾಮಗಳು, ವ್ಯಕ್ತಿನಾಮಗಳು, ವೈವಿಧ್ಯಮಯವಾಗಿದ್ದು ಇವುಗಳ ಮೂಲಕವಾಗಿ ಸಾಂಸ್ಕೃತಿಕ ಅಧ್ಯಯನವನ್ನು ಮಾಡಬಹುದಾಗಿದೆ. ಹಾಗೆಯೇ ಸಮಾಜದಲ್ಲಿರುವ ವೃತ್ತಿಗಳ ಮೂಲಕವಾಗಿ ಜನರ ಸ್ಥಾನಮಾನ ವ್ಯಕ್ತವಾಗುವಂತಹುದು. ಹೀಗೆ ಸ್ಥಳನಾಮ, ಕುಲನಾಮಗಳ ಮೂಲಕ ಆಯಾ ವೃತ್ತಿ ಸಂಬಂಧವನ್ನು ಹಾಗೂ ಸಾಮಾಜಿಕ ಸಂಗತಿಯನ್ನು ತಿಳಿಯಬಹುದಾಗಿದೆ. ಸಾಮಾಜಿಕ ಅಂಶಗಳನ್ನು ೩ ರೀತಿಯಲ್ಲಿ ವರ್ಗೀಕರಿಸಲಾಗಿದೆ.

ಅ. ವ್ಯಕ್ತಿನಾಮ

ಆ. ಸಮಾಜದ ವ್ಯಕ್ತಿಗಳ ವೃತ್ತಿಗಳು

ಇ. ಸ್ಥಳನಾಮ

### ೧. ವ್ಯಕ್ತಿನಾಮ :-

ವ್ಯಕ್ತಿನಾಮದ ಮೂಲಕವಾಗಿ ಕುಲನಾಮವನ್ನು ಸಹ ಇಲ್ಲಿ ನೋಡಬಹುದಾಗಿದೆ. ಇಲ್ಲಿ ಲಿಪಿಕಾರರ ಹೆಸರು ಹಾಗು ಲಿಪಿ ಮಾಡಿಸಿದರವರ ಹೆಸರುಗಳನ್ನು ಈ ವೃತ್ತಿನಾಮದಲ್ಲಿ ನೋಡಬಹುದಾಗಿದೆ.

"ವೀರಶೈವ ಹಸ್ತಪ್ರತಿ ಪುಷ್ಪಿಕೆಗಳು ಎಂಬ ಗ್ರಂಥದಲ್ಲಿ ೧೦೦೦ಕ್ಕೂ, ಹೆಚ್ಚಿನ ವ್ಯಕ್ತಿಗಳ ಹೆಸರುಗಳಿರುವುದನ್ನು ನೋಡಬಹುದು. ಈ ಹೆಸರುಗಳನ್ನು ಸಂಪಾದಕರು ಅನುಬಂಧ – ೪ರಲ್ಲಿ ಪಟ್ಟಿ ಮಾಡಿರುವುದನ್ನು ನೋಡಬಹುದು"[೨೨]

* ಮಲ್ಲೇನಹಳ್ಳಿ ಮಠದ ಬಸವಲಿಂಗ (ಕ್ರ.ಸಂ.೭೪)

ಬಸವಲಿಂಗ ಎಂಬುದು ವ್ಯಕ್ತಿಯ ನಾಮವನ್ನು, ಮಲ್ಲೇನಹಳ್ಳಿ ಮಠ ಎಂಬುದು ಕುಲನಾಮವನ್ನು ಸೂಚಿಸುತ್ತದೆ.

* ಶ್ರೀ ಪಾದಕಮಲಭೃಂಗನಾಗಿ ಒಪ್ಪಲ್ಪಟ್ಟ ರುದ್ರಮುನಿದೇವರು ವಂಬತ್ತು ತಾಸುತ್ತಿನ ಅಮೃತಗಳಿಗೆಯಲ್ಲಿ ಬರದ ಕಥಾಸಾಗರ ಚೆಂನಬಸವರಾಜದೇವರು ಬರಸಿದವರು ದೇಶಭಾಗದಲ್ಲಿ ಚರಮೂರ್ತಿಗಳಾಗಿ ಚರಿಸಾಡುವ ವಿರಕ್ತಮೂರ್ತಿಗಳದಂಥಾ ಪಚ್ಚೆಕಂಥೇಸ್ವಾಮಿಯವರಿಗೆ ಆಯುರಾರೋಗ್ಯ ಅಭಿವೃದ್ಧಿಯಾಗಲೆಂದು ಕರಜಾತ, ಕಮಲದಲ್ಲಿ ಉದ್ಭವಿಸಿದ ಮಹಾಂತ ಮರಿಯಿಂದ ಬರೆಸಿದು (ಕ್ರ.ಸಂ.೫೪೭)

"ರುದ್ರಮುನಿದೇವರೆಂಬುವರು ಕಥಾಸಾಗರವನ್ನು ಬರೆಸಿಕೊಂಡಿದ್ದಾರೆ. ಇಲ್ಲಿ ಲಿಪಿಕಾರ ಮಹಾಂತಮರಿ, ಈ ಕಥಾಸಾಗರವನ್ನ ಬರೆಸಿಕೊಳ್ಳುವುದಕ್ಕೆ ಕಾರಣವನ್ನು ಸಹ ಕೊಟ್ಟಿದ್ದಾರೆ. ವಿರಕ್ತಮೂರ್ತಿಗಳಂಥಾ ಪಚ್ಚೆಕಂಥೇಸ್ವಾಮಿಯವರಿಗೆ ಕೊಡುವುದಕ್ಕೆ ಎಂದು ಬರೆಸಿದ್ದಾರೆ. ಇಲ್ಲಿ ರುದ್ರಮುನಿ, ಮಹಾಂತಮರಿ, ಪಚ್ಚೆಕಂಥಸ್ವಾಮಿ' ಎಂಬ ವ್ಯಕ್ತಿನಾಮಗಳನ್ನು ಇಲ್ಲಿ ನೋಡಬಹುದಾಗಿದೆ.

* ಮಹಂತಯ್ಯನವರಿಂದ ಕೆರೂರ ದೇಸಾಯಿಮಠದ ಶಿವಮೂರ್ತಯ್ಯ ವೋದಬೇಕೆಂದು ಬರಸಿದಾರು ಅಖಂಡೇಶ್ವರ ವಚನ (ಕ್ರ.ಸಂ.೧೨೬)

ಅಖಂಡೇಶ್ವರ ವಚನವನ್ನು ಓದಬೇಕೆಂಬ ಉದ್ದೇಶದಿಂದ ಕೆರೂರ ದೇಸಾಯಿ ಮಠದ ಶಿವಮೂರ್ತಯ್ಯನವರು ಮಹಂತಯ್ಯ ಎಂಬುವವರಿಂದ ಬರೆಸಿದ್ದಾರೆ. ಶಿವಮೂರ್ತಯ್ಯನವರು ಬರೆಸಿಕೊಂಡವರು. ಮಹಂತಯ್ಯ ಲಿಪಿಕಾರನಾಗಿದ್ದಾನೆ. ಕೆರೂರ ದೇಸಾಯಿಮಠದ ಶಿವಮೂರ್ತಯ್ಯ ಎಂದಾಗ ವ್ಯಕ್ತಿನಾಮದೊಂದಿಗೆ ಕುಲನಾಮವಾದ ಕೆರೂರ ದೇಸಾಯಿ ಮಠವನ್ನು ನೋಡಬಹುದಾಗಿದೆ.

* ಅಖಂಡೇಶ್ವರ ವಚನ ಬರದಾತ ರಾಮಣನು ಕಂದಕೆರೆ ಭಿಷೌವತಿ ಮಠದ ಮಲ್ಲಪ್ಪದ್ಯಾವರ ಕುಮಾರರು ಗುರಪ್ಪದ್ಯಾವರಿಗೆ ಬರಕೊಟ್ಟದ್ದು (ಕ್ರ.ಸಂ.೧೪೩)

ರಾಮಣನು, ಕಂದಕೆರೆ ಭಿಕ್ಷಾವತಿಮಟದ ಮಲ್ಲಪ್ಪದ್ಯಾವರ ಕುಮಾರರು ಗುರಪ್ಪದ್ಯಾವರಿಗೆ 'ಅಖಂಡೇಶ್ವರ ವಚನ'ವನ್ನು ಬರೆದುಕೊಟ್ಟಿದ್ದಾರೆ. ರಾಮಣ, ಮಲ್ಲಪ್ಪದ್ಯಾವ, ಗುರುಪ್ಪದ್ಯಾವ ಎಂಬ ವ್ಯಕ್ತಿನಾಮಗಳನ್ನು ಹಾಗೂ ಭಿಕ್ಷಾವತಿಮಟದ ಮಲ್ಲಪ್ಪದ್ಯಾವ ಎಂದಾಗ ಇಲ್ಲಿ ಕುಲನಾಮವನ್ನು ಸಹ ನೋಡಬಹುದಾಗಿದೆ.

* ಏಕೋತ್ತರ ಶತಸ್ಥಲವನ್ನು ರೋಣದ ವಿರಕ್ತಮಠದ ಸಿದ್ದಲಿಂಗದೇವರಿಗೆ ಹುಬ್ಬಳಿಯಲ್ಲಿರುವ ಗುರುಪಾದಪ್ಪ ಬಿನ್ನಬೈಟಪ್ಪ ಇವರು ಬರಕೊಟ್ಟದ್ದು (ಕ್ರ.ಸಂ.೭೧೪)

ಸಿದ್ದಲಿಂಗ, ಗುರುಪಾದಪ್ಪ, ಬೈಟಪ್ಪ ಎಂಬ ವ್ಯಕ್ತಿನಾಮವನ್ನು ಗುರುತ್ತಿಸುವುದರೊಂದಿಗೆ ವಿರಕ್ತಮಠದ ಸಿದ್ದಲಿಂಗ ಎಂಬಲ್ಲಿ ಅವರ ಕುಲನಾಮವನ್ನು ಸಹ ಗುರುತಿಸಬಹುದಾಗಿದೆ.

* ಸರ್ವಧಾರಿ ಸಂವತ್ಸರದ ಶ್ರಾವಣ ಬ ೫ಲ್ಲೂ ಅರುಟಾಳ ಮಠದ ಶಾಂತದೇವರ ಶಿಷ್ಯರು ಕೆಂಚಸಿದ್ದೆಯ ದೇವರು ಹಣಬೆ ಮಠದ ಚೆಂನವೀರಣೊಡೆದ್ದೇವರ ಶಿಷ್ಯ ಸಿದ್ದಇಯ್ಯನಿಗೆ ಬರೆದ ಏಕೋತ್ತರ. (ಕ್ರ.ಸಂ.೭೫೨)

ಶಾಂತದೇವ, ಕೆಂಚಸಿದ್ಧ, ಚೆನ್ನವೀರ, ಸಿದ್ದಯ್ಯ ಎಂಬ ವ್ಯಕ್ತಿನಾಮಗಳೊಂದಿಗೆ ಹಣಬೆಮಠ, ಅರುಟಾಳಮಠ ಎಂಬ ಕುಲನಾಮಗಳನ್ನು ಸಹ ನೋಡಬಹುದಾಗಿದೆ.

* ಕರಣ ಹಸಿಗೆಯನ್ನ ದಾಬಳಿ ಚನ್ನಬಸವಸ್ವಾಮಿಗಳ ಕರಕಮಲದೊಳದ್ಭವಿಸಿದ ಮಹಂತಪ್ಪನು ಬರದಂತಾದ್ದು ಯಾರಿಗೆ ಬರೆದುಕೊಟ್ಟರೆಂದರೆ ಬೆಟ್ಟಕೆರೆ ವಿರಕ್ತಮಠದ ಮುರಿಗೆಪ್ಪನವರ ಬೋಧಾಪುತ್ರನಾದಂಥ ಸಿದ್ಧವೀರಪ್ಪಗೆ ಬರೆದುಕೊಟ್ಟದು (ಕ್ರ.ಸಂ.೮೫೧)

ಚನ್ನಬಸವಸ್ವಾಮಿ, ಮಹಾಂತಪ್ಪ, ಮುರಿಗೆಪ್ಪ, ಸಿದ್ದವೀರಪ್ಪ ಎಂಬ ವ್ಯಕ್ತಿನಾಮಗಳನ್ನು ನೋಡಬಹುದು. ಹಾಗೆಯೇ ವಿರಕ್ತಮಠದ ಮುರಿಗೆಪ್ಪ ಎಂಬಲ್ಲಿ ವಿರಕ್ತಮಠ ಎಂಬುದು ಕುಲನಾಮಗಳನ್ನು ಸೂಚಿಸುವುದನ್ನು ನೋಡಬಹುದು.

* ಮರವಂಜಿಯ ಮಠದ ಮರುಳಪ್ಪನವರ ಮಗ ಮರುಳಯ್ಯನವರು ತಂಮನಾದ ಗುರುಪಾದಯ್ಯನಿಗೆ ಪಾಠ ಹೇಳಿಕೊಳ್ಳುವುದಕ್ಕೆ ಬರೆದಂತ ಕಾಶ್ಮೀರರಾಯನ ಪ್ರಸಂಗ. (ಕ್ರ.ಸಂ.೧೦೯೦)

ಮರುಳಪ್ಪ, ಮರುಳಯ್ಯ, ಗುರುಪಾದಯ್ಯ ಎಂಬ ವ್ಯಕ್ತಿನಾಮಗಳನ್ನು ಹಾಗೂ ಮರವಂಜಿಯ ಮಠ ಎಂಬುದು ಮರುಳಪ್ಪನವರ ಕುಲನಾಮವಾಗಿರುವುದನ್ನು ಇಲ್ಲಿ ಗುರುತಿಸಬಹುದಾಗಿದೆ.

* ಗಂಗೆ ಗೌರಿ ಸಂವಾದ ಪುಸ್ತಕದ ಬರದವರು ಆರೆಂದಡೆ ಕಂಡತ್ತಿಮಠದ ಪರುತ್ತದೇವರು, ರಾಮಘಟ್ಟದ ಬಸವಲಿಂಗದೇವರು ಯೆತ್ತಿದ ಪ್ರತಿ. (ಕ್ರ.ಸಂ.೧೨೪೩)

ಪರುತ್ತದೇವರು, ಬಸವಲಿಂಗ ಎಂಬ ವ್ಯಕ್ತಿನಾಮದೊಂದಿಗೆ ಕಂಡೆತ್ತಿಮಠ ಎಂಬ ಕುಲನಾಮವನ್ನು ಇಲ್ಲಿ ಗುರುತಿಸಬಹುದಾಗಿದೆ.

* ಅವಿರಳ ಪರಜ್ಯೋತಿ ಸ್ವರೂಪಾಯಮಾನರಾದಂತ ಆನೆಕೊಂಡ ಮಠದ ಕಾರಣಕರ್ತರಾದಂತ ಕುರಿಕೆ ಗ್ರಾಮದಲ್ಲಿರುವ ಮುದಿಬಸಪ್ಪ ದೇವರ ಗರ್ಭೋದಯರಾದಂತ ಗುರುಸಿದ್ದೇಶ್ವರ ಗರ್ಭಾಬ್ದಿ ಚಂದ್ರನೆನಿಸುವ ರೇವಪ್ಪನವರು ಶ್ರೀಮತ್ ಸಜ್ಜನ ಶುದ್ದ ಶಿವಾಚಾರ ಸಂಪಂನರಾದ ಬೀಳವನೂರು ಗೌಡರು ಹಂಪನೂರು ಸಂಣಲಿಂಗಪ್ಪನವರ ಉದರೋದಯನಾದಂತ ಹುಚ್ಚಯ್ಯಗೆ ಬರೆದುಕೊಟ್ಟ ಗಂಗೆ ಗೌರಿ ಸಂವಾದ. (ಕ್ರ.ಸಂ.೧೨೪೮)

ಮುದಿಬಸಪ್ಪ, ಗುರುಸಿದ್ದ, ರೇವಪ್ಪ, ಸಣ್ಣಲಿಂಗಪ್ಪ, ಹುಚ್ಚಯ್ಯ ಎಂದು ವ್ಯಕ್ತಿನಾಮಗಳನ್ನು ಗುರುತಿಸಬಹುದು. ಜೊತೆಗೆ ಆನೆಕೊಂಡಮಠ ಎಂಬುದು ರೇವಪ್ಪನವರೆಗೆ ಕುಲನಾಮವನ್ನಾಗಿ ಗುರುತಿಸಬಹುದಾಗಿದೆ.

**೨. ಸಮಾಜದ ವ್ಯಕ್ತಿಗಳ ವೃತ್ತಿಗಳು :–**

ವೃತ್ತಿಗಳ ಮೂಲಕವಾಗಿ ಅಲ್ಲಿಯ ಜನರ ಸ್ಥಾನಮಾನವನ್ನು ಗುರುತಿಸಬಹುದು. 'ವೀರಶೈವ ಹಸ್ತಪ್ರತಿ ಪುಷ್ಪಿಕೆ'ಯ ಗ್ರಂಥದಲ್ಲಿ ವಿವಿಧ ವೃತ್ತಿಗಳ ಮೂಲಕ ಜೀವನವನ್ನು ನಡೆಸುತ್ತಿದ್ದರೆಂಬುದನ್ನು ನೋಡಬಹುದು. ಉಪಾಧ್ಯ, ಏಜೆಂಟ್, ಗುರಿಕಾರ, ಚಿಪ್ಪಗ, ಅಕ್ಕಸಾಲೆ, ಜವಳಿಗ, ದೇವಾಂಗ, ನೀಲಗಾರ, ಬಣಜಿಗ, ಬಳೇಸಾಲಿ, ರಾಯಸ್ತ, ವಕೀಲ, ಶಾನಭೋಗ, ಶೆಟ್ಟಿ, ಸೇವಕ ಹೀಗೆ ವಿವಿಧ ವೃತ್ತಿಗೆನುಗುಣವಾಗಿ ಅಲ್ಲಿಯ ಜನರ ಜೀವನವನ್ನು ನಿರ್ಧರಿಸಬಹುದಾಗಿದೆ.

*** ಯೀ ಪುಸ್ತಕವಂನ್ನು ಬರದಂತೆ ಪಡುಗೂರು ಉಪಾಧ್ಯರು ಮಲ್ಲೈಯ್ಯನ ಕೈಬರಹ ಪ್ರೀತಿಯಿಂದ ಮೇರೆಗೆ ಬರೆದುಯಿದೇನೆ ಕಾಲಜ್ಞಾನವಚನ. (ಕ್ರ.ಸಂ.೧೦೩೭)**

ಇಲ್ಲಿ ಉಪಾಧ್ಯಾಯರು ಪ್ರಮುಖ ವೃತ್ತಿಯಾಗಿದ್ದು ಇವರು ಸಹ ಗ್ರಂಥವನ್ನು ಪ್ರತಿ ಮಾಡುತ್ತಿದ್ದದ್ದನ್ನು ನೋಡಬಹುದು. ಇವರನ್ನು ನಿಯುಕ್ತ ಲಿಪಿಕಾರರಲ್ಲಿ ಸೇರಿಸಬಹುದಾಗಿದೆ. ಪಡುಗೂರುನ ಉಪಾಧ್ಯಾಯರಾದ ಮಲ್ಲಯ್ಯ ಎಂಬುವವರು ಕಾಲಜ್ಞಾನವಚನವನ್ನು ಬರೆದಿರುವುದನ್ನು ಇಲ್ಲಿ ಉಪಾಧ್ಯಾಯ ಎಂಬ ವೃತ್ತಿ ಇತ್ತೆಂಬುದನ್ನ ನೋಡಬಹುದಾಗಿದೆ.

*** ಸ್ವಸ್ತಿಶ್ರೀ.......ಶಾಲಿ......ವರುಷಂಗಳೂ ॥ ॥ ಖರನಾಮ ಸಂವತ್ಸರದ ಜೇಷ್ಠ ೧೨ರು 'ಅಕ್ಕಸಾಲೆ' ಚೊಕ್ಕಸದ ಕುಮಾರ ಪುಲ್ಲಪಗೆ ಓದಿಸುವ ರಾಮಪ್ಪನು ಆ ಚಂದ್ರಾ..... ಬರೆದು ಕೊಟ್ಟಂಥ......**

ಉಲ್ಲೇಖಿಸುವಲ್ಲಿ ಕೆಲವು ಅಂಶಗಳು ಬಿಟ್ಟಿರುವುದನ್ನ ನೋಡಬಹುದು. 'ಅಕ್ಕಸಾಲೆ' ಎಂದರೆ ಚಿನ್ನ, ಬೆಳ್ಳಿ ಕೆಲಸ ಮಾಡುವವನು. ಇಂತಹ ವೃತ್ತಿಯವರು ಸಹ ಇದ್ದರೆಂಬುದನ್ನ ನೋಡಬಹುದು. ಇಲ್ಲಿ ಅಕ್ಕಸಾಲೆ ಎಂದಾಗ ಉನ್ನತ ಸ್ಥಾನವನ್ನು ಪಡೆದಿದ್ದರೆನ್ನಬಹುದು. ಅಕ್ಕಸಾಲೆಗೆ ಸೇರಿದ ಕುಮಾರ ಪುಲ್ಲಪ್ಪ ಎಂಬುವವನಿಗೆ ರಾಮಪ್ಪನು ಬರೆದುಕೊಟ್ಟಂಥ ಎಂದು ಯಾವ ಗ್ರಂಥವನ್ನು ಬರೆದುಕೊಟ್ಟಿದ್ದಾರೆ ಎಂಬುದನ್ನು ಉಲ್ಲೇಖಿಸುವಲ್ಲಿ ಬಿಟ್ಟಿದ್ದಾರೆ.

*** ಕಾಟಂಗೆರೆ ಅಂಗಡಿ ಬಸಪ್ಪನ ಮೊಮ್ಮಗನಾದ ಮರುಳಣ್ಣನು ಬರದಂತ ಅನುಭವ ಶಿಖಾಮಣಿ. (ಕ್ರ.ಸಂ.೨೦೮)**

ಅಂಗಡಿಯನ್ನು ಇಟ್ಟು ಜೀವನ ಮಾಡುತ್ತಿದ್ದೆರೆಂಬುದನ್ನು ನೋಡಬಹುದು. ಇವರು ಮಧ್ಯಮವರ್ಗದವರಾಗಿದ್ದಾರೆ. ಇಲ್ಲಿ ಕಾಟಂಗೆರೆಯಲ್ಲಿ ಅಂಗಡಿಯನ್ನು ಇಟ್ಟುಕೊಂಡಿರುವ ಬಸಪ್ಪನ ಮೊಮ್ಮಗ ಅಂದರೆ ಈ ಅಂಗಡಿ ಎನ್ನುವ ವೃತ್ತಿ ಪರಂಪರೆಯಾಗಿ ಬಂದಿರಬಹುದು ಇಲ್ಲವೆ, ಇವನ ಮೊಮ್ಮಗನನ್ನು ಗುರುತಿಸುವುದಕ್ಕಾಗಿ ಹೆಸರಿಸಬಹುದು. ಮರುಳಣ್ಣ ಎಂಬುವನು ಅನುಭವ ಶಿಖಾಮಣಿ ಎಂಬ ಗ್ರಂಥವನ್ನು ಬರೆದಿದ್ದಾರೆ. ಇವರು ಹವ್ಯಾಸಿ ಅಥವಾ ವೃತ್ತಿ ಲಿಪಿಕಾರರು ಆಗಿರಬಹುದು.

* ಶುಭಕೃತು ಸಂವತ್ಸರದ ಆಶ್ವಿಜ ಬ ೪ ೧೦ಲ್ಲು ಕಲ್ಲಹಳ್ಳಿಯ ಕೆಂಪಯ್ಯ ಅರಸಿನವರ ಕೊಮಾರ ಲಕ್ಷ್ಮಿಕಾಂತಯ್ಯ ಅರಸಿನವರ ಊಳಿಗದ...... ಜಿಣನಿಗೆ ಹಂಚಿಡ ಶ್ಯಾನಭಾಗ ಬಸವನಯ್ಯನವರ ಮಗ ಮುದ್ದಯ್ಯ ಬರೆದ ಕರಿಯಬಂಟನ ಪುಸ್ತಕ. (ಕ್ರ.ಸಂ.೯೭೯)

'ಊಳಿಗ' ಎಂದರೆ ಜೀತವನ್ನು ಮಾಡಿಕೊಂಡು ಜೀವನವನ್ನು ನಡೆಸುವವರು. ಇವರು ಕೆಳದರ್ಜೆಯಲ್ಲಿವರಾಗಿದ್ದಾರೆ. ಇಲ್ಲಿ ಲಕ್ಷ್ಮಿಕಾಂತಯ್ಯ ಎಂಬ ಅರಸರಲ್ಲಿ ಊಳಿಗನಾದ ಜಿಣ ಎಂಬುವವನು ಜೀತ ಮಾಡುತ್ತಿದ್ದನೆಂದು ಶ್ಯಾನುಭೋಗನಾದ ಬಸವನಯ್ಯ ಮಗ ಮುದ್ದಯ್ಯ ಇವರಿಗೆ ಕರಿಯಬಂಟನ ಪುಸ್ತಕವನ್ನು ಬರೆದುಕೊಟ್ಟಿರುವುದನ್ನು ನೋಡಬಹುದು.

* ಕಾಳಾಮುಕ್ತಿ ಸಂ।ದ ಆಸ್ವೀಜ ಬ ೧೧ ಗುರುವಾರದಲ್ಲು ಶ್ರೀಮನೂ 'ಯಾದಲಕಟ್ಟೆ ರುದ್ರಪ್ಪನೂ ಕೋಮಟಿಗರ ಚಂನಪನ ಮಗ ಯಂಕಗೆ ಧನಕನಕ ಬರೆದುಕೊಟ್ಟ ಚಿತ್ರಶೇಖರ ಸೋಮಶೇಖರ ಯಕ್ಷಗಾನ. (ಕ್ರ.ಸಂ.೧೮೧)

'ಕೋಮಟಿಗ' ಎಂದರೆ ಶೆಟ್ಟರು ಎನ್ನುವ ಅರ್ಥವಿದ್ದು ಇವರು ಬಹುಪಾಲು ವ್ಯಾಪಾರಿಗಳಾಗಿರುತ್ತಾರೆ. ಹಾಗೂ ಇವರು ಸಮಾಜದಲ್ಲಿ ಮಧ್ಯಮ ಹಾಗೂ ಉನ್ನತ ವರ್ಗದಲ್ಲಿರುವುದನ್ನು ನೋಡಬಹುದು. ಇಲ್ಲಿ ಕೋಮಟಿಗರ ಚಂನ್ನಪ್ಪ ಮಗ ಯಂಕಗೆ ಯಾದಲಕಟ್ಟೆಯ ರುದ್ರಪ್ಪ ಎಂಬುವವನು ಚಿತ್ರಶೇಖರ ಗ್ರಂಥವನ್ನು ಬರೆದು ಕೊಟ್ಟಿರುವುದನ್ನ ನೋಡಬಹುದು. 'ಕೋಮಟಿಗ' ಎಂಬ ವೃತ್ತಿ ಇತ್ತೆಂಬುದನ್ನು ನೋಡಬಹುದು.

- ಕೊಡ್ಲಿಪ್ಯಾಟೆಯಲ್ಲು ಯಿರುವ ಹಂಪಸಾಗರ ಚಿಪ್ಪಿಗರ ದೊಡ್ಡಬಸ್ಸೈಯ್ಯನ ಮಗ ಶಾಂತಪ್ಪಶೆಟ್ಟಿಯು ಮಸಳೂರ ಪ್ಯಾಟೆಯ ವೇಮಲು ಶೆಟ್ಟಪ್ಪಗೆ ಬರಕೊಟ್ಟ ಅನುಭವಮುದ್ರೆ. (ಕ್ರ.ಸಂ.೧೮೧)

'ಚಿಪ್ಪಿಗ' ಎಂದಾಗ 'ಶಿಲ್ಪಿ' ಎಂಬ ಅರ್ಥವನ್ನು ಪಡೆದುಕೊಳ್ಳುತ್ತಿದೆ. ಅಂದರೆ 'ಶಿಲ್ಪಿಗಳು' ಸಹ ಇದ್ದರೆಂದು ಕೆತ್ತನೆಯ ವೃತ್ತಿಯನ್ನು ಅವಲಂಬಿಸಿಕೊಂಡು ಇವರು ತಮ್ಮ ಜೀವನವನ್ನು ನಡೆಸುತ್ತಿದ್ದರು. ಇವರಿಗೆ ಸಮಾಜದಲ್ಲಿ ಬೇಡಿಕೆ ಇತ್ತೆನ್ನಬಹುದು. ಪ್ರಮುಖ ಸ್ಥಾನವನ್ನು ಹೊಂದಿದರೆನ್ನಬಹುದು.

- ಯೀ ಚೋರಕತೆಯ ಬರದಾತ ಹುಲಿಯೂರ ದುರ್ಗದ ಲಕ್ಷ್ಮಮೆಯಾನವರ ಮಗ ಮುದುರಂಗ್ಯೆಯನು ಆಯಿಚೋರಜವಳಿಯೀರ್ರೈಯಗೆ ಬರೆದ ಪುಸ್ತಕ. (ಕ್ರ.ಸಂ.೧೬೨೯)

'ಜವಳಿ' ಎಂದರೆ ಬಟ್ಟೆಯನ್ನು ಮಾರುವವನು. ಬಟ್ಟೆಯನ್ನು ಮಾರಿಕೊಂಡು ತಮ್ಮ ಜೀವನವನ್ನು ನಡೆಸುತ್ತಿದ್ದರೆನ್ನಬಹುದು. 'ಜವಳಿ' ಎಂಬ ವೃತ್ತಿ ಇದೆ ಎನ್ನಬಹುದು. ಇವರು ಸಮಾಜದಲ್ಲಿ ಮಧ್ಯಮ ಹಾಗೂ ಕೆಲವರ್ಗದಸ್ಥಾನವನ್ನು ಪಡೆದುಕೊಂಡಿರುತ್ತಿರೆನ್ನಬಹುದು. ಇಲ್ಲಿ ಆಯಿಚೋರ

ಜವಳಿಯವನಾದ ಈರೈಯ್ಯ ಎಂಬುವವನಿಗೆ ಚೋರಕೀರ್ತಿಯನ್ನು ಹುಲಿಯೂರ ದುರ್ಗದ ಲಕ್ಷ್ಮಿಮೆಯ ಮಗ ಮಧುರಂನು ಬರೆದುಕೊಟ್ಟಿರುವುದನ್ನು ನೋಡಬಹುದು.

ಸ್ವಸ್ತಿಶ್ರೀ.... ಶಕವರುಷಂಗಳು ೧೭೫೬ನೆ ವರ್ತಮಾನಕ್ಕೆ ಸಲುವ ಸಂವತ್ಸರದಾ ವೈಶಾಖ ಬಹುಳ

*೧೦ಲು ಸೋಮವಾರ ಗಳಿಗೆ ೧೦ರಲ್ಲು ಬರದಾತ ! ಬಳಗಾರ ಚಿಕ್ಕಯ್ಯ ಕೊಮಾರ

ಕಲ್ಲೈಯನು ಬರದಂತ್ತ. (ಕ್ರ.ಸಂ.೯೫)

'ಬಳೆಗಾರ' ಎಂದಾಗ ಬಳೆಯನ್ನು ಮಾರಿಕೊಂಡು ತಮ್ಮ ಜೀವನವನ್ನು ನಡೆಸುವಂತವರು. ಇವರು ಸಮಾಜದಲ್ಲಿ ಕೆಲವರ್ಗದವರಾಗಿದ್ದಾರೆ. ಬಳೆ ಮಾರುವ ವೃತ್ತಿಯನ್ನು ನೋಡಬಹುದು. ಬಳೆಗಾರನಾದ ಚಿಕ್ಕಯ್ಯ ಕೊಮಾರ ಕಲ್ಲೈಯನು ಅನುಭವಶಿಖಾಮಣಿಯನ್ನ ಬರೆದಿರುವುದನ್ನು ನೋಡಬಹುದು.

- ಸುರನಗರಿಗೆ ಸಾಟಿಯೆನಿಪ ವ್ಯಾಪ್ರದಪುರಕಂ.... ವಪುತ್ರನ ತನುಜ ಬರೆದ ಚೋರರ ಕೃತಿಯನು ಬರದಾತ ಹಂದಿಯೂರ ಸ್ಥಳದ ಶಾನಭಾಗ...ಕ್ಕಂ..... ಸಿಂಹಾಸನಾಧೀಶ್ವರರಾದ ದಳವಾಯಿ....ಕಂಪ....ಕಯ್ಯ.... ಅರಸು....ದ್ದೆಯ್ಯ.... ನವರ ಕುಮಾರ ಪುಟ್ಟನಂಜರಾಜಯ್ಯ ಆ ... ಬರದು ಕೊಟ್ಟ ಚೋರಕಥೆ. (ಕ್ರ.ಸಂ.೧೬೨)

ಇಲ್ಲಿ ಕೆಲವು ಪದಗಳನ್ನ ಉಲ್ಲೇಖಿಸದೇ ಇರುವುದನ್ನ ನೋಡಬಹುದು. 'ಶಾನುಭೋಗ' ಎಂಬ ವೃತ್ತಿಯಿತ್ತೆಂದು. ಶಾನುಭೋಗ ಎಂದರೆ ಹಳ್ಳಿಯ ಲೆಕ್ಕಪತ್ರಗಳನ್ನು ಬರೆಯುವವನಾಗಿದ್ದಾನೆ. ಇವರಿಗೆ ಸಮಾಜದಲ್ಲಿ ಉನ್ನತಸ್ಥಾನವನ್ನು ಕೊಡಲಾಗಿದೆ. ಇವರು ಉನ್ನತವರ್ಗದವರಾಗಿ ಕಂಡುಬರುತ್ತಾರೆ.

- ಶ್ರೀಮತ್ಪ್ರಾಣನಾಥ ಯಿಂರ್ಮಡಿ ಮುರಿಗಾ ಗುರುಸಿದ್ಧ ಶಿವಯೋಗಿ ಕೃತ ಯೇಕೋತ್ತರ ಶತಸ್ಥಲ ಸಂಪೂರ್ಣಂ ಸೇವಕ ಚಂನಬಸವನ ಬರಹ. (ಕ್ರ.ಸಂ.೧೧೮)

'ಸೇವಕ' ಎಂಬ ವೃತ್ತಿಯನ್ನು ಕಾಣಬಹುದು. ಮಠಗಳಲ್ಲಿ, ಅರಮನೆಗಳಲ್ಲಿ ಸೇವಕನಾಗಿ ದುಡಿಯುವಂತಹುದು. ಇವರು ಸಮಾಜದಲ್ಲಿ ಕೆಳವರ್ಗದವರಾಗಿದ್ದಾರೆ. ಸೇವಕನಾದ ಚನ್ನಬಸವನು ಏಕೋತ್ತರ ಶತಸ್ಥಲ ಎಂಬ ವಚನವನ್ನು ಬರೆದಿರುವುದನ್ನ ನೋಡಬಹುದು. ಗುರುಸಿದ್ಧ ಶಿವಯೋಗಿಗಳಿಗೆ ಸೇವಕನಾಗಿದ್ದನೆಂಬುದು ತಿಳಿದುಬರುತ್ತದೆ.

- ಶ್ರೀ ಬಸವಲಿಂಗಾಯ ನಮಃ ಎಲ್ಲ ಗಣಂಗಳ ಪಾದವೇ ಗತಿ. ಷಟ್ಸ್ಥಲಮೂರ್ತಿಗಳ ಪಾದವೆಗತಿ. ಸೆಜ್ಜೆಯ ರೇವಂಣ ಬರವ ಯಲ್ಲ ಪುರಾತನರ ವಚನ. (ಕ್ರ.ಸಂ.೬೭೦)

'ಸಜ್ಜೆಯ' ಎಂಬ ವೃತ್ತಿಯನ್ನು ನೋಡಬಹುದು. ಸಜ್ಜೆಯ ಎಂದರೆ ಮನೆಯನ್ನು ಕಾಯುವ ಸೇವಕ. ಗುರುಗಳ ಮನೆ ಇರಬಹುದು ಅಥವಾ ಅಧಿಕಾರಿಗಳ ಮನೆಗಳಿರಬಹುದು. ಇವರು ಸಮಾಜದಲ್ಲಿ

ಕೆಳವರ್ಗದವರಾಗಿರುತ್ತಾರೆ. ಇಲ್ಲಿ ಸೆಜ್ಜೆಯನಾದ ರೇವಣ್ಣ ಎಂಬುವವನು ಎಲ್ಲಾ ಪುರಾತನ ವಚನವನ್ನು ಬರೆದಿರುವುದನ್ನು ನೋಡಬಹುದು.

- ಪ್ಲವ ಸಂ।ಮಾಘ ಬ ೧೦ ಶುಕ್ರವಾರದವರಿಗೆ ಶ್ರೀಗಿರಿಜಾಕಲ್ಯಾಣ ಮಹಾ ಪ್ರಬಂಧಮಂ ಮದ್ದಗಿರಿ ಗುರಿಕಾರು ನಂಜಪ್ಪನವರ ಕುಮಾರ ಕೊಮಾರಪ್ಪನು ಬರೆದಂಥ ಪ್ರತಿ ಯೀ ಪ್ರತಿ ತಂಮ ಮನಿಗೆಯೆಂಬುದಾಗಿ ಬರದಂಥ ಪ್ರತಿಗೆ ಶುಭಮಸ್ತು

'ಗುರಿಕಾರ' ಎಂಬ ವೃತ್ತಿ ಇರುವುದನ್ನು ನೋಡಬಹುದು. ಇಲ್ಲಿ ಮದ್ದಗಿರಿಯ ಗುರಿಕಾರರಾದ ನಂಜಪ್ಪನವರ ಮಗನು ಗಿರಿಜಾಕಲ್ಯಾಣ ಎಂಬ ಗ್ರಂಥವನ್ನು ತನ್ನ ಮನೆಗೆ ಬರೆದುಕೊಂಡಿರುವಂತಹುದು. ಅಂದರೆ ಹವ್ಯಾಸಿ ಲಿಪಿಕಾರನನ್ನು ನೋಡಬಹುದು.

ಹೀಗೆ ಈ ಮೇಲಿನಂತೆ ಯಾವ ವೃತ್ತಿ ಇತ್ತೆಂಬುದು ಹಾಗೂ ಆ ವೃತ್ತಿಗಳ ಮೂಲಕ ಅವರು ಸಮಾಜದಲ್ಲಿ ಯಾವ ಸ್ಥಾನವನ್ನು ಪಡೆದುಕೊಂಡಿದ್ದರೆಂಬುದನ್ನು ತಿಳಿದುಕೊಳ್ಳಬಹುದಾಗಿದೆ.

**೩. ಸ್ಥಳನಾಮ :-**

ಸ್ಥಳನಾಮಗಳ ಮೂಲಕವಾಗಿ ಹಸ್ತಪ್ರತಿ ಕಾರ್ಯ ಯಾವ ಸ್ಥಳದಲ್ಲಿ ನಡೆಯಿತೆಂಬುದನ್ನು ತಿಳಿಯುವದಕ್ಕೆ ಸಹಾಯಕವಾಗುತ್ತದೆ. ಸ್ಥಳನಾಮವನ್ನು ಲಿಪಿಕಾರರ ನೆಲೆಯಲ್ಲಿ, ಧರ್ಮದ ನೆಲೆಯಲ್ಲಿ, ಭಾಷೆಯ ನೆಲೆಯಲ್ಲಿ, ಸಮಾಜದ ನೆಲೆಯಲ್ಲಿ, ಸಾಹಿತ್ಯದ ನೆಲೆಯಲಿ ಎಲ್ಲಾ ನೆಲೆಯಲ್ಲಿಯೂ ಸಹ ಅಧ್ಯಯನ ಮಾಡಬಹುದಾಗಿದೆ.

ಎಸ್.ಶಿವಣ್ಣನವರ 'ವೀರಶೈವ ಹಸ್ತಪ್ರತಿ ಪುಷ್ಪಿಕೆಗಳು' ಎಂಬ ಗ್ರಂಥದಲ್ಲಿ ಅನುಬಂಧ – ೫ ರಲ್ಲಿ ಸ್ಥಳಸೂಚಿಯನ್ನು ಉಲ್ಲೇಖಿಸಿರುವುದನ್ನು ನೋಡಬಹುದು.

"ಸುಮಾರು ೫೦೦ಕ್ಕೂ ಹೆಚ್ಚು ಸ್ಥಳನಾಮಗಳಿರುವುದನ್ನು ನೋಡಬಹುದು. ಇಲ್ಲಿ ಗ್ರಾಮ, ತಾಲ್ಲೂಕು, ಜಿಲ್ಲೆ, ರಾಜ್ಯ, ದೇಶ, ಎಲ್ಲವನ್ನು ಒಳಗೊಂಡಿರುವುದರ ಮೂಲಕವಾಗಿ ಎಲ್ಲಾ ಕಡೆಯಲ್ಲಿಯೂ ಈ ಹಸ್ತಪ್ರತಿ ಕಾರ್ಯ ತೊಡಗಿತ್ತೆಂಬುದನ್ನು ತಿಳಿಯಬಹುದಾಗಿದೆ."[೨೩]

- ಸಿದ್ಧಾರ್ಥಿ ಸಂವತ್ಸರದ ಮಾಘ ಶು ೧೦ಲೂ ಶ್ರೀಮತ್ತು ಆಲದಹಳ್ಳಿ ತಿಪ್ಪಣ್ಣನ ಮಗ ಗುರುಬಸವೈಯ್ಯಗೆ ಓದಿಸುವ ಶೇಷಯ್ಯನು ಬರೆದುಕೊಟ್ಟ ಕೋಡಗದ ಮಾರಯ್ಯನ ಚರಿತೆ. (ಕ್ರ.ಸಂ.೧೨೧೧)

ತಿಪ್ಪಣ್ಣನ ಮಗ ಗುರುಬಸಯ್ಯ ಎಂಬುವವನು ಆಲದಹಳ್ಳಿಗೆ ಸೇರಿದವನಾಗಿದ್ದನೆಂದು ತಿಳಿಯಬಹುದು. ಇವನಿಗೆ ಶೇಷಯ್ಯ ಎಂಬುವವನು ಕೋಡಗದ ಮಾರಯ್ಯನ ಚರಿತೆಯನ್ನು ಬರೆದು ಕೊಟ್ಟಿರುವುದನ್ನು ನೋಡಬಹುದು. ಆಲದಹಳ್ಳಿ – ಹಳ್ಳಿಯ ಮೂಲಕ ಸ್ಥಳನಾಮವನ್ನು ಗುರುತಿಸಬಹುದು.

- ಧಾರವಾಡ ಜಿಲ್ಲಾ ಸವಣೂರು ತುಕ್ಕಡಿ ಕೊಡ ತಾಲ್ಲೂಕ್ ಪೋ ಮಹಲು ಕುಫೆಲೂರು ಮಹುಜೆ ಅಂಗರಂಗಟ್ಟೆ ದಕ್ಷಿಣ ಮುಖದಲ್ಲಿರುವ ಗುಂಡಪ ಶರಣರ ವಂಶಾಬ್ಧಿಗೆ ಚಂದ್ರಮನಾದ ಚಂನಬಸಪ್ಪಗೆ ಹಡಪದಪ್ಪಂಣ ಶರಣರ ವರಿಷಾಬ್ದಿ ಚಂದ್ರಮನದ ಸೋಲಬಸಪ್ಪನು ಬರೆದ ದೀಪದ ಕಲಿ. (ಕ್ರ.ಸಂ.೧೯೪೨)

ಜಿಲ್ಲಾ, ತಾಲ್ಲೂಕು, ಊರಿನ ಹೆಸರಿನ ಮೂಲಕ ಸ್ಥಳನಾಮವನ್ನು ನೋಡಬಹುದು. ಧಾರವಾಡ ಜಿಲ್ಲೆ, ತುಕ್ಕಡಿ ಕೊಡ ತಾಲ್ಲೂಕ್, ಸವಣೂರು ಎಂಬ ಊರು ಹೀಗೆ ಮೂರು ಸ್ಥಳನಾಮವನ್ನು ನೋಡುವ ಮೂಲಕವಾಗಿ ಲಿಪಿಕಾರನು  ಯಾವ ಸ್ಥಳಕ್ಕೆ ಸೇರಿದ್ದನೆಂಬುದನ್ನು ಗುರುತಿಸಬಹುದಾಗಿದೆ.

* ನಕ್ಷತ್ರ ರಾತ್ರಿಗಳಿಗೆ ೮ರಲ್ಲಿ – – ಚೋರಬಸವ ಚಾರಿತ್ರ ಬರವಣಿಗೆ ಸಂಪೂರ್ಣಕ್ಕೆ – – – ಬೆಂಗಳೂರು ದೊಡ್ಡಪ್ಯಾಟೆ ಕೆಂಪನಂಜಪ್ಪನವರ ಕುಮಾರ ಚನ್ನಂಜಪ್ಪನವರ ಚೋರಬಸವಚರಿತ್ರೆ. (ಕ್ರ.ಸಂ.೧೭೫೮)

ಬೆಂಗಳೂರು ಜಿಲ್ಲೆ, ದೊಡ್ಡಪ್ಯಾಟೆ ಎಂಬವು ಸ್ಥಳನಾಮವಾಗಿ ಗುರುತಿಸಬಹುದಾಗಿದೆ. ಕೆಂಪನಂಜಪ್ಪ ಎಂಬುವವರು ದೊಡ್ಡಪ್ಯಾಟೆ ಎಂಬ ಸ್ಥಳಕ್ಕೆ ಸೇರಿರುವುದನ್ನ ನೋಡಬಹುದು.

- ಕ್ರಿ.ಶ.೧೯೪೯–೫೦ರಲ್ಲಿ ದಶಗ್ರಂಥವನ್ನು ಮದ್ರಾಸ್ ಪ್ರಾಚ್ಯ ಕೋಶಾಗಾರದಲಿ ಎನ್.ನಾರಯಣ ಅವರು ಪ್ರತಿ ಮಾಡಿದ್ದಾರೆ. (ಕ್ರ.ಸಂ.೧೮೬೩)

ಇಲ್ಲಿ ದಶಗ್ರಂಥ ಎಂಬ ಗ್ರಂಥವನ್ನು ಪ್ರತಿ ಮಾಡಿದ ಸ್ಥಳವನ್ನು ಸೂಚಿಸಲಾಗಿದೆ. ಮದ್ರಾಸ್ ರಾಜ್ಯವು ಸ್ಥಳನಾಮವನ್ನಾಗಿ ನೋಡಬಹುದು. ಈ ಸ್ಥಳದಲ್ಲಿ ಈ ಗ್ರಂಥವನ್ನು ನಾರಾಯಣ ಎಂಬುವವರು ಪ್ರತಿ ಮಾಡಿದ್ದನ್ನು ನೋಡಬಹುದು.

- ಪ್ರೀತ್ಯಾಸ್ಪದದಿಂದ ವೋದಬೇಕೆಂಬುದಾಗಿ ಬರಿಯ ಹೇಳಿದುದರಿಂದ ಮಹಂತಯ್ಯನವರು ಮಲನಾಡ ದೇಶದ ನಾಗರಾಳವೆಂಬ ಗ್ರಾಮದ ಯಿವರ ಹಸ್ತಕ್ಷರಗಳಿಂದ ಬರೆದ ಅಖಂಡೇಶ್ವರ ವಚನ.(ಕ್ರ.ಸಂ.೧೭೯)

ಮಲೆನಾಡ ದೇಶ, ನಾಗರಾಳ ಎಂಬುದು ಸ್ಥಳನಾಮವನ್ನು ಸೂಚಿಸುತ್ತಿದೆ. ಮಹಂತಯ್ಯನವರು ತಮ್ಮ ಹಸ್ತಾಕ್ಷರದಿಂದ ಮಲನಾಡ ದೇಶದಲ್ಲಿ ಬರುವ ಗ್ರಾಮವಾದ ನಾಗರಾಳ ಎಂಬಲ್ಲಿ ಅಖಂಡೇಶ್ವರ ವಚನವನ್ನು ಬರೆದಿರುವುದನ್ನು ನೋಡಬಹುದು.

ಇನ್ನು ಕೆಲವು ಸ್ಥಳನಾಮಗಳನ್ನು ಈ ಕೆಳಕಂಡಂತ ನೋಡಬಹುದು.

ಚಿಕ್ಕನಾಯಕನಹಳ್ಳಿ(ಕ್ರ.ಸಂ.೬೧೩), ಅರಸಿಕೆರೆ (ಕ್ರ.ಸಂ.೧೨೯೧), ಉಜ್ಜಯಿನಿ (ಕ್ರ.ಸಂ.೩೧೮), ಜವಳಿಯ ಪೇಟೆ (ಕ್ರ.ಸಂ.೫೧೩), ನಾಗರಾಳ (೧೨೫), ಕಳಲೆ (೧೩೭೯), ಗದಗ (ಕ್ರ.ಸಂ.೮೪೯), ಬಿಜಾಪುರ (೩೮೪), ಹಂಪಸಾಗರ (೧೮೧), ಹಿರಿಯೂರು (೧೬೭೯) ಹೀಗೆ ಸ್ಥಳನಾಮವು ಸಹ ಸಾಮಾಜಿಕತೆಯಲ್ಲಿ ಪ್ರಮುಖವಾಗಿದ್ದು ಇದರಿಂದಾಗಿ ವಿಭಿನ್ನ ನೆಲೆಯಲ್ಲಿ ಸಾಂಸ್ಕೃತಿಕ ಅಂಶಗಳನ್ನು ತಿಳಿಯಬಹುದಾಗಿದೆ.

ಒಟ್ಟಾರೆಯಾಗಿ ಸಾಮಾಜಿಕತೆಯಲ್ಲಿ ವೃತ್ತಿನಾಮಗಳೊಂದಿಗೆ, ಕುಲನಾಮ, ಸ್ಥಳನಾಮವನ್ನು ತಿಳಿಯುವುದರೊಂದಿಗೆ ಅಂತಹ ವ್ಯಕ್ತಿಗಳು ಯಾವ ವೃತ್ತಿಗಳಲ್ಲಿ ತೊಡಗಿ ತಮ್ಮ ಜೀವನವನ್ನು ನಡೆಸುತ್ತಿದ್ದರೆಂಬುದನ್ನು ತಿಳಿಯಬಹುದಾಗಿದೆ.

## ಉ) ಧಾರ್ಮಿಕತೆ :-

ಪ್ರಾಚೀನ ಭಾರತೀಯ ಸಾಹಿತ್ಯವೆಲ್ಲವೂ ಧಾರ್ಮಿಕ ಸಾಹಿತ್ಯದಿಂದಲೇ ರಚನೆಯಾಗಿರುವುದನ್ನು ನೋಡಬಹುದು. ಧರ್ಮ ಮತ್ತು ಸಾಹಿತ್ಯಕ್ಕೆ ಗಾಢವಾದ ಸಂಬಂಧವಿದ್ದಂತಹ ಕಾಲದಲ್ಲಿ ಹಸ್ತಪ್ರತಿಕಾರರು ತಾವು ನಂಬಿದ ದೇವರನ್ನು ಅನುಸರಿಸಿ ಧರ್ಮಕ್ಕೆ ಸಂಬಂಧಪಟ್ಟಂತಹ ಕೃತಿಗಳನ್ನು ಮಾತ್ರ ಪ್ರತಿ ಮಾಡುತ್ತಿದ್ದರು. ವೈದಿಕ ಹಸ್ತಪ್ರತಿಕಾರರು ವೈದಿಕ ಕೃತಿಗಳನ್ನು, ಜೈನ ಹಸ್ತಪ್ರತಿಕಾರರು ಜೈನಧರ್ಮದ ಕೃತಿಗಳನ್ನು ಪ್ರತಿಮಾಡಿದಂತೆ ಇಲ್ಲಿ ವೀರಶೈವ ಹಸ್ತಪ್ರತಿಕಾರರು ವೀರಶೈವ ಕೃತಿಗಳನ್ನು ಪ್ರತಿಮಾಡಿರುವುದನ್ನು ನೋಡಬಹುದು.

ಇಲ್ಲಿ ಲಿಪಿಕಾರರಲ್ಲಿ ಹವ್ಯಾಸಿ ಲಿಪಿಕಾರರು, ನಿಯುಕ್ತ ಲಿಪಿಕಾರರು ತಮ್ಮ ಧರ್ಮದ ಗ್ರಂಥಗಳನ್ನು ಪ್ರತಿ ಮಾಡುತ್ತಿದ್ದರೆಂಬುದನ್ನು ನೋಡಬಹುದು. ಆದರೆ ಈ ವೀರಶೈವ ಪುಷ್ಪಿಕೆಗಳು ಗ್ರಂಥದಲ್ಲಿ ವೃತ್ತಿಲಿಪಿಕಾರರು ಬೇರೆ ಧರ್ಮದ ಗ್ರಂಥವನ್ನು ರಚನೆ ಮಾಡಿರುವುದನ್ನು ಸಿಗುವುದಿಲ್ಲ. ಪ್ರತಿಯೊಬ್ಬ ಲಿಪಿಕಾರನೂ ಸಹ ತಾನೂ ಕೈಗೆತ್ತಿಕೊಂಡ ಗ್ರಂಥವನ್ನು ಪ್ರತಿಮಾಡುವ ಮಾಡಲು ಇಷ್ಟದೈವ, ಆರಾಧ್ಯದೈವ ಹಾಗೂ ಗುರುಗಳನ್ನು ಸ್ತುತಿಸುವುದನ್ನು ನೋಡಬಹುದು.

ಇಲ್ಲಿ ಕಾಲ, ಘಳಿಗೆ, ದಿವಸ ಹೀಗೆ ಅನೇಕ ಅಂಶ ದಾಖಲು ಮಾಡಿದ್ದಾರೆ. ಇದು ಧಾರ್ಮಿಕ ದೃಷ್ಟಿಯಿಂದ ನೀಡಿದುದ್ದಾದರೂ ಲಿಪಿಕಾರರು ಲಿಪಿ ಮಾಡಿದ ಕಾಲವನ್ನು ಕೊಡುವುದರಿಂದ ಆ ಕೃತಿಗಳ ಮತ್ತು ಪ್ರತಿಗಳ ಕಾಲವನ್ನು ಗೊತ್ತು ಮಾಡುವುದಕ್ಕೆ ಸಹಾಯವಾಗುತ್ತದೆ.

ಮಠಗಳು, ಬಸದಿಗಳ ಹೆಸರುಗಳು ಆ ಕಾಲದ ಧಾರ್ಮಿಕ ವಿಚಾರಗಳನ್ನು ತಿಳಿಯುವುದಕ್ಕೂ ಸಹಾಯಕವಾಗುತ್ತದೆ. ಇದರಿಂದ ಗ್ರಂಥರಚನೆ ಯಾವ ಸ್ಥಳದಲ್ಲಿ ಆಗುತ್ತಿತ್ತೆಂಬುದನ್ನು ತಿಳಿಯಬಹುದಾಗಿದೆ.

ಧಾರ್ಮಿಕ ಅಂಶಗಳ ಮೂಲಕವಾಗಿ ಸಾಂಸ್ಕೃತಿಕ ಮಹತ್ವವನ್ನು ತಿಳಿಯಲು '೩' ವಿಧಗಳಾಗಿ ವರ್ಗೀಕರಿಸಿಕೊಳ್ಳಲಾಗಿದೆ. ಅವುಗಳೆಂದರೆ

೧. ಕಾಲ, ಘಳಿಗೆ, ದಿವಸವನ್ನ ನೋಡಿ ಕೃತಿ ರಚನೆ ಮಾಡುವುದು

೨. ಇಷ್ಟದೈವ, ಆರಾಧ್ಯದೈವವನ್ನು ಸ್ತುತಿಸುವುದು

೩. ಮಠಗಳು, ಬಸದಿಗಳ ಹೆಸರಿನ ಮೂಲಕ ಧಾರ್ಮಿಕ ಅಂಶಗಳನ್ನು ಗುರುತಿಸಬಹುದು.

೧. ಕಾಲ, ಘಳಿಗೆ, ದಿವಸವನ್ನು ನೋಡಿ ಕೃತಿರಚನೆ :-

ಲಿಪಿಕಾರರು ಮೊದಲು ಗ್ರಂಥವನ್ನು ರಚನೆ ಮಾಡುವಾಗ ಆರಂಭ ಹಾಗೂ ಕೊನೆಯಲ್ಲಿ ಕಾಲ, ದಿವಸ, ಘಳಿಗೆಯನ್ನು ನೋಡಿ ಗ್ರಂಥವನ್ನು ರಚನೆ ಮಾಡುವುದನ್ನು ಈ ಹಸ್ತಪ್ರತಿ ಪುಷ್ಪಿಕೆಗಳ ಮೂಲಕವಾಗಿ ನೋಡಬಹುದು. ಇವು ಸಮಾಜದ ನಂಬಿಕೆಗಳಾಗಿದ್ದು, ಧಾರ್ಮಿಕತೆಯನ್ನ ಸ್ತುತಿಸುತ್ತವೆ. ಲಿಪಿಕಾರ್ಯ ಕೂಡ ಶುಭಕಾರ್ಯವಾಗಿದ್ದು ಇದರ ಹಿಂದೆ ಇದ್ದಂತಹ ಅವರ ಶ್ರದ್ಧೆಯನ್ನು ನೋಡಬಹುದು.

- ಶ್ರೀ ಶಕೆ ೧೬೮೫ ಸಂನ ೧೧೭೪ ತಾರಣನಾಮ ಸಂವತ್ಸರ ಆಶ್ವಿಜ ಶುದ್ದ ನವಮಿ ಬುಧವಾರ ಉತ್ತರಾಷಾಡ ನಕ್ಷತ್ರದಲ್ಲಿ ಮುಗಿದ ಅಖಂಡೇಶ್ವರ ವಚನ. (ಕ್ರ.ಸಂ.೧೧೪)

ನವಮಿ ತಿಂಗಳಲ್ಲಿ ಬುಧವಾರದ ದಿವಸದಲ್ಲಿ ಉತ್ತರಾಷಾಡ ನಕ್ಷತ್ರದಲ್ಲಿ ೧೬೮೫ರಿಂದ ೧೧೭೪ರವರೆಗೂ ಅಖಂಡೇಶ್ವರ ವಚನವನ್ನು ಬರೆದು ಮುಗಿಸಿದ್ದು.

- ಸಕೆ ೧೮೯ ಯಿಶ್ವರನಾಮ ಸಂವತ್ಸರದ ಆಷಾಡ ಭೌಳ ೧೨ ದ್ವಾದಸ ಚಂದ್ರವಾಸರದಲ್ಲಿ ಸಾಯಂಕಾಲಕ್ಕೆ ಸಂಪೂರ್ಣವಾದುದು ಅಖಂಡೇಶ್ವರ ವಚನ. (ಕ್ರ.ಸಂ.೧೨೫)

ವೀರಶೈವರ ದೈವವನ್ನು ಸೂಚಿಸುವಂತಹ ಈಶ್ವರನಾಮ ಸಂವತ್ಸರದಲ್ಲಿ ೧೮೯; ೧೨ ತಿಂಗಳಿನ ಚಂದ್ರದಿನದ ಸಾಯಂಕಾಲದಲ್ಲಿ ಅಖಂಡೇಶ್ವರ ವಚನವನ್ನು ಬರೆದು ಮುಗಿಸಿದ್ದು.

- ಶ್ರೀಜಯಾಭ್ಯುದಯ ಶಾಲಿವಾಹನ ಶಕವರುಷ ೧೭೮೫ ಹೇವಿಳಂಬಿನಾಮ ಸಂವತ್ಸರದ ಕಾರ್ತಿಕ ಶುದ್ದ ತ್ರಯೋದಶಿ ಸೋಮವಾರ ರೇವತಿ ನಕ್ಷತ್ರದಲ್ಲೂ ಅಷ್ಟಾವರಣದ ಚರಿತೆ ಮೊಡಿ ಸಮಾಪ್ತ. (ಕ್ರ.ಸಂ.೪೨೦)

ಅಷ್ಟಾವರಣದ ಚರಿತೆಯನ್ನ ೧೭೮೫ರಲ್ಲಿ ಕಾರ್ತಿಕ ಮಾಸದಲ್ಲಿ ಸೋಮವಾರ ರೇವತಿ ನಕ್ಷತ್ರದ ಘಳಿಗೆಯಲ್ಲಿ ಬರೆದು ಮುಗಿಸಿದು.

* ಸನ್ ೧೮೮೩ ಇಸ್ವಿ ಅಕ್ಟೋಬರ್ ೫ನೇ ಸ್ವಭಾನುಸಂವತ್ಸರದ ಆಶ್ವೀಜ ಸುದ್ದ ೪ ಶುಕ್ರವಾರ ಬೆಳವ ೮ ಘಂಟೆಯಲ್ಲಿ ಕೊಡಗೂಸು ಚರಿತ್ರೆ ಸಮಾಪ್ತ. (ಕ್ರಿ.ಸಂ.೧೨೦೨)

ಕೊಡಗೂಸು ಚರಿತ್ರೆ ಎಂಬ ಗ್ರಂಥವನ್ನು ೧೮೮೩ ಅಕ್ಟೋಬರ್ ೫ನೇ ತಾರೀಖಿನಂದು ೪ನೇ ಶುಕ್ರವಾರದ ಬೆಳಗ್ಗೆ ೮ ಘಂಟೆಯಲ್ಲಿ ಬರೆದು ಮುಗಿಸಿರುವುದನ್ನ ನೋಡಬಹುದು.

- ಶ್ರೀಮುಖನಾಮ ಸಂವತ್ಸರದ ಚೈತ್ರಮಾಸ ದವನದ ಹುಣ್ಣಿಮೆಯ ದ್ವಾದಶಿ ಸೋಮವಾರ ಉತ್ತರಾ ಭಾದ್ರಪದ ನಕ್ಷತ್ರದ ಚಂದ್ರ ಹೋರೆಯಲ್ಲಿ ಮುಗಿದ ತ್ರಿಪುರದಹನ ಸಾಂಗತ್ಯ. (ಕ್ರ.ಸಂ.೧೮೫೨)

ತ್ರಿಪುರದಹನ ಸಾಂಗತ್ಯವನ್ನು ಚೈತ್ರಮಾಸದಲ್ಲಿ ಶ್ರೇಷ್ಠವಾದ ೧೨ ತಿಂಗಳಿಗೆ ಬರುವ ಹುಣ್ಣಿಮೆಯಲ್ಲಿ ಚಂದ್ರನ ಬೆಳದಿಂಗಳಲ್ಲಿ ಮುಗಿಸಿದ್ದೆಂಬುದನ್ನು ಹೇಳಲಾಗಿದೆ.

- ಪ್ಲವಂಗನಾಮ ಪುಷ್ಯ ಮಧ್ಯ ೧೪ ಶುಕ್ರವಾರ ಪ್ರಥಮ ಸಾಯಂಕಾಲ ಅಮ್ಮನಭಾವಿ ಹಿರೇಮಠ ಸ್ಥಲ ಶುಭವ್ಯಾಳೆಯೊಳ್ ಸಂಪೂರ್ಣ. (ಕ್ರ.ಸಂ.೧೬೫೧)

ಅಮ್ಮಿನಭಾವಿ ಕಾವ್ಯ ಪುಷ್ಯಮಾಸದಲ್ಲಿ ೧೪ನೇ ತಾರೀಖಿನ ಶುಕ್ರವಾರ ಸಾಯಂಕಾಲದಲ್ಲಿ ಹಿರೇಮಠ ಎಂಬ ಸ್ಥಲದಲ್ಲಿ ರಚನೆಯಾಗಿರುವುದನ್ನು ಕಾಣಬಹುದು.

- ಸ್ವಸ್ತಿ ಶ್ರೀ ಜಯಾಭ್ಯುದಯ ಶಾಲಿವಾಹನ ಶಕವರ್ಷ ೧೭೬೮ ಪ್ರವರ್ತಮಾನೆ ಪ್ಲವಂಗ ಸಂಸರದ ಆಷಾಢ ಸುದ್ದ ೧೫ ಪೂರ್ವಾಷಾಢ ನಕ್ಷತ್ರ ಸೌಮ್ಯವಾಸರ ದಿನ ಘಳಿಗಿ ೧೩ರ ನಿರುದ್ದಕ್ಕೆ ಮುಗದ ಅಕ್ಷರಾಂಕನ ಗದ್ಯ. (ಕ್ರ.ಸಂ.೨೧೬೭)

ಅಕ್ಷರಾಂಕನ ಗದ್ಯವು ೧೭೬೮ರಲ್ಲಿ ಆಷಾಢ ತಿಂಗಳಲ್ಲಿ ೧೫ನೇ ತಾರೀಖಿನಂದು ಪೂರ್ವಾಷಾಢ ನಕ್ಷತ್ರದಲ್ಲಿ ಸೋಮವಾರ ೧೩ ಘಂಟೆಗೆ ಮುಗಿತ್ತೆಂಬುದನ್ನು ಹೇಳಲಾಗಿದೆ.

- ಶಾಲಿವಾಹನ ಶಕ ಸಂದುದು ೧೫೭೧ ಮರು ವರುಷ ಆಶ್ವೀಜ ಬಹುಳ ಅಷ್ಟಮಿ ಗುರುವಾರ ಧನಿಷ್ಠ ನಕ್ಷತ್ರದಲ್ಲಿ ಅಷ್ಟಾವರಣ ಸ್ತೋತ್ರದ ವಚನ ಬರದು ಸಮಾಪ್ತ (ಕ್ರ.ಸಂ.೨೧೮೪)

ಅಷ್ಟಾವರಣ ಸ್ತೋತ್ರದ ವಚನವು ೧೫೭೧ರಲ್ಲಿ ಅಷ್ಟಮಿ ಗುರುವಾರ ಧನಿಷ್ಠ ನಕ್ಷತ್ರದಲ್ಲಿ ಮುಕ್ತಾಯವಾದುದ್ದನ್ನು ಹೇಳಲಾಗಿದೆ.

- ಶ್ರೀವಿಜಯಾಭ್ಯುದಯ ಶಾಲಿವಾಹನ ಶಾಕಬ್ದ ೧೭೮೫ನೇ ಪ್ರವರ್ತಮಾನಕ್ಕೆ ಸಲ್ಲುವ ದುಂದುಬಿನಾಮ ಸಂವತ್ಸರ ದಕ್ಷಿಣಾಯನೆ ಹಿಮಂತ್ರುತೌ ಮಾರ್ಗಶಿರ ಮಾಸ ಶುಕ್ಲಪಕ್ಷ ತಿಥೌ ೨ ಭಾನುವಾರ ಜೇಷ್ಠ ನಕ್ಷತ್ರ ಮಧ್ಯಾನ್ಹ ಚಂನಬಸವಪುರಾಣ ಲಿಖ್ಯತೆ ಶುಭಮಸ್ತು. (ಕ್ರ.ಸಂ.೨೨೮೪)

ಚನ್ನಬಸವಪುರಾಣವು ೧೭೮೫ರಲ್ಲಿ ಮಾರ್ಗಶಿರ ಎಂಬ ತಿಂಗಳಿನಲ್ಲಿ ೨ನೇ ಭಾನುವಾರ ಜೇಷ್ಠ ನಕ್ಷತ್ರದಲ್ಲಿ ಮಧ್ಯಾನ್ಹ ಮುಕ್ತಾಯವಾಯಿತೆಂದು ಹೇಳಲಾಗಿದೆ.

ಹೀಗೆ ಗ್ರಂಥಗಳ ರಚನೆ ಮಾಡುವಾಗ ಆರಂಭ ಮತ್ತು ಕೊನೆಯನ್ನು ಶುಭದಿನದಂದು, ಕಾಲವನ್ನು ನೋಡಿ, ತಿಂಗಳೂ, ನಕ್ಷತ್ರವನ್ನು ನೋಡಿ ಆರಂಭಿಸಿ ಮತ್ತು ಮುಕ್ತಾಯ ಮಾಡ್ತಾ ಇರುವುದನ್ನು ಈ ಮೇಲಿನಂತೆ ನೋಡಬಹುದು. ಇದರಿಂದ ಕೃತಿಯ ಕಾಲವನ್ನು ತಿಳಿಯುವುದಕ್ಕೆ ಸಹಾಯಕವಾಗುತ್ತದೆ.

## ೨. ಇಷ್ಟದೈವ, ಆರಾಧ್ಯದೈವವನ್ನು ಸ್ತುತಿಸುವುದು :-

"ಜೈನಕೃತಿಗಳು ಶ್ರೀವಿತರಾಗಾಯನಮಃ ಸ್ತುತಿಯಿಂದ, ವೀರಶೈವ ಕೃತಿಗಳಲ್ಲಿ ಹೆಚ್ಚಾಗಿ 'ಶ್ರೀ ಗುರುಬಸವಲಿಂಗಾಯನಮಃ' ಎಂಬ ಸ್ತುತಿಯಿಂದ ಪ್ರಾರಂಭವಾಗುವುದನ್ನು ನೋಡಬಹುದು."[೨೪] ವೀರಶೈವ ಹಸ್ತಪ್ರತಿ ಪುಷ್ಪಿಕೆಗಳು ಎಂಬ ಗ್ರಂಥದಲ್ಲಿ ಹೆಚ್ಚಾಗಿ 'ಶ್ರೀಗುರುಬಸವಲಿಂಗಾಯನಮಃ' ಎಂದು ಪ್ರಾರಂಭವಾಗುವುದನ್ನು ಕಾಣಬಹುದು. ಅದನ್ನು ಎಸ್.ಶಿವಣ್ಣನವರು '*'(ನಕ್ಷತ್ರ) ಎಂಬ ಚಿಹ್ನೆಯ ಮೂಲಕ ಈ ಸ್ತುತಿಯನ್ನು ಗುರುತಿಸಿರುವುದನ್ನು ನೋಡಬಹುದು.

ಪ್ರತಿಯೊಬ್ಬ ಲಿಪಿಕಾರನೂ ಸಹ ಗ್ರಂಥಗಳನ್ನು ರಚನೆ ಮಾಡುವುದಕ್ಕೆ ಮುಂಚೆ ಇಷ್ಟದೈವ, ಆರಾಧ್ಯದೈವವನ್ನು ಸ್ತುತಿಸುವುದನ್ನು ನೋಡಬಹುದು. ಇದರಿಂದ ಲಿಪಿಕಾರರ ಪ್ರದೇಶವನ್ನು ಗುರುತಿಸಬಹುದಾಗಿದೆ. ಈ ವೀರಶೈವ ಹಸ್ತಪ್ರತಿ ಪುಷ್ಪಿಕೆಗಳಲ್ಲಿ ಹೆಚ್ಚಾಗಿ 'ಶ್ರೀಬಸವಲಿಂಗಾಯನಮಃ' ಎಂಬ ಸ್ತುತಿ ಇರುವುದನ್ನು ನೋಡಬಹುದು.

* ಶ್ರೀ ತೋಂಟದ ಸಿದ್ದೇಶ್ವರನ ಶ್ರೀ ಪಾದವೇ ಗತಿ,

ಶ್ರೀಗುರು ಗುಮ್ಮಳಾಪುರದ ಗುರುಶಾಂತಸ್ವಾಮಿಗಳ ಶ್ರೀ ಪಾದವೇ ಗತಿ. (ಕ್ರ.ಸಂ.೧೧೨)

ಇಲ್ಲಿ ಗುಮ್ಮಳಾಪುರ ಎಂಬ ಊರಿನಲ್ಲಿ ಗುರುಶಾಂತಸ್ವಾಮಿ ಎಂಬ ದೇವರು ಇರುವುದನ್ನು ನೋಡಬಹುದು.

* ಶ್ರೀ ಗುರುಮೂರ್ತಿ ಕೃಷ್ಣ ನರಹರಿ ಸೀತಾರಾಮನೇ ಗತಿ (ಕ್ರ.ಸಂ.೨೮೪)

ಇಲ್ಲಿ ವೀರಶೈವ ದೇವರಲ್ಲದೇ ವೈದಿಕ ದೇವರಾದ ಕೃಷ್ಣನನ್ನು, ವಿಷ್ಣುವನ್ನು, ಸೀತಾರಾಮನನ್ನು ಸ್ತುತಿಸುವುದನ್ನು ನೋಡಬಹುದು.

* ಶ್ರೀ ಗುರುಹಂಪೆಯ ವಿರೂಪಾಕ್ಷಲಿಂಗಾಯನಮಃ,

ಶ್ರೀ ಗುರುಬಸವ ದಂಡಾಯ ನಮಃ (ಕ್ರ.ಸಂ.೧೯೫)

ಇಲ್ಲಿ ಬಳಿಗಾರ ಚಿಕ್ಕಯ್ಯ ಕೊಮಾರ ಕಲ್ಯೆಯ್ಯ ಎಂಬ ಲಿಪಿಕಾರನಿದ್ದು ಇವನು ಹಂಪೆಗೆ ಸೇರಿದವನಾಗಿದ್ದನೆಂದು ಹಂಪೆಯ ವಿರೂಪಾಕ್ಷನನ್ನು ಸ್ತುತಿಸುವುದನ್ನು ನೋಡಬಹುದು.

* ದೊಡೇರಿ ವೀರಭದ್ರದೇವರ ಪಾದವೇ ಗತಿ (ಕ್ರ.ಸಂ.೩೭೩)

ಇಲ್ಲಿ ದೊಡೇರಿ ಎಂಬ ಊರಿನಲ್ಲಿ (ಗ್ರಾಮ) ವೀರಭದ್ರ ಎಂಬ ದೇವರಿದ್ದು ಅದನ್ನು ಸ್ತುತಿಸುವುದನ್ನು ನೋಡಬಹುದು.

* ಶ್ರೀ ಮಲ್ಲಿಕಾರ್ಜುನಾಯ ನಮಃ

ಶ್ರೀಸೊಪ್ಪಿ ಬಸವೇಶ್ವರಾಯ ನಮಃ

ಶ್ರೀ ಗುರು ಸೋಮನಾಥಾಯ ನಮಃ

ಶ್ರೀ ಷಣ್ಮುರಾಯ ನಮಃ

ಶ್ರೀ ಸಿವಾಯ ನಮಃ (ಕ್ರ.ಸಂ.೫೫೪-೧೭೮೩)

ಈ ಮೇಲಿನ ಎಲ್ಲಾ ಸ್ತುತಿಗಳು ಸಹ ವೀರಶೈವ ಸ್ತುತಿಗಳಾಗಿದ್ದು ಇಲ್ಲಿ ನಡಿವಿನಹಳ್ಳಿ ತೆಗನುರು ಗೌಡ ಸಿದ್ದಪ್ಪನ ಸುಪುತ್ರ ಸೋಮಣ್ಣ ಎಂಬುವವನು ಸ್ತುತಿಸಿರುವುದನ್ನ ನೋಡಬಹುದು.

* ಶ್ರೀಮದ್ವೀರಶೈವಾಚಾರ ವಿಸ್ತಾರ ವೀರಮಾಹೇಶ್ವರಾಗ್ರಣಿ ವಿರಕ್ತ ಶಿಖಾಮಣಿ ಗೊಳೂರ ಸಿದ್ದವೀರೇಶ್ವರದೇವರ ಶ್ರೀಪಾದಪದ್ಮಕ್ಕೆ ನಮಸ್ಕಾರವು (ಕ್ರ.ಸಂ.೬೦೦)

ಇಲ್ಲಿ ಗೂಳೂರು ಎಂಬಲ್ಲಿ ಸಿದ್ದವೀರೇಶ್ವರ ದೇವರಿತ್ತೆಂದು ಸೋಸಲೆ ರೇವಣಾರಾಧ್ಯ ಎಂಬುವವರು ಟೀಕು ಮಾಡಿರುವುದನ್ನ ನೋಡಬಹುದು.

* ನಿಡುಮಾಮಿಡಿ ಕರಿಬಸವಲಿಂಗಾಯ ನಮಃ (ಕ್ರ.ಸಂ.೬೧೨)

ಇಲ್ಲಿ ಚಿಕ್ಕನಾಯಕನ ಹಳ್ಳಿಯ ಸುಬ್ಬೈಯನವರ ಮಗ ದಾಸಿಯಪ್ಪ ಎಂಬ ಲಿಪಿಕಾರನಿದ್ದು ನಿಡುಮಾಮಿಡಿ ಎಂಬ ಊರಿನಲ್ಲಿ ಕರಿಬಸವಲಿಂಗಾಯ ಎಂಬ ದೇವರಿದ್ದು ಅದನ್ನು ಲಿಪಿಕಾರ ಸ್ತುತಿಸಿರುವುದನ್ನು ನೋಡಬಹುದು.

- ಶ್ರೀ ಸೀತಾಲಕ್ಷ್ಮಣ ಭರತ ಶತ್ರುಘ್ನ ಹನುಮತ್ಸಮೇತ ಶ್ರೀ ಪಟ್ಟಾಭಿರಾಮಚಂದ್ರ ಚರಣಾರವಿಂದಾರ್ಪಣಮಸ್ತು, ಶ್ರೀ ರುಕ್ಮಿಣೀ ಸತ್ಯಭಾಮಾ ಸಮೇತ ಶ್ರೀ ಗೋಪಾಲಕೃಷ್ಣಾರ್ಪಣಮಸ್ತು, ಶ್ರೀ ನಂಜುಂಡೇಶ್ವರಾರ್ಪಣಮಸ್ತು ಬಹುಧಾನ್ಯನಾಮ ಸಂವತ್ಸರದ ಮಾಘ ಬ ೫ ಭಾನುವಾರದಲ್ಲೂ ಅರಮನೆಗೆ ಮದ್ದಗಿರಿ

ಹನುಮಂತಯ್ಯನು ಬರದು ವಪ್ಪಿಸಿದ ಕೃಷ್ಣರಾಜ ವಿಲಾಸ (ಕ್ರ.ಸಂ.೧೧೧೦)

ಇಲ್ಲಿ ಶ್ರೀ ರಾಮಾಯಣದಲ್ಲಿ ಬರುವ ಪ್ರಮುಖ ಪಾತ್ರಗಳಾದ ರಾಮ, ಸೀತೆ, ಲಕ್ಷ್ಮಣ, ಭರತ, ಶತ್ರುಘ್ನರನ್ನು ಸ್ತುತಿಸುತ್ತಿರುವುದು. ನಂತರದಲ್ಲಿ ವಿಷ್ಣುವನ್ನು, ರುಕ್ಮೀಣಿ, ಸತ್ಯಭಾಮಾರನ್ನ, ನಂತರ ಶೈವಧರ್ಮದ ದೈವವಾದ ನಂಜುಂಡೇಶ್ವರನ್ನ, ಹನುಮಂತಯ್ಯ ಎಂಬ ಲಿಪಿಕಾರ ಸ್ತುತಿಸುತ್ತಿರುವುದನ್ನು ನೋಡಬಹುದು. ಇಲ್ಲಿ ಎಲ್ಲಾ ಧರ್ಮದ ದೇವರನ್ನು ಸ್ತುತಿಸಿ ಗ್ರಂಥ ರಚನೆ ಮಾಡುತ್ತಿರುವುದನ್ನ ನೋಡಬಹುದು.

* ಶ್ರೀ ವೆಂಕಟೇಶಾಯ ನಮಃ

ಶ್ರೀ ಲಕ್ಷ್ಮಿನಾರಾಯಣ ನಮಃ

ಶ್ರೀ ನಾರಸಿಂಹಾಯ ನಮಃ

ಶ್ರೀ ಸೀತಾರಾಮಾಯ ನಮಃ

ಇಲ್ಲಿ ಶ್ರೀ ವೆಂಕಟಪತಿಯ್ಯನ ಮಗ ವೆಂಕಟನಾರಾಯನು ಬರೆದ ಚೋರಕತೆ (ಕ್ರ.ಸಂ.೧೬೧೫)

ಇಲ್ಲಿ ವೈದಿಕ ಧರ್ಮದ ದೇವರುಗಳಾದ ವಿಷ್ಣುವನ್ನು ವಿವಿಧ ಹೆಸರಿನಿಂದ ಲಿಪಿಕಾರನಾದ ವೆಂಕಟನಾರಾಯನು ಸ್ತುತಿಸುತ್ತಿರುವುದನ್ನು ನೋಡಬಹುದು.

* ರಾಮಗಿರಿ ಕರಿಸಿದ್ದೇಶ್ವರ ಸ್ವಾಮಿಯವರ ಪಾದವೇ ಗತಿ
  ಶ್ರೀ ಗುರು ಸಿದ್ದರಾಮೇಶ್ವರ ದೇವರ ಪಾದವೇ ಗತಿ
  ಕುಪ್ಪೂರ ಮಲ್ಲಿಕಾರ್ಜುನಸ್ವಾಮಿಯವರ ಶ್ರೀಪಾದವೇ ಗತಿ
  ಎಳೆ ನಡುವಿನ ಸಿದ್ದರಾಮೇಶ್ವರದೇವರ ಪಾದವೇಗತಿ (ಕ್ರ.ಸಂ.೧೯೬೦)

ಇಲ್ಲಿ ರಾಮಗಿರಿ ಎಂಬ ಊರಿನಲ್ಲಿ ಕರಿಸಿದ್ದೇಶ್ವರ ಎಂಬ ದೇವರಿರುವುದನ್ನ, ಕುಪ್ಪೂರ ಎಂಬ ಊರಿನಲ್ಲಿ ಮಲ್ಲಿಕಾಜುನಸ್ವಾಮಿಯ ವಿಗ್ರಹ ಇರುವುದು, ಎಳೆ ನಡುವಿನ ಎಂಬ ಊರಿನಲ್ಲಿ ಸಿದ್ದರಾಮೇಶ್ವರ ಎಂಬ ದೇವರು ಇರುವುದನ್ನ ಎಳೆನಡುವು ಎಂಬ ಊರಿನಲ್ಲಿ ಸಿದ್ದರಾಮೇಶ್ವರ ಎಂಬ ದೇವರು ಇರುವುದನ್ನು ಈ ಸ್ತುತಿಗಳ ಮೂಲಕವಾಗಿ ತಿಳಿದುಕೊಳ್ಳಬಹುದಾಗಿದೆ.

* ಬನಶಂಕರಿ ಅಂಮ್ಮನವರ ಪಾದವೆ ಗತಿ
  ಉಡುಸಲಮ್ಮನ ಪಾದವೆ ಗತಿ
  ಕೆಂಚಮಾರಿಯ ಪಾದವೆ ಗತಿ
  ಬಯಲಬಸಪ್ಪನ ಪಾದವೆ ಗತಿ
  ಪೊಂನಗುಂದದ ರಂಗಸ್ವಾಮಿಯ ಪಾದವೆ ಗತಿ ಟಂಕಸಾಲೆ ಸಿದ್ಧಲಿಂಗಣ್ಣನು ಬರೆದ
  ದುರ್ಗಾವಿಜಯ ಪುಸ್ತಕ. (ಕ್ರ.ಸಂ.೧೯೬೧)

ಇಲ್ಲಿ ಟಂಕಸಾಲೆಯ ಸಿದ್ದಲಿಂಗ ಎಂಬ ಲಿಪಿಕಾರನು ದುರ್ಗಾವಿಜಯ ಎಂಬ ಪುಸ್ತಕವನ್ನ ರಚಿಸುವುದಕ್ಕೆ ಹೆಣ್ಣು ದೇವರ ವಿವಿಧ ಹೆಸರುಗಳನ್ನು ಬನಶಂಕರಿ, ಉಡುಸಲಮ್ಮ, ಕೆಂಚಮಾರಿ, ಬಯಲಬಸಪ್ಪ ಎಂದು ಕೊನೆಯಲ್ಲಿ ಇವರೆಲ್ಲರಿಗೂ ಒಡೆಯನಾದ ರಂಗಸ್ವಾಮಿಯನ್ನು ಸ್ತುತಿಸುವುದನ್ನು ನೋಡಬಹುದು. ಇಲ್ಲಿ ಗಂಡುದೇವರುಗಳ ಜೊತೆಗೆ ಹೆಣ್ಣು ದೇವತೆಗಳಿಗೂ ಸಹ ಪ್ರಾಮುಖ್ಯತೆ ಕೊಟ್ಟಿರುವುದನ್ನ ನೋಡಬಹುದು.

* ಶ್ರೀ ಗುರುಭ್ಯೊಂನಮಃ
  ಶ್ರೀ ಕಾಶಿ ವಿಶ್ವೇಶ್ವರಸ್ವಾಮಿ ಚರಣಾರವಿಂದವೇ ಗತಿ
  ಸೊಂನಲಾಪುರದ ಸಿದ್ದರಾಮೇಶ್ವರ ಸ್ವಾಮಿ ಚರಣಾರವಿಂದವೇ ಗತಿ
  ಶ್ರೀ ವುಜ್ಜನಿ ಮರುಳು ಸಿದ್ದೇಶ್ವರ ಸ್ವಾಮಿ ಚರಣಾರವಿಂದವೇ ಗತಿ ಮಿತಿ
  ಶ್ರೀ ಜಯನಾ ಃ ಶ್ರೀ ಶಾರದಾಂಬಾಯ ನಮಃ

ಈ ಮೇಲಿನ ಎಲ್ಲ ಸ್ತುತಿಗಳು ಯಾವ ಊರಿನಲ್ಲಿ ದೇವರುಗಳು ನೆಲೆಸಿದ್ದಾರೆಂಬುದನ್ನು ನೋಡಬಹುದು. ಇಲ್ಲಿ ಎಲ್ಲ ದೇವರುಗಳ ಸ್ತುತಿಗಳು ಸಹ ವೀರಶೈವ ಧರ್ಮದ ದೇವರುಗಳಾಗಿವೆ. ಇಲ್ಲಿ ಕಾಶಿಯಲ್ಲಿ ವಿಶ್ವೇಶ್ವರಸ್ವಾಮಿ ನೆಲೆಸಿದ್ದಾನೆಂದು, ಸೊನ್ನಲಾಪುರದಲ್ಲಿ ಸಿದ್ಧರಾಮೇಶ್ವರ ಸ್ವಾಮಿ ನೆಲೆಸಿದ್ದಾನೆಂದು, ಉಜ್ಜನಿಯಲ್ಲಿ ಮರುಳು ಸಿದ್ದೇಶ್ವರ ಸ್ವಾಮಿ ನೆಲೆಸಿದ್ದಾನೆಂದು ಇಲ್ಲಿ ಹೊಂಗಲಮರದ ಪುರಾಣಿಕ ಸಿದ್ದಬಸಯ್ಯನು ಚೆನ್ನಬಸವಪುರಾಣ ಎಂಬ ಗ್ರಂಥವನ್ನು ರಚಿಸುವುದಕ್ಕೆ ಗ್ರಂಥ ರಚನೆ ಮಾಡಿರುವುದನ್ನು ನೋಡಬಹುದು.

* ಗದುಗಿನ ವೀರನಾರಾಯಣನ ದಿವ್ಯ ಚರಣಾರವಿಂದವೇ ಗತಿಮತಿ
  ತೃಣಪುರದ ಭೀಮರಾಯರ ದಿವ್ಯ ಚರಣಾರವಿಂದವೇ ಗತಿಮತಿ
  ಚಿನ್ಮಣಿದುರ್ಗದ ಕಾಳಂಮನವರ ಪಾದವೇ ಗತಿ (ಕ್ರ.ಸಂ.೮೫೬)

ಇಲ್ಲಿ ಗದುಗಿನಲ್ಲಿ ಇರುವಂತಹ ವೀರನಾರಾಯಣನನ್ನು ಸ್ತುತಿಸುತ್ತಾ, ತೃಣಪುರದಲ್ಲಿರುವ ಭೀಮರಾಯನನ್ನು, ಚಿನ್ಮಣಿದುರ್ಗದ ಕಾಳಮ್ಮನನ್ನು ಲಿಪಿಕಾರನಾದ ರಾಮಪ್ಪನು ಕರಣಹಸಿಗೆ ಎಂಬ ಗ್ರಂಥವನ್ನು ರಚನೆ ಮಾಡುವುದಕ್ಕೆ ಸ್ತುತಿಸುತ್ತಿರುವುದನ್ನ ನೋಡಬಹುದು.

* ಶ್ರೀ ಗುರು ಉಜ್ಜನಿಯ ಶಾಂತೇಶ್ವರ ಪಾದವೆಗತಿ ಓ ನಮಃ ಶಿವಾಯಂ ಪಂಚಾಕ್ಷರಿಯಂ
  ಅಲ್ಲಮಪ್ರಭುದೇವರಂ ಪರಬ್ರಹ್ಮನಂ ಗೊಹೇಶ್ವರಂ ನಿಮ್ಮ ಪಾದಕ್ಕೆ ಶರಣು ಶರಣಾರ್ಥಿ
  ಶ್ರೀ ಪರುವಪ್ಪನ ಮಗ ಚೆನ್ನದ ಗುಡಿಶೆಟ್ಟಿ ತಮ್ಮ ಗುರುವಿನ ಪಾದದ ದಯದಿಂದ ಬರೆದ
  ಪುರಾತನ ವಚನ. (ಕ್ರ.ಸಂ.೬೩೯)

ಇಲ್ಲಿ ಲಿಪಿಕಾರನಾದ ಗುಡಿಶೆಟ್ಟಿ ಎಂಬುವವನು ತನ್ನ ಗುರುವಿನ ಭಕ್ತಿಯಿಂದ ಪುರಾತನ ವಚನವನ್ನು ರಚನೆ ಮಾಡುವುದಕ್ಕೆ ಉಜ್ಜನೀಯ ಶಾಂತೇಶ್ವರನನ್ನು, ಶಿವನನ್ನು, ಅಲ್ಲಮಪ್ರಭುದೇವರು ಹೇಗೆ ತನ್ನ ಆರಾಧ್ಯ ದೇವರಾದ ಗೊಹೇಶ್ವರನ್ನ ಆರಾಧಿಸುತ್ತಾನೋ ಹಾಗೆ ಈ ಲಿಪಿಕಾರ ಇವರನ್ನು ಆರಾಧಿಸುವ ಮೂಲಕವಾಗಿ ಸ್ತುತಿಸುವುದನ್ನು ನೋಡಬಹುದು.

ಈ ಉಲ್ಲೇಖಗಳ ಮೂಲಕ ದೇವರುಗಳ ಪ್ರಾದೇಶಿಕ ವಿಶಿಷ್ಟತೆಯನ್ನು ಹಾಗೂ ಯಾವ ಯಾವ ಪ್ರದೇಶದಲ್ಲಿ ಹಸ್ತಪ್ರತಿಗಳು ಪ್ರತಿಯಾಗಿವೆ ಎಂಬುದನ್ನು ಗಮನಿಸಬಹುದು. ಮುದ್ರಿತ, ಸಂಪಾದಿತ ಗ್ರಂಥಗಳಲ್ಲಿ ಇಂತಹ ಸ್ತುತಿಗಳನ್ನು ಪಠ್ಯದ ಭಾಗವಲ್ಲವೆಂದು ಬಿಡಲಾಗಿರುತ್ತದೆ. ಆದರೆ ಹಸ್ತಪ್ರತಿ ಅಧ್ಯಯನದಲ್ಲಿ ಇವು ಪಠ್ಯದ ಗ್ರಹಿಕೆಗೆ ಮುಖ್ಯ ಮಾಹಿತಿಗಳನ್ನು ಒದಗಿಸುತ್ತವೆ.

೩. ಮಠಗಳು, ಬಸದಿಗಳ ಹೆಸರಿನ ಮೂಲಕ ಧಾರ್ಮಿಕ ಅಂಶಗಳು :-

"ಹಸ್ತಪ್ರತಿಗಳನ್ನು ಪ್ರತಿಮಾಡಲು ದೇವಾಲಯ, ಚೈತ್ಯಾಲಯ ಮತ್ತು ಮಠಗಳು ಬಹುಮುಖ್ಯ ಕೇಂದ್ರಗಳಾಗಿದ್ದವು. ಪ್ರಾಚೀನ ಗ್ರಂಥಗಳ ಮೇಲಿನ ಭಕ್ತಿಯಿಂದಾಗಿ ಪ್ರತಿಕಾರರು ಪ್ರತಿ ಮಾಡುವುದನ್ನು ಪವಿತ್ರಕಾರ್ಯವೆಂದು ತಿಳಿದಿದ್ದರು. ಆದುದರಿಂದ ಪವಿತ್ರ ಸ್ಥಳದಲ್ಲಿ ದೈವಸನ್ನಿಧಿಯಲ್ಲಿ ಕುಳಿತು ಬರೆಯುತ್ತಿದ್ದರು"[೨೫]

ಈ ವೀರಶೈವ ಹಸ್ತಪ್ರತಿ ಪುಷ್ಪಿಕೆಗಳು ಎಂಬ ಗ್ರಂಥದಲ್ಲಿ ಲಿಪಿಕಾರರು ಗ್ರಂಥಗಳನ್ನು ಮಠಗಳು, ಬಸದಿಗಳು, ದೇವಾಲಯಗಳು ಹಾಗೂ ತಮ್ಮ ಗೃಹದಲ್ಲಿಯೇ ರಚನೆ ಮಾಡುವುದರ ಮೂಲಕವಾಗಿ ಧಾರ್ಮಿಕ ಅಂಶಗಳನ್ನು ನೋಡುವುದರೊಂದಿಗೆ ಸಾಂಸ್ಕೃತಿಕ ನೆಲೆಗಟ್ಟಿನಲ್ಲು ಸಹ ಅಧ್ಯಯನ ಮಾಡಬಹುದಾಗಿದೆ.

* ಸ್ವಸ್ತಿ ಸಮಸ್ತ ಪ್ರಶಸ್ತಿ ಸಹಿತ ಶಾಲಿವಾಹನ ಸಖದ ವರುಷ ೧೬೦೭ನೆಯ ಕ್ರೋಧನಾಮ ಸಂ.ದ ಶುಕ್ಲಪಕ್ಷದ ಆಸ್ವೀಜ ಶುದ್ಧ ಪೌರ್ನಮಿ ಬೃಹಸ್ಪತಿ ವಾರದಲ್ಲು ಕೊಡಗನೂರು ಮಠದಲ್ಲಿ ಅಖಿಳ ಜನ ದುರಿತವನದಾಹ ಸುಲೇಗಾವಿಯ ಮಹತ್ತೇಶ್ವರನ ಶ್ರೀ ಪಾದಕಮಲಭೃಂಗನಾಗಿ ಒಪ್ಪಲ್ಲಪಟ್ಟ ರುದ್ರಮುನಿದೇವರು ವಂಬತ್ತು ತಾಸುತ್ತಿನ ಅಮೃತಗಳಿಗೆಯಲ್ಲಿ ಬರದ ಕಥಾಸಾಗರ ಸಮಾಪ್ತ. (ಕ್ರ.ಸಂ.೫೪೭)

ಕಥಾಸಾಗರವನ್ನು ಬರೆದ ಕಾಲ, ದಿವಸವನ್ನು ಸೂಚಿಸುವುದರೊಂದಿಗೆ ಅದು ರಚನೆಯಾದ ಸ್ಥಳವನ್ನು ಸೂಚಿಸುವುದನ್ನು ನೋಡಬಹುದು. ಇದು ಕೊಡಗನೂರುಮಠದಲ್ಲಿ ರಚನೆಯಾಗಿರುವುದನ್ನು ನೋಡಬಹುದು.

- ಏಕೋತ್ತರ ಶತಸ್ಥಲವನ್ನ ಬನಹಟ್ಟಿ ಹಿರೇಮಠದಲ್ಲಿ ಮೇಲಮಾಳಿಗೆ ವಳಗ ಕೂತಕೊಂಡು ಬರದದ್ದು. (ಕ್ರ.ಸಂ.೭೩೧)

ಇಲ್ಲಿ ಬನಹಟ್ಟಿ ಎಂಬ ಊರಿನಲ್ಲಿ ಹಿರೇಮಠ ಎಂಬ ಮಠವಿರುದನ್ನು ಆ ಮಠದಲ್ಲಿ ಏಕೋತ್ತರ ಶತಸ್ಥಲ ಎಂಬ ಗ್ರಂಥ ರಚನೆಯಾಗಿರುವುದನ್ನು ನೋಡಬಹುದು.

- ವಿರೋಧಿನಾಮ ಸಂವತ್ಸರದ ಆಶ್ವೀಜ ಶು ೧೦ ಭೃಷ್ಪತಿವಾರದಲ್ಲಿ ಹಂಸಭಾವಿಯ ಕೆಂಪನಂಜಯ್ಯದೇವರ ಮಠದಲ್ಲಿ ಬರದ ಬಸವಲಿಂಗದೇವರು ಏಕೋತ್ತರ ಶತಸ್ಥಲ ವಚನ. (ಕ್ರ.ಸಂ.೭೬೬)

ಬಸವಲಿಂಗದೇವರು ಎಂಬುವವರು ಲಿಪಿಕಾರನಾಗಿದ್ದು ಕೆಂಪನಂಜಯ್ಯರವರಿಗೆ ಸೇರಿದ ಮಠದಲ್ಲಿ ಏಕೋತ್ತರ ಶತಸ್ಥಲ ವಚನವನ್ನು ಬರೆದಿರುವನ್ನು ನೋಡಬಹುದು

- ಬನಹಟ್ಟಿ ಮಠದಲ್ಲಿ ಆರಂಭ ಮಾಡಿದ್ದು ಪ್ರಾರಂಭದ ಮಿತಿ ಶಕ ೧೮೦೭ ಸಾಲದಾ ಪಾರ್ಥಿವನಾಮ ಸಂವತ್ಸರ ಆಷಾಢ ಪದ್ಯ ಮಂಗಳವಾರ ದಿವಸ ಹಗಲ ೫ ತಾಸು, ಸಮಾಪ್ತ ಆದುದು ಕರಣಹಸಿಗೆ. (ಕ್ರ.ಸಂ.೮೫೩)

ಕರಣಹಸಿಗೆಯನ್ನ ಬನಹಟ್ಟಿ ಎಂಬ ಮಠದಲ್ಲಿ ಆರಂಭಮಾಡಿದ್ದಾಗಿಯೂ ಹಾಗೂ ಮಂಗಳವಾರದ ದಿವಸ ಹಗಲಿನಲ್ಲಿ ೫ ಗಂಟೆಗಳ ಕಾಲ ಬರೆದು ಮುಕ್ತಾಯ ಮಾಡಿರುವುದನ್ನು ನೋಡಬಹುದು.

- ಶ್ರೀ ನೃಪ ಶಾಲಿವಾಹನ ಶಕೆ ೧೭೮೮ ಕ್ಷಯನಾಮ ಸಂವತ್ಸರ ಆಷಾಢ ಬಹಳ ೩ ಚಂದ್ರವಾರ ದಿವಸ ಸವದತ್ತಿ ಹೊಸಮಠದಲ್ಲಿ ಗಿರಿಜಾಕಲ್ಯಾಣ ಸಂಪೂರ್ಣವಾದುದು (ಕ್ರ.ಸಂ.೧೩೭೮)

ಗಿರಿಜಾಕಲ್ಯಾಣವನ್ನು ೧೭೮೮ರಲ್ಲಿ ೩ ಚಂದ್ರವಾರದ ದಿವಸ ಸವದತ್ತಿ ಎಂಬ ಊರಿನಲ್ಲಿರುವ ಹೊಸಮಠದಲ್ಲಿ ರಚನೆಯಾಗಿರುವುದನ್ನು ನೋಡಬಹುದು.

- ದುಮ್ಮಿಯ ವೀರೇಶ್ವರನ ಗುಡಿಯೊಳಗೆ ಮೂಡಮುಖವಾಗಿ ಕುಳಿತು ಬರದ ಗುರುಬೋಧಾಮೃತವನು ಓದಿಸುವ ಗಂಗಯ್ಯನು. (ಕ್ರ.ಸಂ.೧೪೩೦)

ಗಂಗಯ್ಯ ಎಂಬ ಲಿಪಿಕಾರನು ವೀರೇಶ್ವರನ ಗುಡಿ ಅಂದರೆ ಶೈವದೇವರ ದೇವಾಲಯದಲ್ಲಿ ಕುಳಿತು ಬರೆದಿರುವುದನ್ನು ನೋಡಬಹುದು.

- ಸಾಧಾರಣ ನಾಮ ಸಂವಚ್ಛರ ರುದ್ರ ಬಸಗಿಯ ಮಾರ್ಗಶಿರ ಮಾಸದ ತದಿಗಿಯ ಬೃಹಸ್ಪತಿವಾರ ವಂಬತ್ತನೆಯ ತಾಸದಲ್ಲಿ ಯಾದವಾಡದ ಸ್ಥಲದಲ್ಲಿ ಸಮಸ್ತ ಸದ್ವೀರ ಮಾಹೇಶ್ವರರ ಕರುಣ ಪ್ರಸ್ತಾದದಿಂದ ಚೆನ್ನಬಸವಪುರಾಣ ಸಮಾಪ್ತಿಯಾಯಿತು. (ಕ್ರ.ಸಂ.೧೬೬೪)

ಇಲ್ಲಿ ಚೆನ್ನಬಸವಪುರಾಣವನ್ನು ಮಾರ್ಗಶಿರ ತಿಂಗಳಿನಲ್ಲಿ ಒಂಬತ್ತು ಗಂಟೆಯಲ್ಲಿ ಯಾದವಾಡ ಎಂಬ ಊರಿನ ಸ್ಥಳದಲ್ಲಿ ಮಾಹೇಶ್ವರ ಎಂಬುವರ ಕೃಪೆಯಿಂದ ಸಮಾಪ್ತಿಯಾಯಿತೆಂದಿರುವುದನ್ನು ನೋಡಬಹುದು.

- ಸುಧಾನಗರದ ಸದಾಶಿವಪುರದ ಮಠದಲ್ಲಿ ಸಿದ್ದಲಿಂಗಪ್ಪನವರು ನಳಾಬ್ದಿದ ಜೇಷ್ಠ ಮಾಸದ ಬುಧವಾರದಿಪ್ಪತ್ತೆಂಟು ಘಟಿಕೆಯಲ್ಲಿ ಬರೆದು ಚಂನಬಸವೇಶನ ಸಮಾಪ್ತಿ (ಕ್ರ.ಸಂ.೧೭೦೨)

ಚನ್ನಬಸವೇಶ್ವರ ಪುರಾಣವನ್ನು ಸುಧಾನಗರದಲ್ಲಿ ಸದಾಶಿವ ಎಂಬ ಪುರದ ಮಠದಲ್ಲಿ ಸಿದ್ದಲಿಂಗಪ್ಪ ಎಂಬ ಲಿಪಿಕಾರನು ಬುಧವಾರ ಇಪ್ಪತ್ತೆಂಟು ಗಂಟೆ ಅಂದರೆ ಎರಡು ದಿವಸಗಳ ಕಾಲ ಬರೆದಿದ್ದಾರೆ ಎಂಬುದನ್ನು ಇಲ್ಲಿ ನೋಡಬಹುದು.

- ಭಾವನಾಮ ಸಂವತ್ಸರದ ವೈಯಿಶಾಕ ಬಹುಳ ೩ ಶನಿವಾರ ಬಸವನಕೋಟೆ ಊರಂಮನ ಗುಡಿಯೊಳಗೆ ಮುಗಿದ ನನ್ನಯಗಳ ಚಾರಿತ್ರ್ಯ. (ಕ್ರ.ಸಂ.೨೦೦೨)

ನನ್ನಯ್ಯಗಳ ಚಾರಿತ್ರವನ್ನ ವೈಶಾಖ ಮಾಸದಲ್ಲಿ ಮೂರನೇ ಶನಿವಾರ ಬಸವನಕೋಟೆ ಎಂಬ ಊರಿನಲ್ಲಿ ಇರುವ ಊರದೇವತೆಯ ಗುಡಿ. ಅಂದರೆ ಇಲ್ಲಿ ಯಾವ ದೇವತೆ ಎಂಬುದನ್ನು ಹೆಸರಿಸಿಲ್ಲ ಹೆಣ್ಣು ದೇವರ ಗುಡಿಯೊಳಗೆ ರಚನೆಯಾಗಿರುವುದನ್ನು ನೋಡಬಹುದು.

- ನನ್ನಯ್ಯನ ಚಾರಿತ್ರವಾ [ಹ]ಡಗಲಿಯ ಭೀಮರಾಯನ ಮುಖಮಂಟಪದಲ್ಲಿ ಮುಗಿಯಿತ್ತು. (ಕ್ರ.ಸಂ.೨೦೧೧)

ನನ್ನಯ ಚಾರಿತ್ರ್ಯವು 'ಹ' ಎಂಬುದನ್ನು ಚೌಕಕಂಸದಲ್ಲಿ ಕೊಟ್ಟಿದ್ದಾರೆ. ಅದು ಕಟ್ಟಿನಲ್ಲಿ ಕೊಟ್ಟಿರುವುದನ್ನು ಅಂದರೆ ಸರಿಯಾದ ರೂಪವನ್ನು ಕೊಟ್ಟಿರುವುದನ್ನು ಸೂಚಿಸುತ್ತದೆ. ಹಡಗಲಿ ಎಂಬ ಊರಿನಲ್ಲಿ ಭೀಮರಾಯ ಎಂಬ ಹೆಸರಿನ ವ್ಯಕ್ತಿ ಇರಬಹುದು ಅಥವಾ ದೈವ ಇರಬಹುದು, ಈ ಭೀಮರಾಯನ ಎಂಬ ದೇವಾಲಯದ ಮುಖಮಂಟಪದಲ್ಲಿ ರಚನೆಯಾಗಿರುವುದನ್ನು ನೋಡಬಹುದು.

* ಪ್ರಮೋಧೂತ ಸಂ. ಕಾರ್ತಿಕ ಕೃಷ್ಣಪಕ್ಷ ಅಷ್ಟಮಿ ಸೋಮವಾರ ಪುಟ್ಟು ಬಸವಲಿಂಗದೇವರು ಸಹಪುರದ ಜುಟ್ಟಿನ "ಗಂಗಾಧರ ದೇವರ ಮಠದಲ್ಲಿ" ಅಲ್ಲಮಪ್ರಭು ಸ್ತೋತ್ರದ ಷಟ್ಕಾವ್ಯ ಬರೆದು ಮುಗಿಸಿದ್ದು. (ಕ್ರ.ಸಂ.೩೫೪)

ಅಲ್ಲಮಪ್ರಭು ಸ್ತೋತ್ರದ ಷಟ್ಕಾವ್ಯವನ್ನು, ಬಸವಲಿಂಗದೇವ ಎಂಬ ಲಿಪಿಕಾರ ಅಷ್ಟಮಿಯ ಸೋಮವಾರ ಜುಟ್ಟಿನ 'ಗಂಗಾಧರ ದೇವರ ಮಠ'ದಲ್ಲಿ ಅಂದರೆ ಈ ಮಠವು ವೀರಶೈವ ದೇವತ್ವವನ್ನು ಸೂಚಿಸುಂತಹುದು. ಇಲ್ಲಿ ರಚನೆಯಾಗಿರುವುದನ್ನು ನೋಡಬಹುದು.

- ಆಂಗಿರಸ ನಾಮ ಸಂ/ಮಿ/ಕಾರ್ತಿಕ ಸೌಮ್ಯವಾರಕ್ಕೆ ಸಂಸ್ಥಾನ ಸುರಪುರ ತಾಲ್ಲೂಕ್ ಸಮೇತ ಹಿರೇವಡಿಗೇರಿ ಮಠದಲ್ಲಿ ಹುತ್ತಿನಯ್ಯನು ಬರೆದ ಏಕೋತ್ತರ ಶತಸ್ಥಲ ವಚನ. (ಕ್ರ.ಸಂ.೭೭೫)

ಏಕೋತ್ತರ ಶತಸ್ಥಲ ವಚನವನ್ನು ಕಾರ್ತಿಕ ಮಾಸದಲ್ಲಿ ಸೋಮವಾರದಲ್ಲಿ ಸುರಪುರ ತಾಲ್ಲೂಕಿನಲ್ಲಿರುವ ಹಿರೆವಡಿಗೇರಿ ಎಂಬ ಮಠದಲ್ಲಿ ಹುತ್ತನಯ್ಯ ಎಂಬ ಲಿಪಿಕಾರನು ರಚನೆ ಮಾಡಿರುವುದನ್ನು ನೋಡಬಹುದು.

ಹೀಗೆ ಹಸ್ತಪ್ರತಿಗಳು ಮಠಗಳ ಚರಿತ್ರೆಯನ್ನು ರೂಪಿಸುವಲ್ಲಿಯೂ ಆಕರಗಳಾಗಬಲ್ಲವೆಂಬುದನ್ನು ನೋಡಬಹುದು. ಹೀಗೆ ಎಸ್.ಶಿವಣ್ಣನವರ 'ವೀರಶೈವ ಹಸ್ತಪ್ರತಿ ಪುಷ್ಪಿಕೆಗಳು' ಎಂಬ ಗ್ರಂಥದಲ್ಲಿ ಲಿಪಿಕಾರರು ಅನೇಕ ಗ್ರಂಥಗಳನ್ನು ಗುಡಿಯೊಳಗೆ, ಮಠಗಳಲ್ಲಿ, ಬಸದಿಗಳಲ್ಲಿ ರಚನೆ ಮಾಡುವ ಮೂಲಕ ಅಲ್ಲಿಯ ದೇವರುಗಳ ಬಗ್ಗೆ ತಿಳಿಯಬಹುದು ಹಾಗೂ ಇವರ ಗ್ರಂಥದಲ್ಲಿ '೮೦'ಕ್ಕೂ ಹೆಚ್ಚು ಮಠಗಳು ಇರುವುದನ್ನು ನೋಡಬಹುದು. ಮಠಗಳು ಗ್ರಾಮಗಳಲ್ಲಿ, ನಗರಗಳಲ್ಲಿ, ರಾಜ್ಯಗಳಲ್ಲಿ ಇರುವುದನ್ನು ನೋಡಬಹುದು. ಅದಕ್ಕೆ ಉದಾಹರಣೆಯಾಗಿ

೭. ಕಮಡೊಳ್ಳಿ ಹಾಗೂ ಕರಡಿಹಳ್ಳಿ ಎಂಬಲ್ಲಿ ಹಿರೇಮಠ ಇರುವುದನ್ನು

೮. ಬೆಂಗಳೂರಿನಲ್ಲಿ ಮೇಗಣಗವಿ ಮಠ ಇರುವುದನ್ನು

೯. ಧಾರವಾಡದಲ್ಲಿ ಮಂಗಳವಾರಪೇಟೆ ವಿರಕ್ತಮಠ ಇರುವುದನ್ನು

೧೦.ಕೆಂಗೇರಿ ಹೋಬಳಿಯಲ್ಲಿ ಚಿಕ್ಕನಹಳ್ಳಿಮಠ

೧೧. ದಾವಣಗೆರೆಯಲ್ಲಿ ಗಡದೈಯ್ಯನ ಮಠ

೧೨.ಉಜ್ಜನಿಯಲ್ಲಿ ಪಂಡಿತಾರಾಧ್ಯ ಮಠ

ಹೀಗೆ ಮಠಗಳ ಹೆಸರಿನ ಮೂಲಕವಾಗಿ ಇಂತಹ ಮಠಗಳಲ್ಲಿ ಹೆಚ್ಚಾಗಿ ಗ್ರಂಥ ರಚನಾ ಕಾರ್ಯ ನಡೆಯುತ್ತಿತ್ತೆಂಬುದನ್ನು ನೋಡಬಹುದು.

ಹೀಗೆ ಧಾರ್ಮಿಕತೆಯ ಮೂಲಕವಾಗಿ ಇಲ್ಲಿ ವೀರಶೈವಧರ್ಮ ಪ್ರಧಾನವಾಗಿದ್ದರೂ ಸಹ ಅನ್ಯಧರ್ಮಗಳಿಗೂ ಸಹ ಪ್ರಾಮುಖ್ಯತೆಯನ್ನು ನೀಡಿದ್ದಾರೆ ಎಂಬುದಕ್ಕೆ ಇಲ್ಲಿ ಅನ್ಯಧರ್ಮದ ದೇವರುಗಳನ್ನು ಸ್ತುತಿಸುವುದನ್ನು ನೋಡಬಹುದು. ಹಾಗೆಯೇ ಧರ್ಮದ ಮೂಲಕವಾಗಿ ಸಣ್ಣಪುಟ್ಟ ದೇವರುಗಳಿಗೂ ಸಹ ಇಲ್ಲಿ ಪ್ರಾಮುಖ್ಯತೆ ಕೊಟ್ಟಿರುವುದನ್ನು ನೋಡಬಹುದಾಗಿದೆ.

## ಊ) ಐತಿಹಾಸಿಕತೆ :-

ಇತಿಹಾಸದ ಆಕರವಾಗಿಯೂ ಸಹ ಸಾಂಸ್ಕೃತಿಕ ಅಂಶಗಳನ್ನು ನೋಡಬಹುದು. ಇಲ್ಲಿ ಹಸ್ತಪ್ರತಿಯು ಐತಿಹಾಸಿಕ ಮೌಲ್ಯವನ್ನು ಹೊಂದಿರುವಂತಹುದ್ದಾಗಿದೆ. "ಪ್ರಾಚೀನ ಕಾಲದಿಂದಲೂ ಸಹ ಕವಿಗಳು ತಮ್ಮ ಬರವಣಿಗೆಯನ್ನು ತಾಳೆಗರಿ, ಕಡತ, ಕಾಗದ ಮುಂತಾದ ಸಾಮಗ್ರಿಗಳನ್ನು ಉಪಯೋಗಿಸಿ ಬರೆಯುತ್ತಿದ್ದರು. ಇವುಗಳ ಮೂಲಕವಾಗಿ ನಾಮೆ, ಬಖೈರು, ಕೈಫಿಯತ್ತು, ಸನ್ನದು, ನಿರೂಪ ಮುಂತಾದ ಹಲವು ರೀತಿಯ ಹಸ್ತಪ್ರತಿಗಳು ದೊರೆಯುತ್ತಿವೆ. ಇವೆಲ್ಲವೂ ಸಹ ಒಂದು ರೀತಿಯಲ್ಲಿ ಐತಿಹಾಸಿಕ ಸಾಮಗ್ರಿಗಳನ್ನಾಗಿ ನೋಡಬಹುದು."[೨೬]

ಇತಿಹಾಸಕ್ಕೆ ಸಂಬಂಧಿಸಿದಂತೆ ಇದು ರಾಜರು, ಚಕ್ರವರ್ತಿಗಳು ಹಾಗೂ ಅವರ ಸಂಬಂಧಿಕರಿಗೆ ಸಂಬಂಧಪಟ್ಟದಾಗಿರುತ್ತದೆ. ಇದರಿಂದ ಅವರ ಕಾಲ ಅವರ ಗ್ರಂಥ ರಚನೆಯ ಬಗೆಗೆ ತಿಳಿದುಕೊಳ್ಳಬಹುದಾಗಿದೆ. ಹಾಗೂ ಶಾಸನಗಳು, ರಾಜಚರಿತ್ರೆಗಳು ಹಾಗೂ ಕೆಲವು ಸಾಹಿತ್ಯ ಕೃತಿಗಳಿಂದಲೂ ಸಹ ಒಂದು ನಾಡಿನ ಇತಿಹಾಸವನ್ನು ತಿಳಿದುಕೊಳ್ಳಬಹುದು. ಇಲ್ಲಿ ರಾಜರು, ಚಕ್ರವರ್ತಿಗಳು ಮಾತ್ರವೇ ಪ್ರಮುಖರಾಗದೇ ರಾಜರ ಮಾಂಡಲಿಕರು, ಸಾಮಂತರು, ಪಾಳೇಯಗಾರರು ಹಾಗೂ ಆಡಳಿತ ಅಧಿಕಾರಿಗಳನ್ನು ಸಹ ಹೆಸರಿಸಬಹುದಾಗಿದೆ.

ಉದಾ: ಕೃಷ್ಣದೇವರಾಯ ಇತಿಹಾಸಕ್ಕೆ ಸಂಬಂಧಿಸಿದಂತೆ 'ಕೃಷ್ಣದೇವರಾಯ ದಿನಚರಿ' ಎಂಬ ಕೈಫಿಯತ್ತಿನ ಮಾದರಿಯನ್ನು ನೋಡಬಹುದು.

* "ಹೈದರ್‌ನಾಮದ ಬರಹದಲ್ಲಿ ಹೈದರ್‌ನ ವಿಷಯಗಳು ಸಿಗುತ್ತವೆ.
* ರಾಜೇಂದ್ರನಾಮಾ ಎಂಬ ಬರಹದಲ್ಲಿ ಕೊಡಗಿನ ರಾಜರಿಗೆ ಸಂಬಂಧಿಸಿದ ಅನೇಕ ಸಂಗತಿಗಳನ್ನು ತಿಳಿದುಕೊಳ್ಳಬಹುದಾಗಿದೆ."[೨೭]
* ಈ ವೀರಶೈವ ಹಸ್ತಪ್ರತಿ ಪುಷ್ಪಿಕೆಗಳು ಎಂಬ ಗ್ರಂಥದಲ್ಲಿ ಇತಿಹಾಸಕ್ಕೆ ಪೂರಕವಾಗುವ ಮಾಹಿತಿಗಳಿರುವ ಪ್ರಕ್ರಿಯೆಗಳು ಕಂಡುಬಂದಿಲ್ಲ. ಪತ್ರರೂಪದಲ್ಲಿರುವ ಹಸ್ತಪ್ರತಿಗಳಾದ ಸನ್ನದು, ಶ್ರೀಮುಖ, ನಿರೂಪ ಇತ್ಯಾದಿಗಳಾಗಲಿ ಇತಿಹಾಸ ಸಂಗತಿಗಳನ್ನೇ ಹೇಳುವ ಬಖೈರು, ಕೈಫಿಯತ್ತು, ದಿನಚರಿಯಂತಹ ಹಸ್ತಪ್ರತಿಗಳಾಗಲೀ ಈ ಗ್ರಂಥದಲ್ಲಿ ಉಲ್ಲೇಖಗೊಂಡಿಲ್ಲ. ಆದರೂ ನಿರೂಪ, ದಳವಾಯಿ, ರಾಯಸ್ತ, ಸುಬೇದಾರ ಮುಂತಾದ ವೃತ್ತಿಯಲ್ಲಿದ್ದು ಹಸ್ತಪ್ರತಿಗಳನ್ನು ಪ್ರತಿ ಮಾಡಿರುವ ಮತ್ತು ಪ್ರತಿ ಮಾಡಿಸಿ ಕೊಡುಗೆಯಾಗಿ ನೀಡಿರುವ ಹಸ್ತಪ್ರತಿಗಳ ಉಲ್ಲೇಖಗಳಿವೆ. ಅವುಗಳನ್ನ ಈ ವಿಭಾಗದಲ್ಲಿ ನೀಡಲಾಗಿದೆ. ಇತಿಹಾಸದ ವಿವಿಧ ವೃತ್ತಿಗಳಲ್ಲಿ ತೊಡಗಿದ್ದ ವ್ಯಕ್ತಿಗಳು ಹಸ್ತಪ್ರತಿ ಕಾರ್ಯದಲ್ಲಿ ನಿರತರಾಗಿದ್ದರನ್ನು ನೋಡಬಹುದು.

ಈ ಐತಿಹಾಸಿಕ ಅಂಶಗಳನ್ನ '೩' ರೀತಿಯಲ್ಲಿ ವರ್ಗೀಕರಿಸಿಕೊಳ್ಳಲಾಗಿದೆ.

೧. ಇತಿಹಾಸ ವೃತ್ತಿಗಳಲ್ಲಿ ತೊಡಗಿದ ವ್ಯಕ್ತಿಗಳು

೨. ಆಡಳಿತ ವಿಭಾಗಗಳು

೩. ಐತಿಹಾಸಿಕ ದೈವಗಳು

ಹೀಗೆ ಕೆಲವು ಸಂಗತಿಗಳ ಮೂಲಕವಾಗಿ ಐತಿಹಾಸಿಕತೆಯ ಸಾಂಸ್ಕೃತಿಕ ಅಂಶಗಳನ್ನು ಅಧ್ಯಯನ ಮಾಡಬಹುದಾಗಿದೆ.

**೧. ಇತಿಹಾಸ ವೃತ್ತಿಗಳಲ್ಲಿ ತೊಡಗಿದ ವ್ಯಕ್ತಿಗಳು :-**

* ಸ್ವಸ್ತಿ ಸಮಸ್ತವಾದ ಶಕವರುಷಂ ೧೪೪೪ಕ್ಕೆ ಸಲ್ಲುವ ವ್ಯಯ ಸಂವತ್ಸರದ ಆಶ್ವಯುಜ ೭ ಮಿಯೂ  ಗುರುವಾರದ ದಿವಸದಲ್ಲಿ ಪದನು ೪೨೦೭ ಪದಕ್ಕಂ ಸಂಪೂರ್ನವಾಗಿ ವೊಡೆಯರು ಭಕ್ತರ  ಕೃಪೆಯಲಿ ನಿರೂಪದಿಂದ ಮಯಿಸೂರ ಶ್ರೀಗಿರಿದೇವನು ಸುಪುತ್ರನಾದ ಚೆಂನಬಸವಯ್ಯನು ಬರೆದ ಆರಾಧ್ಯ ಚರಿತ್ರೆ. (ಕ್ರ.ಸಂ.೫೧೨)

"ಆರಾಧ್ಯ ಚಾರಿತ್ರ್ಯವನ್ನು ಚೆನ್ನಬಸವಯ್ಯ ಎಂಬ ಲಿಪಿಕಾರನು ನಿರೂಪದಿಂದ ಅಂದರೆ ಆಜ್ಞಾನುಸಾರವಾಗಿ ಒಡೆಯರ ಭಕ್ತರ ಕೃಪೆಯಿಂದ ಗುರುವಾರದ ದಿನದಲ್ಲಿ ಬರೆದಿರುವುದನ್ನು ನೋಡಬಹುದು. ಇಲ್ಲಿ ನಿರೂಪದ ಮೂಲಕವಾಗಿ ಐತಿಹಾಸಿಕ ಅಂಶವನ್ನು ನೋಡಬಹುದಾಗಿದೆ."

- ಯೀಶ್ವರ ಸಂವತ್ಸರದ ಅಧಿಕ ಆಶ್ವೀಜ ಬ ೧೨ಲ್ಲೂ ಶ್ರೀಮತು ದೇವೈಯ್ಯನವರಿಗೆ ನಿರೂಪದ ಚಾವಡಿ ಶ್ಯಾನಭಾಗ ಚಂನಪ್ಪೈಯನನವರ ಮಗ ವುಪಾದ್ಯ ನಾರಣೈಯನು ಆಶೀರ್ವಾದವಂ ಮಾಡಿ ಬರಕೊಟ್ಟ ಕೈವಲ್ಯಪದ್ದತಿ. (ಕ್ರ.ಸಂ.೧೧೫೫)

"ಕೈವಲ್ಯ ಪದ್ದತಿಯನ್ನು ದೇವೈಯ್ಯ ಎಂಬುವವರಿಗೆ ಶ್ಯಾನುಭೋಗನ ಚನ್ನಪ್ಪನವರ ಮಗ ಉಪಾದ್ಯ ನಾರಣಯ್ಯನು ನಿರೂಪದಿಂದ ಆಶೀರ್ವಾದ ಮಾಡಿ ಬರೆದುಕೊಟ್ಟಿರುವುದನ್ನು" ನೋಡಬಹುದು.

- ಮಹಾಮಹತ್ತಿನೊಳಗಾದ ರಗಳೆಯದೇವರಿಗೆ ವಿಜಯಪುರದ ನಮಃ ಶಿವಾಯನ ಕಯ್ಯಲು ದನಗೂರ ದಳವಾಯಿ ಚಿಕಮಲ್ಲೆಯದೇವರು ಗಣಭಾಷ್ಯರತ್ನಮಾಲೆಯನ್ನು ಬರೆಸಿದರು. (ಕ್ರ.ಸಂ.೧೨೮೫)

ದಳವಾಯಿ ಎಂಬುವವರು ಸಹ ರಾಜರ ಆಶ್ರಯದಲ್ಲಿರುವ ಸೇನಾಧಿಪತಿಯಾಗಿದ್ದು ಇವರನ್ನ ಸಹ ಐತಿಹಾಸಿಕ ದೃಷ್ಟಿಯಿಂದ ನೋಡಬಹುದು. ರಾಜರಲ್ಲದೇ ಸೇನಾಧಿಪತಿಗಳು ಸಹ ಗ್ರಂಥವನ್ನು

ಲಿಪಿಕಾರರಿಂದ ಬರೆಸುವುದನ್ನ ನೋಡಬಹುದು. ಗಣಭಾಷ್ಯರತ್ನಮಾಲೆಯನ್ನ ದನಗೊರ ದಳವಾಯಿ ಎಂಬುವವನು ರಗಳೆಯ ದೇವರಿಗೆ ಬರೆಸಿರುವುದನ್ನ ನೋಡಬಹುದು.

* ಶಾಲಿವಾಹನ ಶಕ ೧೭೬೫ನೇ ಶೋಭಕೃತು ಸಂವತ್ಸರದ ಜೇಷ್ಠ ಬಹುಳ ೨ ಬುಧವಾರ ವಿಘಳಿಗೆ ೧೦ ೧೦ ಘಳಿಗೆಯಲ್ಲಿ ಕೋಡಿಹಳ್ಳಿ ಸ್ಥಳದ ದಳವಾಯಿ ಬೈಲಪ್ಪನವರ ಕುಮಾರನಾದ ಸಂಚವೈಯ್ಯನು ಕೋಡಿಹಳ್ಳಿ ಸ್ಥಳದ ಗವುಡರ ಅಚ್ಚೇಗೌಡರ ಕುಮಾರ ವೀರೆಗವುಡರಿಗೆ ಅತಿ ಪ್ರೀತಿಯಿಂದ ಬರೆದುಕೊಟ್ಟ ಚನ್ನಬಸವಪುರಾಣ. (ಕ್ರ.ಸಂ.೧೬೭೧)

"ದಳವಾಯಿ ಎಂಬುವವರು ಸಹ ಗ್ರಂಥವನ್ನ ಸ್ವತಹ ತಾವೇ ಬರೆದು ಅದನ್ನ ತನ್ನ ಪ್ರೀತಿ ಪಾತ್ರದವರಿಗೆ ದಾನ ಮಾಡುವುದನ್ನ ನೋಡಬಹುದು. ಕೋಡಿಹಳ್ಳಿ ಸ್ಥಳದ ದಳವಾಯಿ ಆದಂತಹ ಸಂಚವೈಯ್ಯನು ಅದೇ ಸ್ಥಳದ ಗೌಡರಿಗೆ ಅಂದರೆ ಅಚ್ಚೇಗೌಡರಿಗೆ ಪ್ರೀತಿಯಿಂದ ಚನ್ನಬಸವಪುರಾಣವನ್ನು ಬರೆದುಕೊಟ್ಟಿರುವುದನ್ನ" ನೋಡಬಹುದು.

- ಸುರನಗರಿಗೆ ಸಾಟಿಯೆನಿಪ ವ್ಯಾಪ್ತದ ಮರಕಂ – – – ವರಪುತ್ರನ ತನುಜ ಬರೆದ ಚೋರರ ಕೃತಿಯನು ಬರೆದಾತ ಹಂದಿಯೂರ ಸ್ಥಳದ ಶಾನುಭಾಗ---ಕ್ಕಂ-- ಸಿಂಹಾಸನಾಧೀಶ್ವರರಾದ ದಳವಾಯಿ ---ಕಂಪ--- ಕಯ್ಯ --- ಅರಸ --- ದ್ವೆಯ್ಯ --- ನವರ ಕುಮಾರ ಪುಟ್ಟನಂಜರಾಜಯ್ಯ ಅ --- ಬರದು ಕೊಟ್ಟ ಮಸ್ತಕ ಚಿತ್ರಶೇಕರ ಕಥೆ. (ಕ್ರ.ಸಂ.೧೬೨೫)

"ಈ ಕ್ರಮಸಂಖ್ಯೆಯಲ್ಲಿ ಅಪೂರ್ಣ ಮಾಹಿತಿಯನ್ನು ನೀಡಿರುವುದನ್ನ ನೋಡಬಹುದು. ಕೆಲವು ಹೆಸರುಗಳನ್ನ ಉಲ್ಲೇಖಿಸುವಲ್ಲಿ ಬಿಟ್ಟಿರುವುದನ್ನ ನೋಡಬಹುದು. ಇಲ್ಲಿ ದಳವಾಯಿಯ ಹೆಸರು ಅಪೂರ್ಣವಾಗಿದೆ. ಯಾವ ಉದ್ದೇಶಕ್ಕಾಗಿ ಬರೆದು ಕೊಡಲಾಗಿದೆ ಎಂಬುದನ್ನ ಸೂಚಿಸಿಲ್ಲ. ದಳವಾಯಿಗೆ ಹಂದಿಯೂರು ಸ್ಥಳದ ಶಾನುಭೋಗ ಎಂಬುವವನು ಚಿತ್ರಶೇಖರ ಕಥೆಯನ್ನು ಬರೆದುಕೊಟ್ಟಿರುವುದನ್ನು" ನೋಡಬಹುದು.

- ಭವನಾಮ ಸಂವತ್ಸರದ ಆಶ್ವಿಜ ೯ ತ್ರದಲ್ಲು ಕಾರ್ತಿಕ ಶುದ್ಧ ೫ ಸೋಮವಾರ ದಿನ ದೀಪದ ಕಲಿ ಕಾವ್ಯವನ್ನು ಕಾಗಕುರ್ತಿ ಗುಣಾರಿ ಚನ್ನವೀರೈಯ್ಯನನ ಕುಮಾರ ಅಗ್ರಜ ಜಂಬೈಯನ ತನುಜ ಶಿವಬಸಯ್ಯನು ಸುಬೇದಾರ ಬಸೆಸೆಟ್ಟಯಪ್ಪನವರಿಗೆ ಆಶೀರ್ವಾದ ಮಾಡಿ ಬರಕೊಟ್ಟ (ಕ್ರ.ಸಂ.೧೯೩೩)

ಸುಬೇದಾರ ಎಂಬುವವರು ಸೈನ್ಯದ ಒಬ್ಬ ಅಧಿಕಾರಿಯಾಗಿದ್ದು ಇವರಿಗೆ ಕಾಗಕುರ್ತಿ ಚನ್ನವೀರೈಯ್ಯನ ಕುಮಾರ ಅಂದರೆ ದೊಡ್ಡಮಗನಾದ ಜೆಂಬೈಯ್ಯನ ಮಗನಾದ ಶಿವಬಸಯ್ಯನು ಆಶೀರ್ವಾದ ಮಾಡಿ ದೀಪದ ಕಲಿ ಕಾವ್ಯವನ್ನು ಬರೆದುಕೊಟ್ಟಿರುವುದನ್ನ ನೋಡಬಹುದು.

- ಏಕೋತ್ತರ ಶತಸ್ಥಲ ಟೀಕೆ ಶ ೧೭೬೪ ಶುಭಕೃತು ಕಾರ್ತಿಕ ಶು ೭ ಬುಧವಾರ ನವನೀತಪುರದ ಪಟ್ಟಾಧ್ಯಕ್ಷ ಶ್ರೀಮರುಳುಸಿದ್ದಸ್ವಾಮಿಗಳವರ ಕರಕಮಲ ಸಂಜಾತ ಶ್ರೀಮದ್ ಘನಲಿಂಗಿ ಚಕ್ರವರ್ತಿ ಹರಿಯವ್ವನಹಳ್ಳಿ ಮಠದ ಶಾಂತಲಿಂಗದೇವರ ಗರ್ಭಕ್ಷೀರಾಂಬುದಿ ವರ್ಧನ ಚಂದ್ರೋಪಮಾನನಾದ ಗುರುಶಾಂತಯ್ಯ. (ಕ್ರ.ಸಂ.೭೧೧)

"ಘನಲಿಂಗಿ ಚಕ್ರವರ್ತಿ ಯಾರು ಅಂದರೆ ನವನೀತಪುರದ ಪಟ್ಟಾಧ್ಯಕ್ಷರಾಗಿದ್ದ ಮರುಳಸಿದ್ಧಸ್ವಾಮಿಗಳೊಂದಿಗೆ ಹುಟ್ಟಿದ ಹರಿಯವ್ವನಹಳ್ಳಿ ಮಠದ ಶಾಂತಲಿಂಗದೇವರ ಎಂಬುವರ ಒಡಲಲ್ಲಿ ಅಮೃತವೆಂಬ ಸಮುದ್ರದಲ್ಲಿ ಹುಟ್ಟಿ ಚಂದ್ರನಂತೆ ಪ್ರಕಾಶನಾದ ಗುರುಶಾಂತಯ್ಯ ಎಂಬುವನು ಬರೆದ ಏಕೋತ್ತರ ಶತಸ್ಥಲ ಟೀಕೆ"

ಇಂದಿನ ಪ್ರಸ್ತುತ ಸಂದರ್ಭದಲ್ಲೂ ಸಹ ತಮ್ಮ ವೃತ್ತಿಯಾಚೆ ಗ್ರಂಥ ಆಸಕ್ತಿಯನ್ನು ತೊಡಗಿಸಿ ಕೊಂಡವರನ್ನು ನೋಡಬಹುದು. ವೀರಪ್ಪಮೊಯಿಲಿ, ಎಂ.ಪಿ.ಪ್ರಕಾಶ್ ಲಾಯರ್‌ಗಳು.
ಹೀಗೆ ವೀರಶೈವ ಹಸ್ತಪ್ರತಿ ಪುಷ್ಪಿಕೆಗಳಲ್ಲಿ ಚಕ್ರವರ್ತಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಯಿಲ್ಲದೆ ದಳವಾಯಿ, ಸುಬೇದಾರ ಎಂಬುವವರು ಅವರ ಆಶ್ರಯವನ್ನ ಪಡೆದು ಕೊಂಡವರ ಬಗೆಗಿನ ಹೆಚ್ಚಿನ ಮಾಹಿತಿಯನ್ನು ಇಲ್ಲಿ ನೀಡಲಾಗಿದ್ದು, ಇವರುಗಳ ಮೂಲಕವಾಗಿಯೇ ಐತಿಹಾಸಿಕ ಅಂಶವನ್ನು ಗುರುತಿಸುವ ಪ್ರಯತ್ನವನ್ನು ಮಾಡಲಾಗಿದೆ.

## ೨. ಆಡಳಿತ ವಿಭಾಗಗಳು :-

ಇತಿಹಾಸಕ್ಕೆ ಸಂಬಂಧಿಸಿದಂತೆ ಆಡಳಿತ ಅಧಿಕಾರಿಗಳಲ್ಲದೆ ಅವರು ಆಳುತ್ತಿದ್ದಂತಹ ಆಡಳಿತ ವಿಭಾಗಗಳನ್ನು ಸಹ ಇಲ್ಲಿ ಸೇರಿಸಬಹುದಾಗಿದೆ.

ಆಡಳಿತ ವಿಭಾಗಗಳನ್ನ ಇಲಾಖಾ, ಕಸಬಾ, ಕಸಬೆ, ಜಿಲ್ಲಾ, ತಾಲ್ಲೂಕ್, ಪರಗಣಿ, ಮಾಗಣಿ, ಸಂಸ್ಥಾನ, ಹೋಬಳಿ ಎಂಬ ವಿಭಾಗಗಳನ್ನ ಆಳುತ್ತಿದ್ದರೆನುವುದನ್ನ ಸಹ ಇಲ್ಲಿ ನೋಡಬಹುದಾಗಿದೆ. ಇದಕ್ಕೆ ಸಂಬಂಧಿಸಿದಂತೆ ವೀರಶೈವ ಹಸ್ತಪ್ರತಿ ಪುಷ್ಪಿಕೆಗಳ ಎಂಬ ಗ್ರಂಥದಲ್ಲಿ ಈ ಎಲ್ಲ ಆಡಳಿತ ವಿಭಾಗಗಳನ್ನು ನೋಡಬಹುದಾಗಿದೆ.

- ಶಕ ೧೭೪೪ ಅಂಗಿರಸ ನಾಮ ಸಂ/ ಮಿ ಕಾರ್ತಿಕ ಸು॥೧೪॥ ಸೌಂಮ್ಯವಾರಕ್ಕೆ ಲೇಖನ ಸಮಾಪ್ತ "ಸಂಸ್ಥಾನ" ಸುರಪುರ ತಾಲ್ಲೂಕ್ ಸಮತ ಹಿರವಡಿಗೇರಿ ಮಠದ ಹುತ್ತನಯ್ಯನು ಬರೆದ ಏಕೋತ್ತರ ಶತಸ್ಥಲ ಸಮಾಪ್ತ. (ಕ್ರ.ಸಂ.೭೭೫)

'ಸಂಸ್ಥಾನ ಎಂಬುದು ದೇಶದ ಒಂದು ವಿಭಾಗವಾಗಿದ್ದು ಅಂದರೆ ಒಂದು ರಾಜ್ಯವಾಗಿ ಇಲ್ಲಿ ಗುರುತಿಸಬಹುದು. ಈ ರಾಜ್ಯದಲ್ಲಿ ಸುರಪುರ ಎಂಬ ತಾಲ್ಲೂಕು ಇದ್ದು ಅಲ್ಲೇ ಹಿರೆವಡಿಗೇರಿ ಎಂಬ ಮಠವಿರುವುದನ್ನ ಆ ಮಠದಲ್ಲಿ ಹುತ್ತಿನಯ್ಯ ಎಂಬುವವನು ಏಕೋತ್ತರ ಶತಸ್ಥಲವನ್ನ ಬರೆದಿರುವುದನ್ನ' ನೋಡಬಹುದು.

- ಬೆಂಗಳೂರು 'ತಾಲ್ಲೂಕ್' ಕೆಂಗೇರಿ 'ಹೋಬಳಿ' ಚಿಕ್ಕನಹಳ್ಳಿಮಠದ ಆರಾಧ್ಯ ಬಸವೈಯ್ಯನು ಗುರುಪುತ್ರರಾದ ತುರುವೆಕೆರೆ ಕೊಮಾರಪ್ಪನವರಿಗೆ ಬರೆದುಕೊಟ್ಟ ಅಖಂಡೇಶ್ವರ ವಚನ. (ಕ್ರ.ಸ.೧೨೮)

'ಹೋಬಳಿ ಎಂಬುದು ತಾಲ್ಲೂಕಿನ ಒಂದು ವಿಭಾಗವಾಗಿದೆ. ಬೆಂಗಳೂರು ಎಂಬ ತಾಲ್ಲೂಕಿನಲ್ಲಿ ಕೆಂಗೇರಿ ಎಂಬ ಹೋಬಳಿಯಿದ್ದು ಈ ಸ್ಥಳದಲ್ಲಿ ಕುಮಾರಪ್ಪನಿಗೆ ಆರಾಧ್ಯ ಬಸವಯ್ಯನು ಅಖಂಡೇಶ್ವರ ವಚನವನ್ನು ಬರೆದುಕೊಟ್ಟಿರುವುದನ್ನ ನೋಡಬಹುದು.

- ಅಖಂಡೇಶ್ವರ ವಚನ ಆರದೆಂಡೊಡೆ ಭಕ್ತಿ ಸಂಪ್ರದಾಯಿಕರಾದ ಕೃಷ್ಣಪ್ಪ ಬಿನ್ನ ಭೋಜಪ್ಪ ನಾಯಿಕ ಸಿದೊಂಗಿಮೊ/ಕುಳಲ್ಲಿ/ 'ಪರಗಣೆ' ಮುಧೋಳ । ಶಕೆ ೧೭೬೭ ಪ್ರಮಾದಿನಾಮ ಸಂವತ್ಸರ ಸನ್ ೧೨೮೦ ಫಸಲ್ಲಿ ಶ್ರಾವಣ ಶುದ್ಧ ೧೨ ಸೋಮವಾರ ಪ್ರಹರದೊಳಗೆ ಸಮಾಪ್ತಿ (ಕ್ರಸಂ.೧೧೯)

ಪರಗಣೆಯ ಮುಧೋಳ ಎಂಬ ಸ್ಥಳದಲ್ಲಿ ಕೃಷ್ಣಪ್ಪ ಭಿನ್ನ ಭೋಜಪ್ಪ ನಾಯಿಕ ಎಂಬುವವರು ಅಖಂಡೇಶ್ವರ ವಚನವನ್ನು ಬರೆದಿರುವುದನ್ನ ನೋಡಬಹುದು.

- ಧಾರವಾಡ ಜಿಲ್ಲಾ ಸವಣೂರು ತುಕ್ಕಡಿ ಕೋಡಿ 'ತಾಲ್ಲೂಕ್' ಪೈಕಿ ಮಹಲು ಕುಪ್ಪೆಲೂರು ಮಹುಜೆ ಅಂಗರಕಟ್ಟೆ ದಕ್ಷಿಣ ಮುಖದಲ್ಲಿರುವ ಗುಂಡಪ ಶರಣರ ವಂಷಾಬ್ಧಿ ಚಂದ್ರಮನಾದ ಚಂನಬಸಫಗೇ ಹಡಪದಪ್ಪಂಣ ಶರಣರ ವಂಷಾಬ್ಧಿ ಚಂದ್ರಮನಾದ ಸೋಬಸಫನು ಹರಸಿ ಬರೆದುಕೊಟ್ಟ ದೀಪದ ಕಲಿಕಾವ್ಯ. (ಕ್ರ.ಸ.೯೪೨)

ಇಲ್ಲಿ 'ತಾಲ್ಲೂಕ್' ಎಂಬುದು ಒಂದು ಆಡಳಿತ ವಿಭಾಗವಾಗಿದ್ದು, ಇದನ್ನ ಆಡಳಿತದ ಅನುಕೂಲಕ್ಕಾಗಿ ಗುರುತಿಸಿದ ಜಿಲ್ಲೆಯ ಒಂದು ಭಾಗವಾಗಿದೆ. ಇಲ್ಲಿ ಧಾರವಾಡ ಎಂಬ ಜಿಲ್ಲೆಯಲ್ಲಿ ಸವಣೂರು ಎಂಬ ತಾಲ್ಲೂಕ್ ಇರುವುದನ್ನ ನೋಡಬಹುದು. ದೀಪದ ಕಲಿಯರ ಕಾವ್ಯವನ್ನು ಗುಂಡಪ್ಪ ಶರಣರ ವಂಶಕ್ಕೆ ಹಡಪದಪ್ಪ ಶರಣ ವಂಶಾಬ್ಧಿಯಾದ ಸೋಲಬಸಫನು ಬರೆದುಕೊಟ್ಟಿರುವುದನ್ನ ನೋಡಬಹುದು.

- ಖರ ಸಂ ಕಾರ್ತಿಕ ಶು ೧ ಸೋಮವಾರ ಕೊಟ್ಟೂರು ಮಠದ (ಕಸಬಾ ಬಳ್ಳಾರಿ) ಕಾಲಾಂತ ಮುರಿಗಳು ಹಿರಿಹಡಗಲಿ ಅತ್ತರ ಯಿರ್ವ ಮಾನಿಹಳ್ಳಿಯಲ್ಲಿ ಉಜ್ಜನಿಮಠದ ರುದ್ರಮುನೇಶ್ವರ ಬರೆದ ಕರಣಹಸಿಗೆ. (ಕ್ರ.ಸಂ.೮೫೪)

'ಕಸಬಾ' ಬಳ್ಳಾರಿ ಜಿಲ್ಲೆಗೆ ಸೇರಿದ್ದು ಕೊಟ್ಟೂರು ಮಠದ ಸ್ವಾಮಿಗಳಾದ ಕಾಲಾಂತ ಮರಿಗಳು, ಹಾಗೂ ಮಾನಿಹಳ್ಳಿಯಲ್ಲಿ ಉಜ್ಜನಿಮಠದ ರುದ್ರಮುನೇಶ್ವರರು ಕರಣಹಸಿಗೆ ಎಂಬುದನ್ನ ಬರೆದಿರುವುದನ್ನ ನೋಡಬಹುದು.

**೩. ಐತಿಹಾಸಿಕ ದೈವಗಳು :-**

"ವೀರಶೈವ ಹಸ್ತಪ್ರತಿ ಪುಷ್ಪಿಕೆಗಳ'ಲ್ಲಿ ಎಸ್.ಶಿವಣ್ಣನವರು ದೈವಗಳ ಬಗೆಗೆ ಅನುಬಂಧ-೬ರಲ್ಲಿ ಉಲ್ಲೇಖಿಸಿರುವುದನ್ನ ನೋಡಬಹುದು. ಈ ದೈವಗಳಲ್ಲಿ 'ಐತಿಹಾಸಿಕ ದೈವಗಳು' ಮತ್ತು 'ಪೌರಾಣಿಕ ದೈವಗಳೆಂದು' ಎರಡು ಬಗೆಯಲ್ಲಿ ನೋಡಬಹುದು. ಈ ಐತಿಹಾಸಿಕ ದೈವಗಳು ಸುಮಾರು ೨೦೦ಕ್ಕೂ ಹೆಚ್ಚಿರುವುದನ್ನ ಹಾಗೂ ಪೌರಾಣಿಕ ದೈವಗಳು ೧೦೦ಕ್ಕೂ ಹೆಚ್ಚು ಇರುವುದನ್ನ ನೋಡಬಹುದು."[೨೮]

**ಅ. ಐತಿಹಾಸಿಕ ದೈವಗಳು :-**

ಇತಿಹಾಸಕ್ಕೆ ಸಂಬಂಧಪಟ್ಟ ದೇವರುಗಳನ್ನ ಇಲ್ಲಿ ಉಲ್ಲೇಖಗಳ ಮೂಲಕವಾಗಿ ನೋಡಬಹುದಾಗಿದೆ. ಇಲ್ಲಿ ದೈವಗಳು ಇರುವಂತಹ ಸ್ಥಳವನ್ನು ಗುರುತಿಸಬಹುದಾಗಿದೆ.

- ಅಲ್ಲಮನೂರ ಬಸವೇಶ್ವರ (ಕ್ರ.ಸಂ.೯೫೩) > ಅಲ್ಲಮನೂರು ಎಂಬ ಊರಿನಲ್ಲಿ ಬಸವೇಶ್ವರ ಎಂಬ ದೈವವನ್ನು ನೋಡಬಹುದು.
- ಉಜ್ಜನಿಯ ಶಾಂತೇಶ್ವರ (ಕ್ರ.ಸಂ.೬೩೯), ಕಂಬಾಳ ಸಿದ್ದೇಶ್ವರ (ಕ್ರ.ಸಂ.೧೨೪೪), ಕೊಟ್ಟೂರ ಬಸವಲಿಂಗ(೯೮೫), ಗುಮ್ಮನೂರು ಚಂನಬಸವೇಶ್ವರ (೧೪೫೨), ಕೌದಿ ಚನವೀರೇಶ್ವರ (೧೪೫೦), ಗುರುಸಂಗಮೇಶ್ವರ (೯೪೩), ಗೋಸಲ ಸಿದ್ದಲಿಂಗ(೨೩೧೦), ಚಿಕ್ಕ ಬಸವೇಶ್ವರ (೫೭೦), ಜಡಿಸ್ವಾಮಿ (೨೦೦), ಮುರುಘಾ ಜಗದ್ಗುರು (೧೮೭೧), ಪಟ್ಟದ ಹಾಲಸ್ವಾಮಿ (೮೪೨), ರೇವಣಸಿದ್ದೇಶ್ವರ (೧೮೯)

ಹೀಗೆ ಈ ಮೇಲಿನಂತೆ ಐತಿಹಾಸಿಕ ದೈವಗಳನ್ನು ನೋಡಬಹುದು.

## ಆ) ಪೌರಾಣಿಕ ದೈವಗಳು :-

* ಉಮಾಮಹೇಶ್ವರ (೩೪೩), ಗಣೇಶ (೧೪೫), ಗಾಳಿಪೂಜೆಯ ವಿರೂಪಾಕ್ಷ(೧೯೦೧), ದೊಡ್ಡಬಸವೇಶ್ವರ, ಗುರುಸೋಮನಾಥ(೬೨೫), ನಂದೀಶ್ವರ (೧೧೮೫), ಭುಜಂಗೇಶ್ವರ (೩೨೬), ವೀರಭದ್ರ (೩೭೩), ಸದಾಶಿವಸಂಗಮೇಶ(೧೩೬೬) ಮುಂತಾದವು

ಹೀಗೆ ಪೌರಾಣಿಕ ಹಾಗೂ ಐತಿಹಾಸಿಕ ದೈವಗಳ ಮೂಲಕ ವೈವಿಧ್ಯಮಯವಾದ ದೈವಗಳು ಇರುವುದನ್ನ ಸಹ ಇಲ್ಲಿ ನೋಡಬಹುದು.

ಹೀಗೆ ಇತಿಹಾಸದ ಮೂಲಕವಾಗಿ ಸಾಂಸ್ಕೃತಿಕ ಅಂಶಗಳನ್ನ ನೋಡಬಹುದಾಗಿದೆ. ಇತಿಹಾಸಕ್ಕೆ ಸಂಬಂಧಿಸಿದಂತೆ ಎಸ್.ಶಿವಣ್ಣನವರ 'ವೀರಶೈವ ಹಸ್ತಪ್ರತಿ ಪುಷ್ಪಿಕೆಗಳು' ಎಂಬ ಗ್ರಂಥದಲ್ಲಿ ಆಡಳಿತಗಾರರೆಂಬುದನ್ನ ಹಾಗು ಯಾವ ಯಾವ ಸ್ಥಳದಲ್ಲಿ ತಮ್ಮ ಆಳ್ವಿಕೆಯನ್ನ ನಡೆಸುತ್ತಿದ್ದಾರೆಂಬುದನ್ನ ಹಾಗೂ ಅವರು ಗ್ರಂಥ ರಚನೆ ಮಾಡಿರುವುದನ್ನ ಹಾಗೂ ಬೇರೆ ಲಿಪಿಕಾರರಿಂದ ಬರೆಸಿಕೊಂಡಿರುವದನ್ನ ಹಾಗೂ ಐತಿಹಾಸಿಕ, ಪೌರಾಣಿಕ ದೈವಗಳನ್ನ ಇಲ್ಲಿ ನೋಡಬಹುದು. ಇಲ್ಲಿ ಪ್ರಮುಖವಾಗಿ ಆಡಳಿತಕ್ಕೆ ಸಂಬಂಧಿಸಿದಂತೆ ಅಧ್ಯಯನಗಳನ್ನು ಮಾಡಬಹುದಾಗಿದೆ.

## ಖ) ಸಾಹಿತ್ಯಕತೆ :-

ಸಾಹಿತ್ಯಕ ಅಧ್ಯಯನವಾಗಿ ಕೂಡ ಹಸ್ತಪ್ರತಿಯ ಅಧ್ಯಯನ ನಮಗೆ ಮುಖ್ಯವಾಗುತ್ತದೆ. ಸಾಹಿತ್ಯಕೃತಿಯ ಪ್ರಸಾರದ ಸ್ವರೂಪವನ್ನ ಈ ಹಸ್ತಪ್ರತಿ ಮೂಲಕ ಗ್ರಹಿಸಬಹುದಾಗಿದೆ. ಉದಾ: "ಕುಮಾರವ್ಯಾಸ ಭಾರತದ್ದೇ ಸಿಗುವಂಥ ನೂರಾರು ಹಸ್ತಪ್ರತಿಗಳ ಪ್ರಶಸ್ತಿಗಳನ್ನ ಪ್ರಾದೇಶಿಕವಾಗಿ ವಿಂಗಡನೆ ಮಾಡುತ್ತಾ ಹೋದಾಗ ಯಾವ ಯಾವ ಪ್ರದೇಶಗಳಲ್ಲಿ ಕುಮಾರವ್ಯಾಸನ ಓದುಗವರ್ಗ ಇತ್ತು ಅವರ ಮನೋಭಾವ ಎನಿತ್ತು"[೨೯] ಎಂಬುದನ್ನು ಸಾಹಿತ್ಯದ ಮೂಲಕವಾಗಿ ತಿಳಿದುಕೊಳ್ಳಬಹುದು. 'ವೀರಶೈವ ಹಸ್ತಪ್ರತಿ ಪುಷ್ಪಿಕೆ' ಎಂಬ ಗ್ರಂಥವು ಪ್ರಮುಖವಾಗಿ ಸಾಹಿತ್ಯ ಕೃತಿ ಎಂದೇ ಕರೆಯಬಹುದಾಗಿದೆ. ಈ ಕೃತಿಯಲ್ಲಿ ಎಸ್.ಶಿವಣ್ಣನವರು ೨೩೧೬ ಕೃತಿಗಳನ್ನು ಉಲ್ಲೇಖಿಸಿರುವುದನ್ನ ನೋಡಬಹುದು. ಈ ಕವಿ ಕೃತಿಗಳನ್ನ ಅಕಾರಾದಿ ರೂಪದಲ್ಲಿ ಕೊಟ್ಟಿರುವಂತಹದ್ದು. ಪ್ರಮುಖ ಕವಿಗಳನ್ನು, ಪ್ರಮುಖ ಕೃತಿಗಳನ್ನು ನೋಡಬಹುದು. ಇಲ್ಲಿ ಕೃತಿಗಳಲ್ಲಿ ಸಾಹಿತ್ಯ ಪ್ರಕಾರಗಳಾದ ವಚನ, ರಗಳೆ, ಚರಿತ್ರೆ, ಸಾಂಗತ್ಯ, ಲೌಕಿಕ, ಅಲೌಕಿಕ ಕೃತಿಗಳನ್ನು ಜಾನಪದ ಕೃತಿಗಳು ಹೀಗೆ ಹಲವು ಪ್ರಕಾರದ ಕೃತಿಗಳನ್ನ ಇವರ ಗ್ರಂಥದಲ್ಲಿ ನೋಡಬಹುದಾಗಿದೆ.

"ಎಸ್.ಶಿವಣ್ಣನವರ ಗ್ರಂಥದಲ್ಲಿ ಅನುಬಂಧ ಮೂರರಲ್ಲಿ ಕವಿಗಳ, ಕೃತಿಗಳ ಅಕಾರಾದಿಯಲ್ಲಿ ಸುಮಾರು ೨೧೦ ಕವಿಗಳನ್ನು ಹೆಸರಿಸಿರುವುದನ್ನು, ಸುಮಾರು ೩೬೦ ಕೃತಿಗಳನ್ನು ಪಟ್ಟಿಯಲ್ಲಿ ಹೆಸರಿಸಿರುವುದನ್ನು ನೋಡಬಹುದು."[೩೦]

ಅವುಗಳಲ್ಲಿ ಪ್ರಮುಖ ಕವಿಗಳ ಹೆಸರುಗಳನ್ನು ಇಲ್ಲಿ ನೋಡಬಹುದಾಗಿದೆ.

- ಅಕ್ಕಮಹಾದೇವಿ (ಪ್ರಮುಖವಾಗಿ ಮೊಟ್ಟಮೊದಲ ವಚನಕಾರ್ತಿಯನ್ನು ಹೆಸರಿಸಿರುವುದನ್ನ ನೋಡಬಹುದು)
- ಅಮುಗೆ ರಾಯಮ್ಮ, ಅಳಿಯ ಲಿಂಗರಾಜ, ಅಂಬಿಗರ ಚೌಡಯ್ಯ, ಆದಯ್ಯ, ಎಮ್ಮೆ ಬಸವ, ಕರಸ್ತಲದ ವೀರಣ್ಣೊಡೆಯ, ಕಪ್ಪಿನಂಜೇದೇವ, ಕಲ್ಯಾಣಮ್ಮ, ಕಳಲೆ ನಂಜರಾಜ, ಕಂಬಾಳ ಶಾಂತಮಲ್ಲೇಶ, ಕಾಳವ್ವೆ, ಕೆರೆಯ ಪದ್ಮರಸ, ಗುಮ್ಮಟಾರ್ಯ, ಕೋಳೂರ ಶಂಕರಕವಿ, ಕೊಂಡಗುಳಿ ಕೇಶಿರಾಜ, ಗುರುಬಸವ, ಘಟ್ಟವಾಳ ಮುದ್ದಯ್ಯ, ಘನಮಠ ಶಿವಯೋಗಿ, ಚನ್ನಬಸವ, ಚೇರಮಾಂಕ, ಜಕ್ಕಣ್ಣಯ್ಯ, ಜಟಾಶಂಕರದೇವ, ಜಾಯಗೊಂಡ ದೇಸಾಯಿ, ಜೇಡರದಾಸಿಮಯ್ಯ, ತೋಂಟದ ಸಿದ್ದಲಿಂಗ, ನಂಜಕವಿ, ದೀಪರಾಜ, ನೀಲಮ್ಮ, ಪರ್ವತೇಶ, ಪಾಲ್ಕುರಿಕೆ ಸೋಮನಾಥ, ಪ್ರಸನ್ನಮುನಿ, ಬಾಲಲೀಲಾ ಮಹಾಂತ

ಶಿವಯೋಗಿ, ಬೆನವೂರ ಚನ್ನಮಲ್ಲಯ್ಯ, ಮುರಿಗೆ ಶಾಂತವೀರ, ಮೇದಿನಿರಾಯ, ಶಂಕರದೇವ, ವೀರಣಾರ್ಯ, ದೇವರ ದಾಸಿಮಯ್ಯ, ಸಿದ್ದನಂಜೇಶ, ಹರಿಹರ, ಸಾಂಬಯ್ಯ,

ಹೀಗೆ ಮೊದಲಾದ ಪ್ರಮುಖ ಕವಿಗಳು, ವಚನಕಾರ್ತಿಯರನ್ನ ಹೆಸರಿಸಬಹುದು. ಇಲ್ಲಿ ಇವರ ಹೆಸರಿನೊಂದಿಗೆ ಕಾಲವನ್ನು ಸಹ ಕೊಟ್ಟಿರುವುದರಿಂದ ಅವರ ಕಾಲವನ್ನು ತಿಳಿದುಕೊಳ್ಳುವುದಕ್ಕೆ ಸಹಾಯಕವಾಗುತ್ತದೆ ಹಾಗೂ ಪ್ರಮುಖ ಕವಿಗಳಲ್ಲದೇ ಎಲ್ಲ ವರ್ಗದ ಕವಿಗಳನ್ನ ಹೆಸರಿಸುವುದು ಪ್ರಶಂಸನೀಯ ಎಂದು ಹೇಳಬಹುದು. ಶಿವಣ್ಣನವರು ಹೆಸರಿಸಿರುವ ಪ್ರಮುಖ ಕವಿಗಳ ಬಗ್ಗೆಯೂ ಹಾಗೂ ಇಂದು ಅವರ ಸಾಹಿತ್ಯಗಳ ಬಗ್ಗೆ ಪರಿಚಯಿಸುವ ಕಾರ್ಯವನ್ನು ಮಾಡಬೇಕಾಗಿದೆ.

ಇವರ ಸಂಪಾದನೆಯ ಕೃತಿಯಲ್ಲಿ ಕವಿಗಳು ಬರೆದಿರುವ ಕೃತಿಗಳ ಮೇಲೆ ಅವರು ಯಾವ ಕಾಲಕ್ಕೆ ಸೇರಿದ್ದರೆಂಬುದನ್ನ ಗುರುತಿಸಬಹುದಾಗಿದೆ. ಇಲ್ಲಿ ಸಾಹಿತ್ಯ ಪ್ರಕಾರದ ಮೂಲಕವಾಗಿ ಸಾಹಿತ್ಯ ರಚನೆಯಾಗಿರುವುದರಿಂದ ಕವಿಗಳ ಕಾಲವನ್ನು ಗುರುತಿಸುವುದಕ್ಕೆ ನೆರವಾಗುತ್ತದೆ. ಇಲ್ಲಿ ಪ್ರಮುಖವಾಗಿ ವಚನ, ರಗಳೆ, ಸಾಂಗತ್ಯ, ತಾರಾವಳಿ, ಟೀಕೆ, ಷಟ್ಪದಿ, ಚರಿತ್ರೆ, ಲೌಕಿಕ ಕೃತಿಗಳನ್ನು ನೋಡಬಹುದು.

### ೧. ವಚನಕ್ಕೆ ಸಂಬಂಧಿಸಿದ ಕೃತಿಗಳು :–

ಅಕ್ಕಗಳ ಕೊರವಂಜಿ ವಚನ, ಅಕ್ಕಮಹಾದೇವಿಗಳ ವಚನ, ಅಮುಗೆ ರಾಯಮ್ಮನ ವಚನ, ಅಂಬಿಗರ ಚೌಡಯ್ಯಗಳ ವಚನ, ಆದಯ್ಯಗಳ ವಚನ, ತಾಮಸ ನಿರಸನದ ವಚನ, ಕ್ರಿಯಾ ಸಮರಸದ ವಚನ, ಚೆನ್ನಬಸವೇಶ್ವರ ಸ್ತೋತ್ರದ ವಚನ, ಆಚರಣೆಯ ಸಂಬಂಧದ ವಚನ, ಅಖಂಡೇಶ್ವರ ವಚನ, ದಶಾವತಾರದ ವಚನ, ನೀಲಮ್ಮನ ವಚನ, ದಾಸಿಮಯ್ಯನ ವಚನ, ಘಟ್ಟಿವಾಳಯ್ಯನ ವಚನ, ಅನುಭಾವ ಷಟ್ಸ್ಥಲ ವಚನ ಇನ್ನು ಮುಂತಾದವುಗಳನ್ನು ನೋಡಬಹುದಾಗಿದೆ.

### ೨. ರಗಳೆ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಕೃತಿಗಳು :–

ಅರವತ್ತು ಮೂವರ ರಗಳೆ, ಅಸಂಖ್ಯಾತ ರಗಳೆ, ಚನ್ನಬಸವ ರಗಳೆ, ಜಯತು ಬಸವ ರಗಳೆ, ಅಲ್ಲಮಪ್ರಭುವಿನ ರಗಳೆ, ಇರಿಭಕ್ತರ ರಗಳೆ, ಏಕಾಂತರಾಮಿತಂದೆ ರಗಳೆ (ಕ್ರ.ಸಂ.೬೬೨), ಕಾರಿಕಾಲಮ್ಮೆಯರ ರಗಳೆ (ಕ್ರ.ಸಂ.೧೦೨೯), ಜಯರಗಳೆ (ಕ್ರ.ಸಂ.೧೮೦೦), ತಿರುನೀಲಕಂಠದ ರಗಳೆ (೧೮೪೩), ನಮಃಶಿವಾಯ ರಗಳೆ (೨೦೧೨), ನಂಬಿಯಣ್ಣನ ರಗಳೆ (೧೯೯೦)

ಹೀಗೆ ಸಾಹಿತ್ಯಕ್ಕೆ ಸಂಬಂಧಿಸಿದ ಕೃತಿಗಳನ್ನು ನೋಡಬಹುದು.

**೩. ಸಾಂಗತ್ಯ ಸಾಹಿತ್ಯಕ್ಕೆ ಸಂಬಂಧಿಸಿದ ಕೃತಿಗಳು :-**

ಅಮುಗಿದೇವ ಸಾಂಗತ್ಯ (೨೯೧), ಅರುವತ್ತು ಮೂವರ ಸಾಂಗತ್ಯ (೩೨೮), ಅಲ್ಲಮಪ್ರಭುರಾಯನ ಸಾಂಗತ್ಯ (೩೪೩-೪೫), ಕೋಡಗದ ಮಾರಯ್ಯನ ಸಾಂಗತ್ಯ (೧೨೧೨-೧೪), ಕೆಂಭಾವಿ ಭೋಗಣ್ಣನ ಸಾಂಗತ್ಯ (೭೯೪) ಹೀಗೆ ಸಾಂಗತ್ಯ ಕೃತಿಗಳನ್ನು ನೋಡಬಹುದು

**೪. ಚರಿತ್ರೆಗೆ ಸಂಬಂಧಿಸಿದ ಸಾಹಿತ್ಯ ಕೃತಿಗಳು :-**

ತಿರುನೀಲಕಂಠಯ್ಯನ ಚರಿತ್ರೆ (೨೩೦೦), ಅರವತ್ತು ಮೂವರ ಚಾರಿತ್ರ (೩೨೫-೨೬), ಚೋರಬಸವ ಚರಿತ್ರೆ (೧೭೫೭), ಅಷ್ಟಾವರಣ ಚರಿತ್ರೆ (೪೨೦), ಕಪೋತ ಚರಿತೆ (೮೩೫), ಉದ್ಭವದೇವ ಚರಿತೆ (೫೮೭), ಗುರುಭಕ್ತಾಂಡಾರಿ ಚರಿತೆ (೧೪೪೧), ಗುರುಲಿಂಗ ಜಂಗಮಚರಿತೆ (೧೫೧೮), ತ್ರಿಷಷ್ಠಿ ಪುರಾತನ ಚರಿತೆ (೧೮೬೦), ಕೊಡಗೂಸು ಚರಿತ್ರೆ (೧೨೦೨)
ಹೀಗೆ ವ್ಯಕ್ತಿಗಳ ವೈಯುಕ್ತಿಕ ಚರಿತ್ರೆಗೆ ಸಂಬಂಧಿಸಿದ ಸಾಹಿತ್ಯ ಕೃತಿಗಳನ್ನು ಈ ಮೇಲಿನಂತೆ ನೋಡಬಹುದಾಗಿದೆ.

**೫. ಷಟ್ಪದಿ ಸಾಹಿತ್ಯಕ್ಕೆ ಸಂಬಂಧಿಸಿದ ಕೃತಿಗಳು :-**

ಜ್ಞಾನೋದಯ ಷಟ್ಪದಿ (೧೪೦೮, ೨೯೯), ಅಲ್ಲಮಪ್ರಭು ಸ್ತೋತ್ರದ ಷಟ್ಪದಿ (೩೫೧), ಅಷ್ಟಾವರಣದ ವಾರ್ಧಕ ಷಟ್ಪದಿ (೩೭೬), ಆದಯ್ಯಗಳ ವಾರ್ಧಕ (೫೦೯), ಕೊಟ್ಟೂರು ಮುತ್ತಿಗಿ ವಾರ್ಧಿಕ (೧೨೦೧) ಉಳುವೆ ಚನ್ನಬಸವೇಶ್ವರನ ವಾರ್ಧಿಕ (೬೧೦)
**ಹೀಗೆ ಮುಂತಾದುವಗಳನ್ನು ನೋಡಬಹುದು.**

**೬. ತಾರಾವಳಿ ಸಾಹಿತ್ಯ ಕೃತಿಗಳು :-**

ಗಣಗಳ ತಾರಾವಳಿ (೧೨೬೪), ಕಟ್ಟಿಗೆ ತಾರಾವಳಿ (೩೯೬), ಅಲ್ಲಮಪ್ರಭುದೇವರ ನಟನ ತಾರಾವಳಿ (೩೩೪), ತಿಪ್ಪೇರುದ್ರನ ಪಲ್ಲಕ್ಕಿ ತಾರಾವಳಿ (೧೮೪೧), ನಿಡುಗಲ್ಲ ದುರ್ಗದ ಶಿಖರದ ಬಸವನ ತಾರಾವಳಿ (೨೦೬೬), ಜಂಗಮ ತಾರಾವಳಿ (೧೭೮೪)
ಹೀಗೆ ತಾರಾವಳಿಗೆ ಸಂಬಂಧಿಸಿದಂತೆ ಪ್ರಮುಖ ಸಾಹಿತ್ಯ ಕೃತಿಗಳನ್ನು ನೋಡಬಹುದು.

**೭. ಲೌಕಿಕ ಸಾಹಿತ್ಯ ಕೃತಿಗಳು :–**

ಕಕ್ಕೋಕಶಾಸ್ತ್ರ (೧೦೨೧), ಕಾಮಶಾಸ್ತ್ರ (೧೦೧೦–೨೦), ಕೋಕಶಾಸ್ತ್ರ (೧೦೨೫)

**೮. ಟೀಕಾ ಸಾಹಿತ್ಯ ಕೃತಿಗಳು :–**

ಅನಾಮಯಸ್ತೋತ್ರ ಟೀಕೆ (೧೬೩), ಅನುಭವ ಸೂತ್ರ ಟೀಕೆ (೨೬೦), ಕರಸ್ಥಲನ ನಾಗಲಿಂಗಯ್ಯನ ತ್ರಿವಿಧಿ ಟೀಕೆ, ಏಕೋತ್ತರ ಶತಸ್ಥಲ ಟೀಕೆ (೭೧೬), ತಾತ್ಪರ್ಯ ಸಂಗ್ರಹ ಟೀಕೆ (೨೫೭), ಅಕ್ಷರಾಂಕನ ಗದ್ಯ ಟೀಕೆ (೧೪೪೯), ಜಂಗಮಾಧಿಕ್ಯ ಸಂಗ್ರಹ ಟೀಕೆ (೧೭೮೩), ಆತ್ಮಲಿಂಗ ಪ್ರಣವ ಸಂಯೋಗ ಸ್ಥಲ ತ್ರಿವಿಧಿ ಟೀಕೆ (೪೯೩), ಕರಸ್ಥಲ ನಾಗಲಿಂಗದೇವರ ತ್ರಿವಿಧಿ ಟೀಕೆ (೯೪೯), ಜ್ಞಾನಚಿಂತಾರತ್ನ ಟೀಕೆ (೧೮೦೪), ಚೆನ್ನಬಸವ ರಗಳೆ ಟೀಕೆ (೧೮೦೪), ಅಂತಃಕರಣ ಪ್ರಕಾಶಿಕೆ ಟೀಕೆ (೧), ಅಕ್ಷರಮಾಲಿಕೆಯ ಟೀಕು (೭೧), ನಮಸ್ಕಾರ ಗದ್ಯ ಟೀಕೆ (೨೦೧೩)

ಹೀಗೆ ಟೀಕಾ ಸಾಹಿತ್ಯ ಕೃತಿಗಳನ್ನು ನೋಡಬಹುದು.

**೯. ಗದ್ಯ ಮತ್ತು ಪದ್ಯ ಸಾಹಿತ್ಯಕ್ಕೆ ಸಂಬಂಧಿಸಿದ ಕೃತಿಗಳು :–**

ಪದ್ಯ ಮತ್ತು ಗದ್ಯ ಸಾಹಿತ್ಯಕ್ಕೆ ಸಂಬಂಧಿಸಿದಂತೆ ವೀರಶೈವ ಹಸ್ತಪ್ರತಿ ಪುಷ್ಪಿಕೆಗಳಲ್ಲಿ ನೋಡಬಹುದು.

* ಅಕ್ಷರಾಂಕನ ಗದ್ಯ (ಕ್ರ.ಸಂ.೯೩), ಉದಾಹರಣ ಗದ್ಯ (ಕ್ರ.ಸಂ.೬೦೦)
* ನಾನಾರ್ಥ ಪದ್ಯ (ಕ್ರ.ಸಂ.೨೦೩೭), ಅಕ್ಷರಮಾಲಿಕಾ ಗದ್ಯ (೭೪)
* ನಮಸ್ಕಾರ ಗದ್ಯ (ಕ್ರ.ಸಂ.೨೦೧೩), ಅಮ್ಮವ್ವೆಯ ಗದ್ಯ (೨೮೭)

**೧೦. ಕಥೆ ಮತ್ತು ಕಾವ್ಯಕ್ಕೆ ಸಂಬಂಧಿಸಿದ ಸಾಹಿತ್ಯ ಕೃತಿಗಳು :–**

ಚಂದ್ರಾವಳಿ ಕತೆ (ಕ್ರ.ಸಂ.೧೫೭೫), ದೀಪದ ಕಲಿಯರ ಕಾವ್ಯ (ಕ್ರ.ಸಂ.೧೯೧೭), ಉಚಿತ ಕಥೆಗಳು (ಕ್ರ.ಸಂ.೫೪೪), ನನ್ನಯ್ಯನ ಕಾವ್ಯ (ಕ್ರ.ಸಂ.೨೦೦೫) ಕರಿಭಂಟನ ಕಥೆ, ಅಷ್ಟಾವರಣದ ಕಥೆ ಮುಂತಾದವುಗಳು

## ೧೧. ತ್ರಿಪದಿ ಹಾಗೂ ಶತಕಕ್ಕೆ ಸಂಬಂಧಿಸಿದ ಸಾಹಿತ್ಯ ಕೃತಿಗಳು :-

ಏಕೋದೇವ ಪ್ರತಿಷ್ಠಾ ತ್ರಿವಿಧಿ (೭೭೮), ಗಣನಾಮಸ್ತೋತ್ರದ ತ್ರಿಪದಿ (ಕ್ರ.ಸಂ.೧೨೬೯), ಅರ್ಧೇಂದುಮೌಳಿ ಶತಕ (ಕ್ರ.ಸಂ.೩೩೦), ಗುಮ್ಮಟಯ್ಯಗಳ ಶತಕ (ಕ್ರ.ಸಂ.೧೪೦೬), ಇಷ್ಟಲಿಂಗ ಶತಕ (ಕ್ರ.ಸ.೨೧೮೭), ಗುರುಮೂರ್ತಿ ಶಂಕರ ಶತಕ (ಕ್ರ.ಸಂ.೨೨೬೯), ಗಣಾಧೀಶ್ವರ ಶತಕ (೧೩೫೫), ಅರವತ್ತು ಮೂರು ಪುರಾತನರ ತ್ರಿವಿಧಿ (೩೦೩, ೩೧೪), ಚಂದ್ರಶಿಖಾವಸಂತ ಶತಕ (೧೫೭೦), ಗುರುಕರಣ ತ್ರಿವಿಧಿ (ಕ್ರ.ಸಂ.೭೪೩), ಐಪುರೇಶ್ವರ ಶತಕ (ಕ್ರ.ಸಂ.೭೮೭), ನಿಜಶರಣನ ತ್ರಿವಿಧಿ (೭೮೭), ನಿರಂಜನ ಶತಕ (೨೦೬೭), ಉಮಾಮಹೇಶ್ವರ ಶತಕ (೬೦೩), ಗುರುಸ್ತೋತ್ರದ ತ್ರಿವಿಧಿ (ಕ್ರ.ಸಂ.೧೫೩೨), ಅಷ್ಟಾವರ್ಣದ ತ್ರಿವಿಧಿ (೩೮೯)

ಹೀಗೆ ತ್ರಿವಿಧಿ ಹಾಗೂ ಶತಕಕ್ಕೆ ಸಾಹಿತ್ಯಕ್ಕೆ ಸಂಬಂಧಿಸಿದಂತೆ ವೀರಶೈವ ಹಸ್ತಪ್ರತಿ ಪುಷ್ಪಿಕೆಗಳಲ್ಲಿ ನೋಡಬಹುದಾಗಿದೆ.

ಹೀಗೆ ಸಾಹಿತ್ಯದ ಮೂಲಕವಾಗಿಯೇ ಎಲ್ಲ ಅಂಶಗಳನ್ನು ಸಹ ನೋಡಬಹುದಾಗಿದೆ. ಈ ಪುಷ್ಪಿಕೆಗಳು ಎಂಬ ಗ್ರಂಥವು ಕವಿಗಳು, ಕೃತಿಗಳನ್ನು ಸಂಗ್ರಹಿಸಿರುವ ಒಂದು ಸಾಹಿತ್ಯ ಕೃತಿ ಎಂದು ಸಹ ಕರೆಯಬಹುದು. ಈ ಸಾಹಿತ್ಯದಿಂದ ಒಟ್ಟಾರೆ ಕವಿಗಳ ಹಾಗೂ ಕೃತಿಗಳ ಬಗೆಗೆ ಹೆಚ್ಚಿನ ಮಾಹಿತಿಯನ್ನು ಪಡೆದುಕೊಳ್ಳುವುದರೊಂದಿಗೆ ಕೃತಿಗಳು ವಿವಿಧ ಪ್ರಕಾರಗಳನ್ನು ಒಳಗೊಂಡಂತೆ ರಚನೆಯಾಗಿರುವುದನ್ನ ಈ ಸಾಹಿತ್ಯಕ ಅಂಶಗಳ ಮೂಲಕವಾಗಿ ನೋಡಬಹುದಾಗಿದೆ.

## ಅಡಿ ಟಿಪ್ಪಣಿಗಳು

೧. ವೀರಶೈವ ಹಸ್ತಪ್ರತಿ ಪುಷ್ಪಿಕೆಗಳು : ಶ್ರೀ.ಎಸ್.ಶಿವಣ್ಣ, ವೀರಶೈವ ಅಧ್ಯಯನ ಸಂಸ್ಥೆ, ಗದಗ, ೧೯೯೪, ಪ್ರಕಾಶಕರ ನುಡಿ

೨. ಕನ್ನಡ ಗ್ರಂಥಸಂಪಾದನೆ : ಡಾ.ಡಿ.ಎಲ್.ನರಸಿಂಹಾಚಾರ್, ಶಾರದ ಮಂದಿರ, ಮೈಸೂರು, ಮೂರನೇ ಮುದ್ರಣ, ೧೯೭೬, ಪುಟ-೪೫

೩. ಹಸ್ತಪ್ರತಿ ಅಧ್ಯಯನ ಶಾಸ್ತ್ರ : ಡಾ.ನಾ.ಗೀತಾಚಾರ್ಯ, ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ, ಬೆಂಗಳೂರು, ೨೦೦೯, ಪುಟ-೫೨

೪. ಕನ್ನಡ ಗ್ರಂಥಸಂಪಾದನೆ : ಡಾ.ಡಿ.ಎಲ್.ನರಸಿಂಹಾಚಾರ್, ಶಾರದ ಮಂದಿರ, ಮೈಸೂರು, ಮೂರನೇ ಮುದ್ರಣ, ೧೯೭೬, ಪುಟ-೪೫

೫. ಅದೇ, ಪುಟ -೪೬

೬. ಅದೇ, ಪುಟ -೪೫

೭. ಅದೇ, ಪುಟ -೫೨

೮. ಕನ್ನಡ ಗ್ರಂಥ ಸಂಪಾದನೆ ಬಂಧ ವಿನ್ಯಾಸ : ಡಾ.ಎಸ್.ಎಸ್.ಅಂಗಡಿ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು, ೨೦೦೭, ಪುಟ-೧೧

೯. ಕನ್ನಡ ಹಸ್ತಪ್ರತಿಶಾಸ್ತ್ರ : ಡಾ.ಎಂ.ಎಂ.ಕಲಬುರ್ಗಿ, ಸ್ನೇಹ ಪ್ರಕಾಶನ, ಬೆಂಗಳೂರು, ೧೯೯೩, ಪುಟ-೨೦

೧೦. ಅದೇ, ಪುಟ -೧೯

೧೧. ಅದೇ, ಪುಟ - ೨೦

೧೨. ಅದೇ, ಪುಟ - ೩೦

೧೩. ಹಸ್ತಪ್ರತಿ ಅಧ್ಯಯನದ ಹೊಸ ಸಾಧ್ಯತೆಗಳು : ಡಾ.ವೀರೇಶ್ ಬಡಿಗೇರ, ಎಸ್.ಆರ್.ಚೆನ್ನವೀರಪ್ಪ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೩, ಪುಟ-೧೦೮

೧೪. ಹಸ್ತಪ್ರತಿ ಅಧ್ಯಯನ ಶಾಸ್ತ್ರ : ಡಾ.ನಾ.ಗೀತಾಚಾರ್ಯ, ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ, ಬೆಂಗಳೂರು, ೨೦೦೯, ಪುಟ-೨೭

೧೫. ಹಸ್ತಪ್ರತಿ ಅಧ್ಯಯನದ ಹೊಸ ಸಾಧ್ಯತೆಗಳು : ಡಾ.ವೀರೇಶ್ ಬಡಿಗೇರ, ಎಸ್.ಆರ್.ಚೆನ್ನವೀರಪ್ಪ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೩, ಪುಟ-೧೩೩

೧೬. ಮಣಿಹ : ಎಂ.ವಿ.ಸೀತಾರಾಮಯ್ಯ, ಡಾ.ಆರ್.ಶೇಷಶಾಸ್ತ್ರೀ, ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ, ಬೆಂಗಳೂರು, ೧೯೮೨, ಪುಟ-೨೩೮

೧೭. ಕನ್ನಡ ಗ್ರಂಥಸಂಪಾದನೆ : ಡಾ.ಡಿ.ಎಲ್.ನರಸಿಂಹಾಚಾರ್, ಶಾರದ ಮಂದಿರ, ಮೈಸೂರು, ಮೂರನೇ ಮುದ್ರಣ, ೧೯೭೬, ಪುಟ-೭೭

೧೮. ಹಸ್ತಪ್ರತಿ ವ್ಯಾಸಂಗ : ಡಾ.ಎಫ್.ಟಿ.ಹಳ್ಳೀಕೇರಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮, ಪುಟ-೨೧೨

೧೯. ಅದೇ, ಪುಟ -೨೧೨

೨೦. ಹಸ್ತಪ್ರತಿ ಅಧ್ಯಯನ ಶಾಸ್ತ್ರ : ಡಾ.ನಾ.ಗೀತಾಚಾರ್ಯ, ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ, ಬೆಂಗಳೂರು, ೨೦೦೯, ಪುಟ-೯

೨೧. ಅದೇ, ಪುಟ -೫೦

೨೨. ವೀರಶೈವ ಹಸ್ತಪ್ರತಿ ಪುಷ್ಪಿಕೆಗಳು : ಶ್ರೀ.ಎಸ್.ಶಿವಣ್ಣ, ವೀರಶೈವ ಅಧ್ಯಯನ ಸಂಸ್ಥೆ, ಗದಗ, ೧೯೯೪, ಪುಟ-೩೦೧ ರಿಂದ ೩೧೯

೨೩. ಅದೇ, ಪುಟ-೩೨೦ - ೩೨೭

೨೪. ಕನ್ನಡ ಹಸ್ತಪ್ರತಿಶಾಸ್ತ್ರ : ಡಾ.ಎಂ.ಎಂ.ಕಲಬುರ್ಗಿ, ಸ್ನೇಹ ಪ್ರಕಾಶನ, ಬೆಂಗಳೂರು, ೧೯೯೩, ಪುಟ-೩೮

೨೫. ಗ್ರಂಥ ಸಂಪಾದನೆ ಕೆಲವು ಅಧ್ಯಯನ : ವೈ.ಸಿ.ಭಾನುಮತಿ, ಕೇಶವ ಪ್ರಕಾಶನ, ಮೈಸೂರು, ೧೯೯೭, ಪುಟ-೪

೨೬. ಹಸ್ತಪ್ರತಿಶಾಸ್ತ್ರ ವಿವೇಚನೆ : ಡಾ.ನಾ.ಗೀತಾಚಾರ್ಯ, ಸ್ನೇಹನಿಧಿ ಬಳಗ, ಬೆಂಗಳೂರು, ಪುಟ-೪೨

೨೭. ಮಣಿಹ : ಎಂ.ವಿ.ಸೀತಾರಾಮಯ್ಯ, ಡಾ.ಆರ್.ಶೇಷಶಾಸ್ತ್ರೀ, ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ, ಬೆಂಗಳೂರು, ೧೯೮೨, ಪುಟ-೧೯

೨೮. ವೀರಶೈವ ಹಸ್ತಪ್ರತಿ ಪುಷ್ಪಿಕೆಗಳು : ಶ್ರೀ.ಎಸ್.ಶಿವಣ್ಣ, ವೀರಶೈವ ಅಧ್ಯಯನ ಸಂಸ್ಥೆ, ಗದಗ, ೧೯೯೪, ಪುಟ-೩೨೮-೩೩೫

೨೯. ಹಸ್ತಪ್ರತಿ ಅಧ್ಯಯನ ಶಾಸ್ತ್ರ : ಡಾ.ನಾ.ಗೀತಾಚಾರ್ಯ, ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ, ಬೆಂಗಳೂರು, ೨೦೦೯, ಪುಟ-೫೧

೩೦. ವೀರಶೈವ ಹಸ್ತಪ್ರತಿ ಪುಷ್ಪಿಕೆಗಳು : ಶ್ರೀ.ಎಸ್.ಶಿವಣ್ಣ, ವೀರಶೈವ ಅಧ್ಯಯನ ಸಂಸ್ಥೆ, ಗದಗ, ೧೯೯೪, ಪುಟ-೨೮೦-೩೦೦

# ಅಧ್ಯಾಯ – ೫

## ಸಮಾರೋಪ

ಎಸ್.ಶಿವಣ್ಣನವರ 'ವೀರಶೈವ ಹಸ್ತಪ್ರತಿ ಪುಷ್ಪಿಕೆಗಳು' ಎಂಬ ಗ್ರಂಥದ ಮೂಲಕ ಚರ್ಚಿಸಿರುವ ಸಂಗತಿಗಳನ್ನು ಹಾಗೂ ಮುಖ್ಯ ಅಂಶಗಳನ್ನು ಇಲ್ಲಿ ಸಂಗ್ರಹವಾಗಿ ಹೇಳಲಾಗಿದೆ.

ಈ ಪ್ರಬಂಧದಲ್ಲಿ ಪ್ರಮುಖವಾಗಿ ಐದು ಅಧ್ಯಾಯಗಳಾಗಿ ವಿಭಾಗಿಸಿಕೊಳ್ಳಲಾಗಿದ್ದು ಈ ಅಧ್ಯಾಯಗಳ ಮೂಲಕ ಹೆಚ್ಚಿನ ಅಂಶಗಳನ್ನು ತಿಳಿದುಕೊಳ್ಳುವುದಾಗಿದೆ. ಮೊದಲನೆ ಅಧ್ಯಾಯದಲ್ಲಿ ಈ ಪ್ರಬಂಧದಲ್ಲಿ ಒಟ್ಟಾರೆಯಾಗಿ ಚರ್ಚಿಸುವ ಅಂಶಗಳನ್ನು ಸಂಕ್ಷಿಪ್ತವಾಗಿ ಉದ್ದೇಶ, ಸ್ವರೂಪ, ವ್ಯಾಪ್ತಿಯಲ್ಲಿ ಹೇಳಲಾಗಿದೆ. ಉದ್ದೇಶದಲ್ಲಿ ಏಕೆ ಈ ವಿಷಯವನ್ನು ಆಯ್ಕೆ ಮಾಡಿಕೊಂಡಿದ್ದೇನೆ ಎಂಬ ಸಂಗತಿಯನ್ನು ವಿವರಿಸಲಾಗಿದೆ. ಸ್ವರೂಪದಲ್ಲಿ ಈ ಪ್ರಬಂಧಕ್ಕೆ ಸಂಬಂಧಿಸಿದಂತೆ ಅಧ್ಯಾಯಗಳ ವಿಂಗಡಣೆ ಹಾಗೂ ಕೆಲವು ಪ್ರಮುಖ ಅಂಶಗಳನ್ನು ಸಂಕ್ಷಿಪ್ತವಾಗಿ ವಿವರಿಸಲಾಗಿದೆ. ವ್ಯಾಪ್ತಿಯಲ್ಲಿ ಎಸ್.ಶಿವಣ್ಣನವರು ಅನೇಕ ಪ್ರಮುಖ ಗ್ರಂಥಗಳನ್ನು ಸಂಪಾದಿಸಿದ್ದರು ಇವರ ಸಂಪಾದನ ಕೃತಿಗಳಲ್ಲಿ ಒಂದಾದ 'ವೀರಶೈವ ಹಸ್ತಪ್ರತಿ ಪುಷ್ಪಿಕೆಗಳು' ಎಂಬ ಗ್ರಂಥವನ್ನು ಮಾತ್ರ ವಿಭಿನ್ನ ದೃಷ್ಟಿಕೋನಗಳಿಂದ ಚರ್ಚಿಸಿರುವುದನ್ನ ನೋಡಬಹುದಾಗಿದೆ.

ಎರಡನೆಯ ಅಧ್ಯಾಯದಲ್ಲಿ ಎಸ್.ಶಿವಣ್ಣನವರ ವಿದ್ಯಾಭ್ಯಾಸ, ಜೀವನದ ಬಗೆಗಿನ ವಿವರವನ್ನು ಅವರ ಕುಟುಂಬದವರು ನೀಡಿದ ಮಾಹಿತಿಯೊಂದಿಗೆ ವಿವರಿಸಲಾಗಿದೆ. ಅವರ ಹಸ್ತಪ್ರತಿ ಸಾಧನೆಯ ಬಗೆಗೆ ವಿವಿಧ ಗ್ರಂಥಗಳ ಅಧ್ಯಯನದ ಮೂಲಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

ಮೂರನೇಯ ಅಧ್ಯಾಯದಲ್ಲಿ ಪ್ರಮುಖವಾಗಿ ಹಸ್ತಪ್ರತಿಯ ವಿಷಯಕ್ಕೆ ಸಂಬಂಧಿಸಿದಂತೆ ಗ್ರಂಥಸಂಪಾದನೆ, ಹಸ್ತಪ್ರತಿಶಾಸ್ತ್ರ, ಹಸ್ತಪ್ರತಿ ಅಧ್ಯಯನ ಎಂದು ಮೂರು ವಿಭಾಗಗಳಾಗಿ ವರ್ಗೀಕರಿಸಿಕೊಳ್ಳಲಾಗಿದ್ದು, ಇದರ ಹುಟ್ಟು, ಬೆಳವಣಿಗೆಯನ್ನು ಅದರ ವಿಸ್ತಾರತೆಯನ್ನು ಗುರುತಿಸಿಕೊಳ್ಳಲಾಗಿದೆ ಹಾಗೂ ಹಸ್ತಪ್ರತಿ ಅಧ್ಯಯನದಲ್ಲಿ 'ಪುಷ್ಪಿಕೆಗಳು' ಪ್ರಮುಖವಾದದ್ದರಿಂದ ಪುಷ್ಪಿಕೆಗಳ ಅರ್ಥ, ವಿವರಣೆಯನ್ನು ಕೊಡಲಾಗಿದ್ದು ಈ ವೀರಶೈವ ಗ್ರಂಥದಲ್ಲಿ ಪುಷ್ಪಿಕೆಗಳ ಮಹತ್ವವನ್ನು ತಿಳಿಸಲಾಗಿದೆ.

ನಾಲ್ಕನೇಯ ಅಧ್ಯಾಯದಲ್ಲಿ ಏಳು ಪ್ರಮುಖ ಉಪ-ಅಧ್ಯಾಯಗಳಾಗಿ ವಿಂಗಡಿಸಿಕೊಳ್ಳಲಾಗಿದೆ. 'ವೀರಶೈವ ಹಸ್ತಪ್ರತಿ ಪುಷ್ಪಿಕೆಗಳು' ಗ್ರಂಥಕ್ಕೆ ಸಂಬಂಧಿಸಿದಂತೆ ಗ್ರಂಥದಾನ,

ಲಿಪಿಕಾರರು, ಭಾಷೆ, ಸಾಮಾಜಿಕತೆ, ಧಾರ್ಮಿಕತೆ, ಐತಿಹಾಸಿಕತೆ, ಸಾಹಿತ್ಯಕತೆ ಎಂಬ ಅಂಶಗಳ ಮೂಲಕವಾಗಿ ಸಾಂಸ್ಕೃತಿಕ ಮಹತ್ವವನ್ನು ಚರ್ಚಿಸಲಾಗಿದೆ.

ಗ್ರಂಥದಾನ ಎಂಬ ಉಪ-ಅಧ್ಯಾಯದಲ್ಲಿ ಗ್ರಂಥವನ್ನು ಯಾರು ಯಾರಿಗೆ ದಾನವಾಗಿ ಕೊಟ್ಟಿದ್ದಾರೆ ಹಾಗೂ ಯಾವ ಉದ್ದೇಶಕ್ಕಾಗಿ ಕೊಟ್ಟಿದ್ದಾರೆ ಎಂಬುದನ್ನು ಚರ್ಚಿಸಲಾಗಿದೆ. ಲಿಪಿಕಾರರು ಎಂಬ ಉಪ-ಅಧ್ಯಾಯದಲ್ಲಿ ಲಿಪಿಕಾರರ ಬಗೆಗೆ ಇವರಿಂದ ಹಸ್ತಪ್ರತಿ ಉಳಿದುಕೊಂಡು ಬಂದಿರುವುದನ್ನು ಹಾಗೂ ಹವ್ಯಾಸಿ ಲಿಪಿಕಾರರು, ನಿಯುಕ್ತ ಲಿಪಿಕಾರರು, ವೃತ್ತಿ ಲಿಪಿಕಾರರು ಎಂದು ವರ್ಗೀಕರಿಸಿಕೊಳ್ಳಲಾಗಿದ್ದು ಇವರ ಬಗೆಗಿನ ಮಹತ್ವವನ್ನು, ವಿವರಣೆಯನ್ನು ಚರ್ಚಿಸಲಾಗಿದೆ.

ಭಾಷೆ ಎಂಬ ಉಪ-ಅಧ್ಯಾಯದಲ್ಲಿ ಭಾಷೆ ಎಂಬುದು ಗ್ರಂಥದಲ್ಲಿ ಯಾವ ಬಗೆಯಲ್ಲಿತ್ತು, ಭಾಷೆಯ ಮೂಲಕ ಕಾಲವನ್ನು ಗುರುತಿಸುವಂತಹುದ್ದು. ಆಡುಭಾಷೆ ಪ್ರಮುಖವಾಗಿದ್ದು, ಭಾಷಿಕ ವ್ಯತ್ಯಾಸ ಎಂಬುದು ಒಂದು ಅಕ್ಷರಕ್ಕೆ ಬದಲಾಗಿ ಮತ್ತೊಂದು ಅಕ್ಷರ ಹೇಗ ಬಳಕೆಯಾಗಿದೆ ಎಂಬುದನ್ನು ಕೆಲವು ಉದಾಹರಣೆಗಳ ಮೂಲಕವಾಗಿ ಚರ್ಚಿಸಲಾಗಿದೆ.

ಸಾಮಾಜಿಕತೆ ಎಂಬ ಉಪ-ಅಧ್ಯಾಯದಲ್ಲಿ ವ್ಯಕ್ತಿನಾಮ, ಸ್ಥಳನಾಮ, ವೃತ್ತಿಗಳ ಮೂಲಕವಾಗಿ ಸಮಾಜದಲ್ಲಿರುವ ವ್ಯಕ್ತಿಗಳ ಸ್ಥಾನವನ್ನು ಗುರುತಿಸಲಾಗಿದೆ. ಸ್ಥಳನಾಮದ ಮೂಲಕ ಹಸ್ತಪ್ರತಿಶಾಸ್ತ್ರ ತನ್ನ ವಿಸ್ತಾರತೆಯನ್ನು ಎಲ್ಲಿಯವರೆಗೂ ಪಡೆದುಕೊಂಡಿತ್ತೆಂಬುದನ್ನು ಹಾಗೂ ಲಿಪಿಕಾರರ ಸ್ಥಳವನ್ನು ಗುರುತಿಸಬಹುದಾಗಿದೆ.

ಧಾರ್ಮಿಕತೆ ಎಂಬ ಉಪ-ಅಧ್ಯಾಯದಲ್ಲಿ ಲಿಪಿಕಾರರ ಇಷ್ಟದೈವ, ಆರಾಧ್ಯದೈವವನ್ನು ಸ್ತುತಿಸುತ್ತಿರುವುದನ್ನು, ಗ್ರಂಥವನ್ನು ರಚಿಸುವಾಗ ಕಾಲ, ಗಳಿಗೆ, ದಿವಸವನ್ನು ನೋಡುತ್ತಿದುದ್ದು ಇದರಿಂದ ಅವರ ಧಾರ್ಮಿಕ ನಂಬಿಕೆಗಳನ್ನು, ಅವರ ಮಠಗಳು, ಬಸದಿಗಳ ಹೆಸರುಗಳ ಮೂಲಕವಾಗಿ ಸಾಂಸ್ಕೃತಿಕ ಅಂಶಗಳನ್ನು ಚರ್ಚಿಸಲಾಗುತ್ತಿದೆ.

ಇತಿಹಾಸ ಎಂಬ ಉಪ-ಅಧ್ಯಾಯದಲ್ಲಿ ಇತಿಹಾಸಕ್ಕೆ ಸಂಬಂಧಿಸಿದ ಕೈಫಿಯತ್ತು, ನಿರೂಪ, ಸನ್ನದು, ಬಖೈರುಗಳು ಈ ಗ್ರಂಥದಲ್ಲಿ ಸಿಗದಿದ್ದರೂ ಇತಿಹಾಸಕ್ಕೆ ಸಂಬಂಧಿಸಿದಂತೆ ವಿವಿಧ ವೃತ್ತಿಗಳಲ್ಲಿ ತೊಡಗಿದ್ದ ವ್ಯಕ್ತಿಗಳು ಗ್ರಂಥ ರಚನೆ ಮಾಡಿರುವುದನ್ನು ಹಾಗೂ ಅವರ ಆಳ್ವಿಕೆ ನಡೆಸುತ್ತಿದ್ದ ಆಡಳಿತ ವಿಭಾಗಗಳನ್ನು ಹಾಗೂ ಇತಿಹಾಸಕ್ಕೆ ಸಂಬಂಧಿಸಿದ ಐತಿಹಾಸಿಕ ದೈವಗಳನ್ನು ಕುರಿತು ಚರ್ಚಿಸಲಾಗಿದೆ.

ಸಾಹಿತ್ಯಕತೆ ಎಂಬ ಉಪ-ಅಧ್ಯಾಯದಲ್ಲಿ ಈ ಗ್ರಂಥದಲ್ಲಿ ಶಿವಣ್ಣನವರು ಕವಿ, ಕೃತಿಗಳನ್ನು ಅಕಾರಾದಿಯಾಗಿ ಕೊಟ್ಟಿರುವುದನ್ನು ಪ್ರಾಚೀನ ಕವಿಗಳನ್ನು ಹೆಸರಿಸಿರುವುದನ್ನು ಹಾಗೂ ಆ ಕವಿಗಳ ಕೃತಿಗಳು ಸಾಹಿತ್ಯ ಪ್ರಕಾರಕ್ಕೆ ಸಂಬಂಧಿಸಿದ ವಚನ, ರಗಳೆ, ಷಟ್ಪದಿ, ಸಾಂಗತ್ಯ, ತ್ರಿಪದಿ ಇನ್ನು

ಮುಂತಾದ ಸಾಹಿತ್ಯಕ್ಕೆ ಸಂಬಂಧಿಸಿದ ಕೃತಿಗಳಾಗಿದ್ದು ಇವುಗಳನ್ನು ಪ್ರತ್ಯೇಕವಾಗಿ ಗುರುತಿಸಲಾಗಿದ್ದು ಅದರ ಮಹತ್ವವನ್ನು ಚರ್ಚಿಸಲಾಗಿದೆ.

ಹೀಗೆ ಎಸ್.ಶಿವಣ್ಣನವರ 'ವೀರಶೈವ ಹಸ್ತಪ್ರತಿ ಪುಷ್ಪಿಕೆಗಳು' ಎಂಬ ಗ್ರಂಥವು ಒಂದು ಸಮಗ್ರ ಸಾಹಿತ್ಯ ಎಂತಲೇ ಹೇಳಬಹುದು. ಇವರು ಅಪ್ರಸಿದ್ಧ ಕವಿಗಳನ್ನು, ಕೃತಿಗಳನ್ನು ಹೆಸರಿಸಿರುವುದು ಒಂದು ಗಮನಾರ್ಹವಾದ ವಿಷಯವಾಗಿದೆ. ಅವರ ಬಗೆಗಿನ ಅಧ್ಯಯನಗಳು ಮುಂದೆ ಪ್ರಕಟವಾಗಬೇಕಾಗಿದೆ. ಈ ಕೃತಿಗಳಿಂದ ಕವಿಗಳ ಕಾಲವನ್ನು ಸಹ ತಿಳಿಯಬಹುದು. ಪುಷ್ಪಿಕೆಗಳ ಮೂಲಕ ಅಂದರೆ ಆದಿ, ಅಂತ್ಯದ ಮೂಲಕ ಈ ಮೇಲಿನ ಎಲ್ಲ ಅಂಶಗಳನ್ನು ಸಹ ಚರ್ಚಿಸಲಾಗಿದೆ.

ಒಟ್ಟಾರೆಯಾಗಿ ಪುಷ್ಪಿಕೆಗಳ ಮೂಲಕವಾಗಿ ಗ್ರಂಥದಾನ, ಲಿಪಿಕಾರರು, ಭಾಷೆ, ಸಾಹಿತ್ಯ, ಧರ್ಮ, ಇತಿಹಾಸ ಈ ಅಂಶಗಳ ಮೂಲಕ ಸಾಂಸ್ಕೃತಿಕ ಅಂಶಗಳನ್ನು ಹೊರತೆಗೆಯುವ ಪ್ರಯತ್ನವನ್ನು ಈ ಪ್ರಬಂಧದಲ್ಲಿ ಚರ್ಚಿಸಲಾಗಿದೆ.

## ಗ್ರಂಥ ಋಣ


೧. ಡಾ.ಎಸ್.ಎಸ್.ಅಂಗಡಿ — ಕನ್ನಡ ಗ್ರಂಥಸಂಪಾದನೆ ಬಂಧ ವಿನ್ಯಾಸ
ಕನ್ನಡ ಸಾಹಿತ್ಯ ಪರಿಷತ್ತು
ಬೆಂಗಳೂರು, ೨೦೦೭

೨. ಡಾ.ಎಸ್.ಎಸ್.ಅಂಗಡಿ — ಕನ್ನಡ ಹಸ್ತಪ್ರತಿ ಭಾಷಿಕ ವಿವೇಚನೆ
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,
ಹಂಪಿ, ೨೦೦೬

೩. ವೈ.ಸಿ.ಭಾನುಮತಿ — ಗ್ರಂಥ ಸಂಪಾದನೆ ಕೆಲವು ಅಧ್ಯಯನ
ಕೇಶವ ಪ್ರಕಾಶನ,
ಮೈಸೂರು. ೧೯೯೭

೪. ಡಾ.ನಾ.ಗೀತಾಚಾರ್ಯ — ಹಸ್ತಪ್ರತಿ ಅಧ್ಯಯನಶಾಸ್ತ್ರ
ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ
ಬೆಂಗಳೂರು, ೨೦೦೯

೫. ಡಾ.ನಾ.ಗೀತಾಚಾರ್ಯ — ಹಸ್ತಪ್ರತಿಶಾಸ್ತ್ರ ವಿವೇಚನೆ
ಸ್ನೇಹನಿಧಿ ಬಳಗ
ಬೆಂಗಳೂರು

೬. ಡಾ.ಎಫ್.ಟಿ.ಹಳ್ಳಿಕೇರಿ — ಹಸ್ತಪ್ರತಿ ಅಧ್ಯಯನ – ಸಂ–೨
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ
ಹಂಪಿ, ೨೦೦೫

೭. ಡಾ.ಎಫ್.ಟಿ.ಹಳ್ಳಿಕೇರಿ, ಡಾ.ಕೆ.ರವೀಂದ್ರನಾಥ್ — ಸಿರಿಸಂಪದ
(ಡಾ.ಬಿ.ವ್ಹಿ.ಶಿರೂರ ಅಭಿನಂದನಾ ಗ್ರಂಥ)
ಯಲಬುರ್ಗಾ ಪ್ರಕಾಶನ
೨೦೦೨

೮. ಡಾ.ಎಫ್.ಟಿ.ಹಳ್ಳಿಕೇರಿ — ಹಸ್ತಪ್ರತಿ ವ್ಯಾಸಂಗ
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ
ಹಂಪಿ, ೨೦೦೮

೯. ಡಾ.ಎಂ.ಎಂ.ಕಲ್ಬುರ್ಗಿ — ಕನ್ನಡ ಹಸ್ತಪ್ರತಿಶಾಸ್ತ್ರ, ಸ್ನೇಹ ಪ್ರಕಾಶನ, ಬೆಂಗಳೂರು, ೧೯೯೩

೧೦. ಡಿ.ಎಲ್.ನರಸಿಂಹಾಚಾರ್ — ಗ್ರಂಥಸಂಪಾದನೆ, ಶಾರದಾ ಮಂದಿರ, ಮೈಸೂರು, ೧೯೭೬

೧೧. ಎಸ್.ಶಿವಣ್ಣ — ವೀರಶೈವ ಹಸ್ತಪ್ರತಿ ಪುಷ್ಪಿಕೆಗಳು ಸಂ-೧, ವೀರಶೈವ ಅಧ್ಯಯನ ಸಂಸ್ಥೆ, ಗದಗ, ೧೯೯೪

೧೨. ಎಸ್.ಶಿವಣ್ಣ — ಬಿಡುಮುತ್ತುಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೪

೧೩. ಪ್ರೊ.ಎಂ.ವಿ.ಸೀತಾರಾಮಯ್ಯ, ಡಾ.ಎಂ.ಚಿದಾನಂದಮೂರ್ತಿ — ಹಸ್ತಪ್ರತಿಶಾಸ್ತ್ರ, ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ, ಬೆಂಗಳೂರು, ೧೯೮೩

೧೪. ಬಿ.ಎಸ್.ಸಣ್ಣಯ್ಯ — ಹಸ್ತಪ್ರತಿಶಾಸ್ತ್ರ ಪರಿಚಯ, ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ, ಬೆಂಗಳೂರು, ೧೯೯೨

೧೫. ಡಾ.ವೀರೇಶ್ ಬಡಿಗೇರ, ಎಸ್.ಆರ್.ಚೆನ್ನವೀರಪ್ಪ — ಹಸ್ತಪ್ರತಿ ಅಧ್ಯಯನದ ಹೊಸ ಸಾಧ್ಯತೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೩